ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಡಿಸೆಂಬರ್ 12, 2007 ರೂ.10/-

'ಮುಖ್ಯಮಂತ್ರಿ ಐ ಲವ್ ಯೂ'ಗೆ ತಿರುಗೇಟು

ಸಿಎಂ ಯಡ್ಡಪ್ಪನ ಪ್ರೇಮ ಪ್ರಸಂಗ!



ಬಣಜಿಗ ಲಿಂಗಾಯತರಿಗೆ ಕುರ್ಚಿ ಪಂಚಮಸಾಲಿಗರಿಗೆ ಚೊಂಬು

ಗದಗ: ಕಿಡ್ನ್ಯಾಪ್ ಮಾಡಿದ ಮುತಾಲಿಕ್ ಶಿಷ್ಯ!

ಮೈಸೂರು ಭೂಗತ ಲೋಕಕ್ಕೆ ಬಂತು ಬಂದೂಕು

ಉಡುಪಿ: ಸೌಹಾರ್ದ ಸಾಹಿತ್ಯ ಸಮ್ಮೇಳನ ಯಾಕೆ?



ಯಡ್ಡಿ ವಿರುದ್ಧ ಚೆಡ್ಡಿ ದಂಗೆ

ಅಸ್ಸಾಮಿನ ಆದಿವಾಸಿಗಳು ಮತ್ತು ಭಾರತದ ನಾಗರಿಕರು!



ಅಸ್ಸಾಮಿನಲ್ಲಿ ಇತ್ತೀಚೆಗೆ ಆದಿವಾಸಿಗಳು ನಡೆಸಿದ ಪ್ರತಿಭಟನೆಯ ಮೇಲೆ ಅಲ್ಲಿನ ಕುಲೀನ ನಾಗರಿಕ ಸಮಾಜ ಮತ್ತು ಪ್ರಭುತ್ವ ನಡೆಸಿದ ದಾಳಿ ನಮ್ಮ ನಾಗರಿಕತೆಯಲ್ಲಿರುವ ಪಾಶವೀ ಪ್ರವೃತ್ತಿಯನ್ನು ಬಯಲು ಮಾಡಿದೆ. ಅಲ್ಲದೆ ಅರವತ್ತು ವರ್ಷಗಳ ಪ್ರಜಾಸತ್ತೆಯ ನಂತರವೂ ನಮ್ಮ ಪ್ರಭುತ್ವ ಸಮಾಜದ ವಂಚಿತ ಮತ್ತು ದಮನಿತ ಸಮುದಾಯದ ಬಗ್ಗೆ ಆಳದಲ್ಲಿ ಅಪಾರ ಅಸಹನೆ ಮತ್ತು ತಿರಸ್ಕಾರವನ್ನು ಇಟ್ಟುಕೊಂಡಿರುವುದನ್ನೂ ಸಹ ಅತ್ಯಂತ ಕ್ರೂರವಾಗಿ ಬೆಳಕಿಗೆ ತಂದಿದೆ.

ಇಷ್ಟಕ್ಕೂ ಆ ಆದಿವಾಸಿಗಳು ಯಾರು? ಮತ್ತು ಏತಕ್ಕೆ ಪ್ರತಿಭಟನೆ ನಡೆಸುತ್ತಿದ್ದರು? ಅದರ ಬಗ್ಗೆ ನಾಗರಿಕ ಸಮಾಜದ ಈ ಕುಲೀನರಿಗೆ ಮತ್ತು ಪ್ರಭುತ್ವಕ್ಕೆ ಏಕಿಷ್ಟು ಆಳವಾದ ಅಸಹನೆ? ಮಾಧ್ಯಮಗಳಲ್ಲಿ ವರದಿಯಾದಂತೆ ಆ ಆದಿವಾಸಿಗಳು ಅನುಮತಿಯಿಲ್ಲದೆ ಮೆರವಣಿಗೆ ತೆಗೆದು ಅಂದು ರಾಜಧಾನಿಯ ನಾಗರಿಕ ಜೀವನವನ್ನು ಅಸ್ತವ್ಯಸ್ತಗೊಳಿಸಿದರು. ಅವರ ಜೊತೆಗಿದ್ದ ಕೆಲವರು ಕೆಲವು ಅಂಗಡಿ ಮುಂಗಟ್ಟುಗಳ ಮೇಲೂ ದಾಳಿ ನಡೆಸಿದರು. ಇದರಿಂದ ಕುಪಿತರಾದ ಸ್ಥಳೀಯ ನಾಗರಿಕರು ಕೃದ್ಧರಾಗಿ ಆದಿವಾಸಿಗಳ ಮೇಲೆ ಮರುದಾಳಿ ನಡೆಸಿದರು ಎಂಬ ಅಭಿಪ್ರಾಯ ಮೂಡುತ್ತದೆ. ಆದರೆ ಅಸ್ಸಾಮಿನ ರಾಜಧಾನಿಯ ಕುಲೀನರು ಆದಿವಾಸಿಗಳ ಮೇಲೆ ನಡೆಸಿದ ದಾಳಿಯು ಯಾವ ಸ್ವರೂಪದ್ದು? ಈ ದಾಳಿ ನಡೆಯುತ್ತಿರುವಾಗ ಪ್ರಭುತ್ವ ಏನು ಮಾಡುತ್ತಿತ್ತು?

ಮರುದಿನ ಪತ್ರಿಕೆಗಳಲ್ಲಿ ಅರೆಬರೆ ವರದಿಯಾಗಿರುವುದನ್ನೇ ನೋಡಿದರೆ ಈ ರಾಜಧಾನಿಯ ನಾಗರಿಕರು ಆದಿವಾಸಿಗಳನ್ನು ಕಂಡಕಂಡಲ್ಲಿ ಬಡಿಗೆ ತಗೆದುಕೊಂಡು ಹೊಡೆದಿದ್ದಾರೆ. ಬಡಾವಣೆಯ ಓಣಿಗಳಲ್ಲಿ ಸೆರೆಸಿಕ್ಕ ಬೆರಳೆಣಿಕೆಯಷ್ಟು ಆದಿವಾಸಿಗಳನ್ನು ಸುತ್ತುವರೆದು ಚಚ್ಚಿ ಕೊಂದಿದ್ದಾರೆ. ಅಧಿಕೃತ ವರದಿಯ ಪ್ರಕಾರ ಇಬ್ಬರು ಆದಿವಾಸಿಗಳು ಸತ್ತು ಕನಿಷ್ಟ 300 ಜನಕ್ಕೆ ಗಾಯವಾಗಿದೆ.

ಇವೆಲ್ಲಕ್ಕಿಂತಲೂ ಹೀನಾಯವಾದ ವಿಷಯವೆಂದರೆ 16 ವರ್ಷದ ಆದಿವಾಸಿ ವಿದ್ಯಾರ್ಥಿನಿಯೊಬ್ಬಳನ್ನು ಈ ನಾಗರಿಕರು ಬೆತ್ತಲೆ ಮಾಡಿ ಬೀದಿಬೀದಿಗಳಲ್ಲಿ ಓಡಾಡಿಸಿ ಮಾರಣಾಂತಿಕವಾಗಿ ಥಳಿಸಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ರಾಜಧಾನಿಯ ಕುಲೀನ ಉದ್ಯಮಿಯೊಬ್ಬ ಆದಿವಾಸಿ ಹೆಂಗಸೊಬ್ಬಳನ್ನು ಬೆತ್ತಲೆ ಮಾಡಿ ಅವಳ ಮರ್ಮಾಂಗಕ್ಕೆ ಒದ್ದು ಒದ್ದು ಓಡಿಸಿದ್ದಾನೆ. ಈ ಚಿತ್ರವೊಂದನ್ನು ಮರುದಿನ ಸ್ಥಳೀಯ ಪತ್ರಿಕೆಯೊಂದು ಮತ್ತು ನಂತರ ದೇಶದ ಇತರ ಎಲ್ಲಾ ಪತ್ರಿಕೆಗಳೂ ಪ್ರಕಟಿಸಿದವು. ಇವೆಲ್ಲವೂ ನಡೆಯುತ್ತಿರುವಾಗ ಪೊಲೀಸರು ದಿವ್ಯ ಮೌನ ವಹಿಸಿ ನಾಗರಿಕರು ಆದಿವಾಸಿಗಳ ಮೇಲೆ ನಡೆಸಿದ ದೌರ್ಜನ್ಯಕ್ಕೆ ಕುಮ್ಮಕ್ಕು ನೀಡಿದ್ದಾರೆ.

ಆದಿವಾಸಿಗಳ ಬಗ್ಗೆ ರಾಜಧಾನಿಯ ಕುಲೀನ ನಾಗರಿಕರು ಆದಿವಾಸಿಗಳ ಮೇಲೆ ನಡೆಸಿದ ಈ ಬಗೆಯ ಕ್ರೌರ್ಯದ ಹಿಂದಿರುವ ಅಸಹನೆಯ ಮೂಲವೇನು? ಇಷ್ಟಕ್ಕೂ ಈ ಆದಿವಾಸಿಗಳಿಗೆ ಅಸ್ಸಾಮಿನ ನಾಗರಿಕ ಸಮಾಜದಲ್ಲಿ ಸಿಕ್ಕಿರುವ ಸ್ಥಾನಮಾನವೇನು?



ಮೊನ್ನೆ ಅಸ್ಸಾಮಿನ ಬೀದಿಗಳಲ್ಲಿ ದೌರ್ಜನ್ಯಕ್ಕೆ ತುತ್ತಾದ ಆದಿವಾಸಿಗಳನ್ನು ಅಸ್ಸಾಮಿನ ಸರ್ಕಾರ ಮತ್ತು ಸಮಾಜ ಟೀ ಟ್ರೈಬ್ಸ್ ಎಂದು ಕರೆಯುತ್ತಾರೆ. 19ನೇ ಶತಮಾನದಲ್ಲಿ ಆಗತಾನೆ ಅಸ್ಸಾಮಿನಲ್ಲಿ ಬ್ರಿಟಿಷ್ ಮಹಾಹತುಶಾಹಿಗಳು ಪ್ರಾರಂಭಿಸಿದ್ದ ಟಿ ತೋಟಗಳಲ್ಲಿ ಅಗ್ಗದ ಆದರೆ ತ್ರಾಸದಾಯಕ ಕೂಲಿ ಕೆಲಸ ಮಾಡಲು ಇಂದಿನ ಬಿಹಾರ, ಜಾರ್ಖಂಡ್, ಮಧ್ಯಪ್ರದೇಶ ಪ್ರಾಂತ್ಯಗಳಿಂದ ಲಕ್ಷಾಂತರ ಆದಿವಾಸಿಗಳನ್ನು ಬ್ರಿಟಿಷರು ಅಸ್ಸಾಮಿಗೆ ಬಲವಂತವಾಗಿ ಎಳೆದುಕೊಂಡು ಹೋದರು. ಅವರಲ್ಲಿ ಬಹುಪಾಲು ಜನ ಆದಿವಾಸಿ ಪಂಗಡಗಳಾದ ಮುಂಡಾಗಳು, ಒರಾನ್, ಗೊಂಡರು ಮತ್ತು ಸಂತಾಲ್ ಪಂಗಡಗಳಿಗೆ ಸೇರಿದವರೇ ಆಗಿದ್ದರು. ಅಂದರೆ ಅವರೆಲ್ಲರೂ ಆದಿವಾಸಿಗಳೇ ಆಗಿದ್ದರು ಮತ್ತು ಆಧುನಿಕ ಮಹಾಹತುಶಾಹಿ ನಾಗರಿಕತೆ ಅವರನ್ನು ಕೇವಲ ಅಗ್ಗದ ಬೆಲೆಯಲ್ಲಿ ಕಡುಕಷ್ಟದ ಕೆಲಸ ಮಾಡುವ ಕೂಲಿಗಳನ್ನಾಗಿ ಮಾತ್ರ ಪರಿಗಣಿಸಿತು.

1947ರ ನಂತರವೂ ಈ ಪರಿಸ್ಥಿತಿ ಒಂದಿಷ್ಟೂ ಬದಲಾಗಲಿಲ್ಲ, ಮಹಾಹತು ಟೀ ತೋಟಗಳ ಬದಲಾಗಿ ಟಾಟಾ ಮುಂತಾದ ಆಧುನಿಕ ಭಾರತದ ಪ್ರಗತಿಯ ಸಂಕೇತವಾದಂಥವರ ತೋಟಗಳಾಗಿ ಬದಲಾದವು. ಆದರೆ ಸ್ವತಂತ್ರ ಭಾರತದ ಪ್ರಜಾತಾಂತ್ರಿಕ ವ್ಯವಸ್ಥೆಯು ಈ ಟೀ ಟ್ರೈಬ್ಸ್‌ಗಳ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯನ್ನೇನೂ ಬದಲಿಸಲಿಲ್ಲ, ಹಾಗೆ ನೋಡಿದರೆ ಸ್ವತಂತ್ರ ಭಾರತದ ಪ್ರಗತಿ ಪ್ರಸ್ಥಾನದಲ್ಲಿ ಇಡೀ ಅಸ್ಸಾಮಿಗೆ ಸಿಕ್ಕಿದ್ದೇ ಹಿಂದಿನ ಸೀಟು.

ಆದರೆ ಇದರ ವಿರುದ್ಧ ಅಸ್ಸಾಮಿನ ಪ್ರಬಲ ಆದಿವಾಸಿ ರಾಷ್ಟ್ರೀಯತೆಗಳಾದ ಅಹೋಮರು ಮತ್ತು ಬೋಡೊಗಳು 1924ರ ಸೈಮನ್ ಕಮಿಷನ್ನಿನ ಕಾಲದಿಂದಲೂ ಹೋರಾಟ ನಡೆಸುತ್ತಿದ್ದರು. 1947 ರಲ್ಲಿ ಭಾರತ ವಿಭಜನೆಯಾಗಿ ಬಾಂಗ್ಲಾ ದೇಶದ ರಚನೆಯಾದರೂ ಗಡಿಗಳು ದುರ್ಬಲವಾಗಿಯೇ ಇದ್ದವು. ಆದ್ದರಿಂದ ಬಾಂಗ್ಲಾ ದೇಶದಿಂದ ಲಕ್ಷಾಂತರ ಸಂಖ್ಯೆಯಲ್ಲಿ — ಪ್ರಧಾನವಾಗಿ ಮುಸ್ಲಿಂ ಸಮುದಾಯಕ್ಕೆ ಸೇರಿದ — ರೈತರು ಅಸ್ಸಾಮಿಗೆ ವಲಸೆ ಬಂದರು. 1971ರಲ್ಲಿ ಬಾಂಗ್ಲಾ ದೇಶ ರಚನೆಯಾದ ನಂತರವೂ ಇದು ಮುಂದುವರೆಯಿತು. ಕೃಷಿಯಲ್ಲಿ ಮತ್ತು ವ್ಯಾಪಾರದಲ್ಲಿ ಸ್ಥಳೀಯ ಆದಿವಾಸಿಗಳಿಗಿಂತ ಮತ್ತು ಅಹೋಮ್ ಮತ್ತು ಬೋಡೊ ಜನರಿಗಿಂತ ಮುಂದಿದ್ದ ಈ ಬಾಂಗ್ಲಾ ದೇಶದ ರೈತರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುನ್ನಡೆ ಸಾಧಿಸಿದರು. ಇದು ಆಗತಾನೆ ರಾಜಕೀಯ ಪ್ರಜ್ಞೆ ಮೂಡುತ್ತಿದ್ದ ಸ್ಥಳೀಯರಲ್ಲಿ ಒಂದು ಬಗೆಯ ಕೀಳರಿಮೆಯನ್ನೂ ಮತ್ತು ಅಸಹನೆಯನ್ನೂ ಅಸ್ಸಾಮೀ ಸಮಾಜದಲ್ಲಿ ಮೂಡಿಸಿತ್ತು.

ಈ ವಲಸೆ ಬಂದ ರೈತರು ಪ್ರಧಾನವಾಗಿ ಮುಸ್ಲಿಮರಾಗಿದ್ದರಿಂದ ಇದನ್ನು ತನ್ನ ಕೋಮುವಾದಿ ರಾಜಕಾರಣಕ್ಕೆ ಬಳಸಿಕೊಳ್ಳಲು ಸಂಘಪರಿವಾರವೂ ಸಹ 80ರ ದಶಕದಿಂದ ಪ್ರಯತ್ನಿಸುತ್ತಿತ್ತು. ಇದರ ಪರಿಣಾಮವೇ 1983ರಲ್ಲಿ

ಚಾರ್ವಾಕ

ಶಿವಸುಂದರ್

ನೆಲ್ಲಿಯಲ್ಲಿ ನಡೆದ ಮುಸ್ಲಿಮರ ಮಾರಣಹೋಮ. ಅದರ ನಂತರ 1985ರಲ್ಲಿ ಬಾಂಗ್ಲಾ ದೇಶದಿಂದ ವಲಸೆ ಬಂದವರನ್ನು ಹಿಂದಕ್ಕೆ ಕಳಿಸಬೇಕೆಂಬ ಚಳವಳಿ ಇಡೀ ಅಸ್ಸಾಮನ್ನು ವ್ಯಾಪಿಸಿದ್ದು; ಅದೇ ಸಮಯದಲ್ಲಿ ಭಾರತದಿಂದ ಸ್ವಾಯತ್ತತೆ ಪಡೆಯಲು ಉಲ್ಫಾದ ಪ್ರಬಲ ಹೋರಾಟ ನಡೆದದ್ದು; ನಂತರ ಐತಿಹಾಸಿಕ ಅಸ್ಸಾಂ ಒಪ್ಪಂದ ಆಗಿ ಅಸ್ಸಾಂ ಗಣಪರಿಷತ್ತು ಅಧಿಕಾರಕ್ಕೆ ಬಂದದ್ದು....ಇವೆಲ್ಲವೂ ಇತಿಹಾಸ.

ಈ ಹೋರಾಟದ ಪ್ರಕ್ರಿಯೆಯಲ್ಲೇ ಈವರೆಗೆ ಜಾಗೃತಿ ಪಡೆಯದಿದ್ದ ಹಲವಾರು ಆದಿವಾಸಿ ಗುಂಪುಗಳು ತಮಗಾಗುತ್ತಿರುವ ಅನ್ಯಾಯದ ಬಗ್ಗೆಯೂ ಪ್ರತಿಭಟಿಸಲು ಪ್ರಾರಂಭಿಸಿದವು. ಈ ಎಲ್ಲಾ ಆದಿವಾಸಿ ಸಮುದಾಯಗಳ ನಾಯಕತ್ವವನ್ನು ಆ ಸಮುದಾಯದ ವಿದ್ಯಾರ್ಥಿಗಳೇ ವಹಿಸುತ್ತಿದ್ದರು. ಏಕೆಂದರೆ ಆ ಸಮುದಾಯದಲ್ಲಿ ಇಂದಿನ ಆಧುನಿಕ ಪರಿಭಾಷೆಯನ್ನು ಸ್ವಲ್ಪಮಟ್ಟಿಗಾದರೂ ಅರ್ಥ ಮಾಡಿಕೊಳ್ಳಬಲ್ಲವರು ವಿದ್ಯಾರ್ಥಿಗಳೇ ಆಗಿರುತ್ತಿದ್ದರು. ಆ ಎಲ್ಲಾ ಆದಿವಾಸಿ ವಿದ್ಯಾರ್ಥಿಗಳ ಬೇಡಿಕೆ ತಮಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಹೆಚ್ಚಿನ ಅವಕಾಶಗಳನ್ನು ಪಡೆದುಕೊಳ್ಳಲು ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಕೇಳುವುದೇ ಆಗಿರುತ್ತಿತ್ತು,

ಆದರೆ ಇವೆಲ್ಲವೂ 80-90ರ ದಶಕದಲ್ಲಿ ನಡೆದ ಪ್ರಕ್ರಿಯೆಗಳು. ಅಂದರೆ ಈ ವೇಳೆಗೆ ಸರ್ಕಾರ ಎಲ್ಲಾ ಸಾಮಾಜಿಕ ಕಲ್ಯಾಣ ಜವಾಬ್ದಾರಿಗಳಿಂದ ಹಿಂದೆ ಸರಿಯುತ್ತಾ ಸರ್ಕಾರಿ ಅವಕಾಶಗಳೇ ಕುಸಿಯುತ್ತಿದ್ದ ಸಂದರ್ಭ. ಹೀಗಾಗಿ ಈಗಾಗಲೇ ಈ ವಿಕೃತ ಅಭಿವೃದ್ಧಿ ಹುಟ್ಟುಹಾಕಿದ್ದ ಆತ್ಮಘಾತುಕ ಪೈಪೋಟಿಯಲ್ಲಿ ಈಗಾಗಲೇ ಮುಂದಿದ್ದ, ಸ್ವಲ್ಪಮಟ್ಟಿಗೆ ಲಾಭ ಪಡೆದಿದ್ದ ಅಹೋಮ್ ಮತ್ತು ಬೋಡೊ ಸಮುದಾಯಗಳು ತಮ್ಮ ತಟ್ಟೆಯಲ್ಲಿ ಪಾಲು ಕಸಿಯಲು ಬಂದ ಇತರ ಆದಿವಾಸಿಗಳನ್ನು ಅಸಹನೆಯಿಂದ ಕಾಣಲು ಪ್ರಾರಂಭಿಸಿದರು. ಎಲ್ಲರೂ ಒಟ್ಟುಸೇರಿ ಕಡಿಮೆಯಾಗುತ್ತಿದ್ದ ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಒಟ್ಟಾಗಿ ಹೋರಾಡುತ್ತಾ ಅದರ ಫಲವನ್ನು ಸಮಾನವಾಗಿ ಹಂಚಿಕೊಳ್ಳಲು ಮುಂದಾಗುವ ಬದಲು ಕುಸಿಯುತ್ತಿರುವ ಅವಕಾಶಗಳನ್ನು ಇತರರಿಗೆ ನಿರಾಕರಿಸುವ ಪಟ್ಟಭದ್ರ ಮನಸ್ಥಿತಿಯಲ್ಲಿ ಮತ್ತು ರಾಜಕಾರಣದಲ್ಲಿ ಅಸ್ಸಾಮ್ ಸಿಲುಕಿಕೊಂಡಿತು.

ಅದೇ ಸಮಯದಲ್ಲಿ ಭಾರತದಲ್ಲಿ ಜಾಗತೀಕರಣ ಮತ್ತು ಕೋಮುವಾದೀಕರಣದ ಪ್ರಕ್ರಿಯೆಗಳು ತೀವ್ರಗತಿಯಲ್ಲಿ ಪ್ರಾರಂಭವಾಗಿತ್ತು, ಜಾಗತೀಕರಣದ ಸಾರಾಂಶವೇ ಪ್ರಭುತ್ವವು ಜನಕಲ್ಯಾಣ ಯೋಜನೆಗಳನ್ನು ಹಿಂತೆಗೆದುಕೊಂಡು ಬಲವಿದ್ದವನು ಮಾತ್ರ ಬದುಕಬೇಕೆಂಬ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯನ್ನು ಸೃಷ್ಟಿಸುವುದಾದರೆ, ಸಂಘಪರಿವಾರದ ಕೋಮುವಾದವು ಬದುಕಿನ ಭರವಸೆಯು ಕುಸಿಯುತ್ತಿರುವ ಸನ್ನಿವೇಶದಲ್ಲಿ ಬಲಿಷ್ಠರ ವಿರುದ್ಧ ಇರುವ ಜನರ ಆಕ್ರೋಶವನ್ನು ಬಲಹೀನರ ವಿರುದ್ಧ ಅಸಹನೆ ಮತ್ತು ಕ್ರೌರ್ಯವನ್ನಾಗಿ ಪರಿವರ್ತಿಸುವುದು. ಈ ಎರಡು ಪ್ರಕ್ರಿಯೆಗಳು ಈಗಾಗಲೇ ವಂಚಿತವಾಗಿದ್ದ ಅಸ್ಸಾಮನ್ನು ಇನ್ನಷ್ಟು ಜರ್ಝರಿತಗೊಳಿಸುತ್ತಿವೆ.

ಅಸ್ಸಾಮಿನ ಈ ಹತಾಶ ಪರಿಸ್ಥಿತಿಯ ಕೆಸರಲ್ಲಿ ಕಳೆದ ಒಂದು ದಶಕದಿಂದ ಬಿಜೆಪಿಯ ಕಮಲ ಅರಳಲು ಪ್ರಾರಂಭಿಸಿದೆ. ಅದಕ್ಕೆ ತಾವು ಶ್ರೇಷ್ಠರೆಂದುಕೊಳ್ಳುವ ಬಿಜೆಪಿಯ ಪಾರಂಪರಿಕ ಬೆಂಬಲ ನೆಲೆಯಾದ ಬ್ರಾಹ್ಮಣ, ಬನಿಯ, ಮಾರ್ವಾಡಿ, ಜೈನ ಸಮುದಾಯದ ವ್ಯವಹಾರೋದ್ಯಮಿಗಳು, ನೌಕರರು, ವ್ಯಾಪಾರಸ್ಥರು ಕಳೆದ ಒಂದು ದಶಕದಲ್ಲಿ ದೊಡ್ಡ ಸಂಖ್ಯೆಯಲ್ಲಿ ಅಸ್ಸಾಮಿಗೆ ವಲಸೆ ಬಂದು ನೆಲೆಸಿದ್ದಾರೆ ಹಾಗೂ ಈವರೆಗೆ ಅಸ್ಸಾಮ್ ಸಮಾಜದಲ್ಲಿ ದೊಡ್ಡ ಮಟ್ಟದಲ್ಲಿ ಕಾಣಿಸಿಕೊಳ್ಳದಿದ್ದ ಬ್ರಾಹ್ಮಣೀಯ ಶ್ರೇಷ್ಠ-ಕನಿಷ್ಠ ಪ್ರಮಾಣಗಳನ್ನು ಸಾಮಾಜಿಕ ಸ್ತರದಲ್ಲಿ ಆಚರಿಸಲು ಪ್ರಾರಂಭಿಸಿದ್ದಾರೆ. ಅಸ್ಸಾಮಿನ್ ಪ್ರಬಲ ಸಮುದಾಯದ ಮೇಲ್ವರ್ಗದ ಜನ ಸಹ ಈ ಬ್ರಾಹ್ಮಣೀಯ ರಾಜಕೀಯದ ಜೊತೆ ಸೇರಿಕೊಂಡು ಅಸ್ಸಾಮಿನಲ್ಲಿ ಈವರೆಗೆ ಆದಿವಾಸಿ ಅಥವಾ ಇತರ ದುರ್ಬಲ ವರ್ಗಗಳ ಬಗೆಗೆ ಇಲ್ಲದಿದ್ದ ಅಸಹನೆಯನ್ನು ಹುಟ್ಟುಹಾಕಲು ಕಾರಣರಾಗಿದ್ದಾರೆ.

ಇಂಥ ಸಾಮಾಜಿಕ ಮತ್ತು ರಾಜಕೀಯ ಸಂದರ್ಭದಲ್ಲಿ ಅಸ್ಸಾಮಿನ ಟೀ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಟೀ ಟ್ರೈಬ್ಸ್‌ಗಳು ತಮ್ಮ ಸಮುದಾಯದ ಉನ್ನತಿಗೆ ಚಳವಳಿ ಕಟ್ಟಲು ಪ್ರಾರಂಭಿಸಿದ್ದಾರೆ. ಮೂಲತಃ ಆದಿವಾಸಿಗಳೇ ಆಗಿರುವ ಈ ಆದಿವಾಸಿ ಸಮುದಾಯವನ್ನು ಮಾತ್ರ ಕೇಂದ್ರ ಸರ್ಕಾರ ಪರಿಶಿಷ್ಟ ಪಂಗಡವನ್ನಾಗಿ (ಎಸ್ಟಿ) ಪರಿಗಣಿಸದೆ ಇತರ ಹಿಂದುಳಿದ ಜಾತಿಗಳಲ್ಲಿ(ಒಬಿಸಿ) ಒಂದೆಂದು ಪರಿಗಣಿಸುತ್ತದೆ. ಎಸ್ಟಿ ಎಂದು ಪರಿಗಣಿಸಲ್ಪಟ್ಟರೆ ಸಿಗುವ ಅವಕಾಶಗಳು ಹೆಚ್ಚು, ಒಬಿಸಿ ಎಂಬ ಪರಿಗಣನೆ ಅಬ್ಬಬ್ಬಾ ಎಂದರೆ ರಾಜ್ಯ ಸರ್ಕಾರದಲ್ಲಿ ಒಂದಷ್ಟು ಅವಕಾಶಗಳನ್ನು ಕೊಡಬಹುದೇ ವಿನಃ ಕೇಂದ್ರದ ಉದ್ಯೋಗಾವಕಾಶಗಳು ದೊರೆಯುವುದಿಲ್ಲ. ಮೇಲಾಗಿ ಎಸ್ಟಿ ಪರಿಗಣನೆ ಆರ್ಥಿಕ ಭದ್ರತೆ ನೀಡುವಂತ ಕೆಲವು ರಾಷ್ಟ್ರೀಯ ಯೋಜನೆಗಳ ಲಾಭವನ್ನು ದೊರಕಿಸುತ್ತದೆ. ಕೇವಲ ಒಬಿಸಿ ಎಂದು ಪರಿಗಣಿಸಲ್ಪಟ್ಟರೆ ಆ ಅವಕಾಶಗಳು ಇರುವುದಿಲ್ಲ, ಹೀಗಾಗಿ ತಮಗೆ ಎಸ್ಟಿ ಸ್ಥಾನಮಾನ ಬೇಕೆಂಬುದು ಅವರ ಬೇಡಿಕೆ.

92ಕ್ಕೂ ಹೆಚ್ಚಿನ ವಿವಿಧ ಆದಿವಾಸಿ ಪಂಗಡಗಳಿರುವ ಟೀ ಟ್ರೈಬ್ಸ್ ಸಮುದಾಯದಲ್ಲಿ ಬಹುಪಾಲು ಸಮುದಾಯಗಳಿಗೆ ತಮ್ಮ ಮೂಲ ರಾಜ್ಯದಲ್ಲಿ ಎಸ್ಟಿ ಸ್ಥಾನವೇ ನೀಡಲಾಗಿದೆ. ಆದರೆ ಕೇಂದ್ರ ಸರ್ಕಾರ ಮತ್ತು ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾದ ಪ್ರಕಾರ ಈ ಆದಿವಾಸಿಗಳು ಟೀ ತೋಟದಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ ಮೇಲೆ ತಮ್ಮ ಆದಿವಾಸಿ ಸ್ಥಾನಮಾನವನ್ನು ಕಳೆದುಕೊಂಡು ಸಾಮಾಜಿಕ ಚಲನೆ ಪಡೆದು ಇತರ ಹಿಂದುಳಿದ ವರ್ಗಕ್ಕೆ ಬಡ್ತಿ ಪಡೆದಿದ್ದಾರಂತೆ! ಇದೊಂದು ಕುತರ್ಕ ಮತ್ತು ಟೀ ಟ್ರೈಬ್ಸ್‌ಗಳ ಬದುಕಿನ ಮೇಲಿನ ಕ್ರೂರ ಪರಿಹಾಸ್ಯ.

ಏಕೆಂದರೆ ಯಾವುದಾದರೂ ಸಮುದಾಯವನ್ನು ಎಸ್ಟಿಯಾಗಿ ಪರಿಗಣಿಸುವುದರ ಹಿಂದಿನ ಪ್ರಧಾನ ತರ್ಕವೆಂದರೆ ಆ ಸಮುದಾಯವು ಪ್ರಧಾನ ಅಭಿವೃದ್ಧಿ ಮಾದರಿ ಯಿಂದ ಸಾಮಾಜಿಕ ರೀತಿ ರಿವಾಜುಗಳ ಕಾರಣದಿಂದ ಹೊರಗುಳಿಸಲ್ಪಟ್ಟಿದ್ದಾರೆಯೇ ಎಂಬುದಾಗಿದೆ. ಅಭಿವೃದ್ಧಿಯ ಯಾವ ಮಾನದಂಡಗಳಿಂದ ನೋಡಿದರೂ ಟೀ ಟ್ರೈಬ್ಸ್‌ಗಳು ದೇಶದ ಯಾವುದೇ ಆದಿವಾಸಿಗಳಿಗಿಂತ ಉತ್ತಮವಾಗಿಲ್ಲ, ಇನ್ನೂ ಸಾಮಾಜಿಕ ರೀತಿರಿವಾಜುಗಳು ಹೇಗೆ ಅವರಿಗೆ ಆಧುನಿಕತೆಯ ಸೌಲಭ್ಯಗಳನ್ನು ನಿರಾಕರಿಸುತ್ತಿದೆ ಎಂಬುದಕ್ಕೆ ರಾಜಧಾನಿಯಲ್ಲಿ ಅವರ ಮೇಲೆ ನಡೆದ ಅಮಾನುಷ ದೌರ್ಜನ್ಯದ ಹಿಂದಿನ ಮನಸ್ಥಿತಿಯೇ ಸಾಕ್ಷಿ.

ಹೀಗೆ ಟೀ ಟ್ರೈಬ್ಸ್ ಆದಿವಾಸಿಗಳ ಮೇಲೆ ನಾಗರಿಕ ಸಮಾಜ ಮತ್ತು ಪ್ರಭುತ್ವ ಎರಡು ದೌರ್ಜನ್ಯ ನಡೆಸುತ್ತಿವೆ. ಅವರ ಅಸಹಾಯಕತೆಯ ದುರ್ಬಳಕೆ ಮಾಡಿಕೊಂಡು ಸಮಾಜದಲ್ಲಿ ಬೇರು ಬಿಟ್ಟಿರುವ ಅಸಮಾನತೆಯನ್ನು ಮತ್ತು ಅನ್ಯಾಯವನ್ನು ಮುಂದುವರೆಸುತ್ತಿವೆ. ಅದಕ್ಕೆ ಅಸ್ಸಾಮಿನಲ್ಲಿ ಬೇರು ಬಿಡುತ್ತಿರುವ ಸಂಘಪರಿವಾರ ಬ್ರಾಹ್ಮಣಿಯ ಶ್ರೇಷ್ಠ ಕನಿಷ್ಠ ಸಿದ್ಧಾಂತವನ್ನು ಬಿತ್ತುತ್ತಾ ಅಸಹಾಯಕರ ಮೇಲಿನ ಕ್ರೌರ್ಯಕ್ಕೆ ಸಮರ್ಥನೆ ಒದಗಿಸುತ್ತಿದೆ. ಮಹಿಳೆಯನ್ನು ಬೀದಿಯಲ್ಲಿ ಬೆತ್ತಲು ಮಾಡುವ, ಗುಂಪುಗೂಡಿ ಕೊಲ್ಲುವ ಸಮಾಜದ ಅಮಾನುಷ ಮನಸ್ಥಿತಿ ಅದಕ್ಕೆ ಕುಮ್ಮಕ್ಕು ನೀಡುವ ಪ್ರಭುತ್ವ... ಇವೆರಡೂ ಫ್ಯಾಸಿಸಮ್ಮಿನ ಗುಣ ಲಕ್ಷಣಗಳು.

No Comments

''ನಾವು ನಂದಿಗ್ರಾಮವನ್ನು ಸಾಲ್ದಿಯಾ ರೀತಿಯ ಅಭಿವೃದ್ಧಿಪಡಿಸಲು ಇಚ್ಛಿಸಿದ್ದೆವು. ಇಲ್ಲಿ ಕೆಮಿಕಲ್ ಹ ಪ್ರಾರಂಭವಾಗಿದ್ದರೆ ಸಾಕಷ್ಟು ಜನರಿಗೆ ಉದ್ಯೋಗಾವ ಸಿಗುತ್ತಿತ್ತು,''

-ಲಕ್ಷ್ಮಣ್ ಸೇ

''ನಾವು ರಚಿಸಲಿರುವ ಹೊಸ ರಾಜಕೀಯ ಮೈತ್ರಿಕೂ ದಲ್ಲಿ ಬಿಜೆಪಿ ಇರುತ್ತದೋ ಇಲ್ಲವೋ ಎಂಬುದನ್ನು ನ ಮೈತ್ರಿಕೂಟದ ಹೆಸರಿನಲ್ಲಿರುವ ಸೆಕ್ಯುಲರ್ ಪದವ ನೋಡಿಯೇ ನೀವು ಅರ್ಥ ಮಾಡಿಕೊಳ್ಳಬಹುದು.''

-ಮಮತಾ ಬ್ಯಾನರ್ಜಿ



''ನಾಳೆಯಿಂದ ನಾನು ಸಮವಸ್ತ್ರದಲ್ಲಿರುವುದಿಲ್ಲ. ಇದರಿಂದ ನನಗಾಗುತ್ತಿರುವ ದುಃಖವನ್ನು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ.''

-ಮುಷರ್ರಫ್


''ಮಾಟ ಮಂತ್ರದಿಂದ ಯಡಿಯೂರಪ್ಪನವರನ್ನು ರಕ್ಷಿಸಲು ನೀಡಲಾಗುತ್ತಿರುವ ಭದ್ರತಾ ವೆಚ್ಚಗ ಪ್ರತಿ ತಿಂಗಳು 2.5 ಲಕ್ಷ ರೂ. ಖರ್ಚಾಗುತ್ತಿದೆ.''

-ಎಚ್.ವಿಶ್ವನಾ

''ಇದು ಬಂಡಾಯವೂ ಅಲ್ಲ, ನಾಯಕತ್ವ ಅಥ ಕುಟುಂಬದ ವಿರುದ್ಧ ಹೋರಾಟವೂ ಅಲ್ಲ.''

-ಎಂ.ಪಿ.ಪ್ರಕಾ

ನಂಬಿದ್ರೆನಂಬಿ ಬಿಟ್ರೆಬಿಡಿ



''ಎನ್.ಡಿ.ಎ. ಅಧಿಕಾರಕ್ಕೆ ಬಂದರೆ 123 ಒಪ್ಪಂದವನ್ನು ರದ್ದು ಮಾಡುತ್ತೇವೆ ಅಥವಾ ಪುನರ್‌ಪರಿಶೀಲನೆ ಮಾಡುತ್ತೇವೆ.''

-ಅಡ್ವಾನಿ



''ಮೋದಿ ಅವಿವಾಹಿತ. ಅವರ ಆಸ್ತಿ ಕೇವಲ 40 ಲಕ್ಷ. ಬ್ಯಾಂಕ್ ಖಾತೆಯಲ್ಲಿರುವುದು ಕೇವಲ 95,000 ರೂ. ಮತ್ತು ಅವರಿಗೆ ಸ್ವಂತ ಕಾರಿಲ್ಲ.''

-ಪತ್ರಿಕಾ ವರದಿ

''ನಮ್ಮದೇ ನಿಜವಾದ ಜನತಾ ದಳ.''

-ಎಂ.ಪಿ.ಪ್ರಕಾಶ್

''ಬಿಜೆಪಿಯಲ್ಲಿ ಯಾವುದೇ ರೀತಿಯ ಭಿನ್ನಮತವ ಶೆಟ್ಟರ್, ಈಶ್ವರಪ್ಪನವರನ್ನು ದೆಹಲಿಗೆ ಕಳಿಸಿದ್ದು ನಾ ಅದು ದೂರು ನೀಡಲಲ್ಲ.''


-ಯಡಿಯೂರ

ಎಲ್ಲರೂ ರಾಹು-ಕೇತುಗಳೇ

''ಶ್ರೀ ಕೃಷ್ಣ ಸೂರ್ಯನಾದರೆ ಅಷ್ಟಮಠಾಧೀಶ ಅಷ್ಟಗ್ರಹಗಳಿದ್ದಂತೆ. ಯಾರು ಶನಿ, ರಾಹು, ಕೇ ಎಂಬುದನ್ನು ನೀವೇ ನಿರ್ಧರಿಸಿ.''

-ಉಡುಪಿಯ ಶಿರೂರು ಮಠದ

ಇಟ್ಟುಕೊಂಡವನಿಗೆ ಕಲ್ಲಿನಲ್ಲೂ ಮೊಸರು!



''ಮುಷರ್ರಫ್ ಸಮವಸ್ತ್ರ ಕಳಚಿ ಸೇನಾ ಮುಖ್ಯಸ್ಥನ ಪದತ್ಯಾಗವನ್ನು ಮಾಡಿರುವುದು ಆ ದೇಶದಲ್ಲಿನ ಪ್ರಜಾತಂತ್ರದ ಕಡೆಗೆ ಮೊದಲ ಹೆಜ್ಜೆ''

-ಜಾರ್ಜ್ ಬುಷ್

ಹಾವಿನ ನೆರಳು!



''ತಸ್ಲೀಮಾ ನಸ್ರೀನ್‌ಗೆ ನಮ್ಮ ಸರ್ಕಾರ ಸಂಪೂರ್ಣ ರಕ್ಷಣೆ ಕೊಡುತ್ತದೆ. ಅವರು ಇಲ್ಲಿರುವಾಗ ಅವರು ತಮ್ಮ ಸಾಹಿತ್ಯ ಕೆಲಸ ಮುಂದುವರೆಸುವ ಮೂಲಕ ಮಾನವ ಸೇವೆ ಮಾಡಲಿ.''

-ನರೇಂದ್ರ ಮೋ

ಕೊಲೆಗಾರರ ಅಫಿಡವಿಟ್

''ನಂದಿಗ್ರಾಮದಲ್ಲಿ ಗಲಭೆಯನ್ನುಂಟುಮಾಡಲು ಸಾಮ ಶಾಹಿಗಳು ತೃಣಮೂಲ ಕಾಂಗ್ರೆಸ್ಸನ್ನು ಬಳಸಿಕೊಂಡು ಸ ರೂಪಿಸಿದ್ದಾರೆ.''

-ಸೂರ್ಯಕಾಂತ್ ಮಿಶ್ರ, ಸಿಪಿಎಂ ಮ

ಅಪರೂಪದ ವಿವೇಕ




''ಸಾಗರೋಲ್ಲಂಘನೆ ತಪ್ಪೆನ್ನುವುದಾದರೆ ಪ್ರತಿಯೊಂದು ಮನೆಯವರನ್ನೂ ಅಪವಿತ್ರರೆಂದು ಬಹಿಷ್ಕರಿಸಬೇಕು. ವಿದೇಶ ಯಾತ್ರೆ ನಿಷಿದ್ಧವೆಂದು ಯಾವುದೇ ಧರ್ಮಗ್ರಂಥಗಳಲ್ಲಿ ಸ್ಪಷ್ಟ ಉಲ್ಲೇಖವಿಲ್ಲ, ಅಲ್ಲದೆ ವಿದೇಶ ಎಂದರೇನು ಎಂಬುದರ ಬಗ್ಗೆಯೂ ವಿವರಣೆ ಬೇಕಿದೆ.''

-ಬಹಿಷ್ಕರಿಸಲ್ಪಟ್ಟ ಪುತ್ತಿಗೆ ಮಠದ ಸುಗುಣೇಂದ್ರ

ಅಡಿಕೆ ಕೊನೆ ತೆಗೆಸಿದ ನೋವು

ನೆಮ್ಮ ಕಲ್ಕುಳಿ ವಿಠಲ್ ಹೆಗ್ಡೆಗೆ ಕೊನೆಗೂ ಜಾಮೀನು ಸಿಕ್ಕಿದೆ. ಶೃಂಗೇರಿಯಲ್ಲಿರುವ ವಿಠಲ್ ಹೆಗ್ಡೆ ತೋಟಕ್ಕೆ ಸಂಬಂಧಿಸಿದಂತೆ ಕಳೆದ ತಿಂಗಳು ಒಂದು ವಿವಾದವೆದ್ದು ಅವರ ವಿರುದ್ಧ ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಕೇಸು ದಾಖಲಿಸಲಾಗಿತ್ತು. ತಣ್ಣಗೆ ಬಗೆಹರಿಯಬಹುದಾಗಿದ್ದ ಈ ವಿಚಾರವನ್ನು ಕೇಸಿನ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಚಿತಾವಣೆ ಕೊಟ್ಟದ್ದವರು ಚಿಕ್ಕಮಗಳೂರು ಪೊಲೀಸರು ಹಾಗೂ ಸರ್ಕಾರಿ ಅಧಿಕಾರಿಗಳು.



ಈ ಪ್ರಕರಣದ ನ್ಯಾಯಾನ್ಯಾಯ ಕೋರ್ಟಿನಲ್ಲೇ ಬಗೆಹರಿಯಲಿ, ಚಿಂತೆ ಇಲ್ಲ, ಆದರೆ ಅಪ್ಪಟ ಕೃಷಿಕ ವಿಠಲ್ ಹೆಗ್ಡೆಯವರ ಮನಸ್ಸಿಗೆ ಘಾಸಿಯಾಗುವ ಘಟನೆ ಮೊನ್ನೆ ನಡೆದಿದೆ. ಅವರು ಹತ್ತಾರು ವರ್ಷ ಕಷ್ಟಪಟ್ಟು ಬೆಳೆಸಿದ್ದ ಅಡಿಕೆ ತೋಟದಲ್ಲಿ ಅರ್ಧ ಎಕರೆಯನ್ನು ಈಗ ದಲಿತ ಕುಟುಂಬವೊಂದಕ್ಕೆ ಬಿಟ್ಟುಕೊಟ್ಟಿದ್ದಾರೆ. ಅದು ಅವರವರ ನಡುವೆ ಆಗಿದ್ದ ಒಪ್ಪಂದಂತೆ ನಡೆದಿರುವಂತದ್ದು. ಆದರೆ ಆ ಫಲಾನುಭವಿಯ ಕಡೆಯವರು ವಿಠಲ್ ದುಗುಡದಿಂದ ಜಾಮೀನಿಗಾಗಿ ಓಡಾಡುತ್ತಿದ್ದಾಗ ರಾಜಾರೋಷವಾಗಿ ತೋಟ ಹೊಕ್ಕು ಅಡಿಕೆ ಕೊನೆ (ಫಸಲು) ಇಳಿಸಿಕೊಂಡು ಹೋಗಿದ್ದಾರೆ.

ಮಲೆನಾಡಿನಲ್ಲಿ ಬೇರೆಯವರು ಬೆಳೆದಿದ್ದ ಅಡಿಕೆ ಕೊನೆ ಇಳಿಸಿದರೆ ರೈತರು ವಿಪರೀತ ನೊಂದುಕೊಳ್ಳುತ್ತಾರೆ. ಇದು ಕೇವಲ ನಿರ್ದಿಷ್ಟ ಫಸಲಿನ ಮೇಲಿನ ಹಕ್ಕಿನ ಪ್ರಶ್ನೆ ಮಾತ್ರವಲ್ಲ, ನೈತಿಕತೆಯ ವಿಚಾರವೂ ಅದರಲ್ಲಿದೆ. ರೈತನೊಬ್ಬ ತನ್ನ ತೋಟ, ಫಸಲಿನ ಬಗ್ಗೆ ಹೊಂದಿರುವ ಭಾವುಕ ನಂಟಿನ ವಿಚಾರವೂ ಆಗಿದೆ. ಮಲೆನಾಡಿನ ವಿಚಾರ ಹೇಳಬೇಕೆಂದರೆ ಕಾಗೋಡು ಭೂ ಹೋರಾಟ ನಡೆದಿದ್ದಾಗ ಒಂದಷ್ಟು ಭೂ ಸುಧಾರಣೆಯಾಯಿತಲ್ಲ, ಆಗಲೂ ಕೂಡ ಬೇರೆಯವರ ತೋಟದ ಅಡಿಕೆ ಕೊನೆ ಇಳಿಸುವಂತ ಬೆರಳೆಣಿಕೆಯಷ್ಟು ಘಟನೆಗಳು ಮಾತ್ರ ನಡೆದಿದ್ದವು. ಅದು ಬಿಟ್ಟರೆ ಇಂತಹ ಪ್ರಸಂಗ ಅಪರೂಪವೆಂದೇ ಹೇಳಬಹುದು. ನಾನು ಹಲವು ವರ್ಷಗಳಿಂದ ನೋಡುತ್ತಾ ಬಂದಿರುವ ವಿಠಲ್ ಸ್ವಭಾವತಃ ದೃಢ ಮನಸ್ಸಿನ, ಗಟ್ಟಿ ವ್ಯಕ್ತಿ; ಸಾಮಾಜಿಕ ಕಾಳಜಿ, ಬದ್ಧತೆಗಳಿಗೆ ಹೆಸರಾಗಿರುವವರು. ಅಂತಹವರೂ ಕೂಡಾ ಖಿನ್ನರಾಗಿ ನೊಂದುಕೊಳ್ಳುವಂತೆ ಮಾಡುವ ಅಗತ್ಯವಿತ್ತೆ?

ಹಾಗೆಂದು ಸ್ಥಳೀಯ ದಲಿತ ನಾಯಕರಿಗೆ ಈ ಪ್ರಶ್ನೆ ಕೇಳಬೇಕೆನಿಸುತ್ತಿದೆ.

ಸರ್ಕಾರ ಹಾಗೂ ಪೊಲೀಸರೊಂದಿಗೆ ಶಾಮೀಲಾಗಿ ವಿಠಲ್‌ರಂಥವರನ್ನು ಸದೆಬಡಿಯಲು ನಿಂತರೆ ಅದು ಇಡೀ ಸಮಾಜಕ್ಕಾಗುವ ನಷ್ಟ ಎಂಬುದನ್ನು ನಮ್ಮ ದಲಿತ ಸ್ನೇಹಿತರು ಮನಗಾಣಲಿ ಎಂದು ಆಶಿಸುತ್ತಿದ್ದೇನೆ.

* * * * *

ತಂತ್ರಜ್ಞಾನದಲ್ಲಿ ಭಾರತ ಇವತ್ತು ಎಷ್ಟು ಪ್ರಗತಿ ಹೊಂದಿದೆ ಎಂದರೆ ಮೊನ್ನೆ 'ಏಕ' ಎಂಬ ಸೂಪರ್ ಕಂಪ್ಯೂಟರ್ ಅನ್ನು ಸಿದ್ಧಪಡಿಸಲಾಗಿದೆ. ಈಗಾಗಲೇ ಹಲವಾರು ಉಪಗ್ರಹಗಳನ್ನು ಹಾರಿಸಿರುವ ಭಾರತ ಹಲವೇ ವರ್ಷಗಳಲ್ಲಿ 386 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಾನವನನ್ನು ಚಂದ್ರನ ಬಳಿಗೆ ಕಳುಹಿಸುವ 'ಚಂದ್ರಯಾನಾ' ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ರೂಪಿಸಿದೆ. ಇದೇ ಹೊತ್ತಿಗೆ ನಮ್ಮ ದೇಶದಲ್ಲಿನ ಕೋಟ್ಯಾಧಿಪತಿಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆ... ಇಂತಹ ಸುದ್ದಿಗಳು ನಮ್ಮ ಮಾಧ್ಯಮಗಳಲ್ಲಿ ಬಿತ್ತರಿಸಲ್ಪಟ್ಟು ಸಹಜವಾಗಿಯೇ ಭಾರತದ 'ಅಭಿವೃದ್ಧಿ' ಪಥದ ಬಗ್ಗೆ ಜನ ಹೆಮ್ಮೆಪಡುತ್ತಾರೆ.

ಆದರೆ ಭಾರತದ ತಂತ್ರಜ್ಞಾನ ಶಕ್ತಿ ಮತ್ತು ಅಭಿವೃದ್ಧಿಯ ಫಲಕ್ಕೆ ಮತ್ತೊಂದು ಮುಖವಿದೆ. ಅದನ್ನು ಅಂಕಿಅಂಶಗಳಿಂದ ವಿವರಿಸಿದರೆ ಅರ್ಥವಾಗುವುದು ಸುಲಭ.

ಕಾಶ್ಮೀರದಲ್ಲಿ ಕಳೆದ 17 ವರ್ಷಗಳಿಂದ ಉಗ್ರಗಾಮಿಗಳನ್ನು ಎದುರಿಸುವ ಕದನದಲ್ಲಿ ತೊಡಗಿರುವ ಸೈನ್ಯ ಪೊಲೀಸ್ ಮತ್ತು ಪ್ಯಾರಾಮಿಲಿಟರಿಗಳಲ್ಲಿ ಇವತ್ತಿನವರೆಗೂ 5,100 ಜನ ಮೃತಪಟ್ಟಿದ್ದಾರೆ. ಹೀಗೆ ದೇಶಕ್ಕಾಗಿ ಮಡಿದ ಯೋಧರ ಪಟ್ಟಿಯಲ್ಲಿ ಇತ್ತೀಚೆಗೆ ಸಾವನ್ನಪ್ಪಿದ ಬೆಂಗಳೂರಿನ ಕರ್ನಲ್ ವಸಂತ್ ವೇಣುಗೋಪಾಲ್ ಸೇರಿದಂತೆ ಹಲವಾರು ಕನ್ನಡಿಗರೂ ಇದ್ದಾರೆ. ಅವರೆಲ್ಲರ ಬಲಿದಾನಕ್ಕೆ ನಾವೆಲ್ಲ ಕಣ್ಣೀರಿಟ್ಟಿದ್ದೇವೆ, ಅವರ ಸಂಸಾರಗಳಿಗೆ ಅನುಕಂಪ ವ್ಯಕ್ತಪಡಿಸಿದ್ದೇವೆ.

ದೇಶದ ರಕ್ಷಣೆಯಲ್ಲಿ ಮಡಿದ ಈ 5,100 ಜನರ ಸಂಖ್ಯೆ ಒಂದೆಡೆ ಇರಲಿ. ಈಗ ಇನ್ನೊಂದು ಸಂಖೆಯತ್ತ ಗಮನ ಹರಿಸೋಣ.

ನಮ್ಮ ಎಲ್ಲಾ ನಗರಗಳಲ್ಲಿ ಕೊಳಚೆಯನ್ನು ಸಾಗಿಸುವ ಪೈಪುಗಳಿರುತ್ತವೆ. ಹಲವೊಮ್ಮೆ ಆ ಪೈಪುಗಳು ಕಟ್ಟಿಕೊಂಡು ಕೊಳಚೆ ನೀರು ರಸ್ತೆಯ ಮೇಲೆ ಹರಿಯಲಾರಂಭಿಸುತ್ತದೆ. ಆಗ ಅಲ್ಲಲ್ಲಿ ಈ ಪೈಪುಗಳಿಗೆ ಅಳವಡಿಸಿರುವ ಮ್ಯಾನ್‌ಹೋಲ್‌ಗಳನ್ನು ತೆರೆದು ಪೈಪುಗಳಲ್ಲಿ ಕಟ್ಟಿ ಹಾಕಿಕೊಂಡಿರುವುದನ್ನು ತೆಗೆಯಲಾಗುತ್ತದೆ.

ಈ ಕೆಲಸವನ್ನು ನಿರ್ವಹಿಸಲೆಂದೇ ನಗರ ಪಾಲಿಕೆಗಳು ಸಾವಿರಾರು ಸಫಾಯಿ ಕರ್ಮಚಾರಿಗಳನ್ನು ನೇಮಿಸಿಕೊಂಡಿರುತ್ತವೆ. ಇವರೆಲ್ಲಾ ದಲಿತ ಸಮುದಾಯಕ್ಕೆ ಸೇರಿದವರು. ಕೊಳಚೆಯ ವಾಸನೆಗೇ ನಾವೆಲ್ಲ ಮೂಗು ಮುಚ್ಚಿಕೊಳ್ಳುತ್ತೇವೆ. ಆದರೆ ಈ ನತದೃಷ್ಟ ಕರ್ಮಚಾರಿಗಳು ಆ ಕೊಳಚೆಯೊಳಗೇ ಇಳಿದು ಕೆಲಸ ಮಾಡಬೇಕಾಗುತ್ತದೆ. ಅಷ್ಟೇ ಅಲ್ಲ, ಹಲವೊಮ್ಮೆ ಕೊಳಚೆಯ ಸಂಗ್ರಹಣೆಯಿಂದಾಗಿ ವಿಷಯುಕ್ತ ಅನಿಲಗಳು ಉತ್ಪಾದನೆಯಾಗಿ ಮ್ಯಾನ್‌ಹೋಲ್ ಒಳಗೆ ಇಳಿದಿರುವ ಕರ್ಮಚಾರಿ ಉಸಿರುಗಟ್ಟಿ ಸಾವನ್ನಪ್ಪುತ್ತಾನೆ. ನಮ್ಮ ದೇಶದ ನಗರಗಳಲ್ಲಿ ಚರಂಡಿಯನ್ನು ಸ್ವಚ್ಛಗೊಳಿಸುವ ಕಾರ್ಯದಲ್ಲಿ ತೊಡಗಿ ಪ್ರತಿ ವರ್ಷ ಸಾವಿಗೀಡಾಗುವ ಸಫಾಯಿ ಕರ್ಮಚಾರಿಗಳ ಸಂಖ್ಯೆ ಇಪ್ಪತ್ತು ಸಾವಿರಕ್ಕೂ ಹೆಚ್ಚು.



ಒಂದೆಡೆ ಉಗ್ರರ ವಿರುದ್ಧ ಹೋರಾಡುತ್ತಾ ಕಳೆದ 17 ವರ್ಷಗಳಲ್ಲಿ ಮಡಿದಿರುವ ಯೋಧರ ಸಂಖ್ಯೆ 5,100. ಇನ್ನೊಂದೆಡೆ ಪ್ರತಿವರ್ಷ ನಮ್ಮ ನಗರಗಳನ್ನು ಸ್ವಚ್ಛವಾಗಿಡುವ ಕೆಲಸದಲ್ಲಿ ತೊಡಗಿರುವ ಸಫಾಯಿ ಕರ್ಮಚಾರಿಗಳಲ್ಲಿ ಮಡಿಯುವವರ ಸಂಖ್ಯೆ 20,000 ಕ್ಕೂ ಹೆಚ್ಚು. ಆದರೆ ಮೊದಲನೆಯವರಿಗೆ ಕಣ್ಣೀರು, ಸಂತಾಪ. ಎರಡನೆಯವರ ಬಗ್ಗೆ ಬರೀ ತಾತ್ಸಾರ. ಮೊದಲನೆಯವರು ಮಡಿದಾಗ ಮಾಧ್ಯಮಗಳಲ್ಲಿ ಸುದ್ದಿ. ಎರಡನೆಯವರು ಸಾವನ್ನಪ್ಪಿದಾಗ ಅಂತಹವರು ಬದುಕಿದ್ದರು ಎಂಬುದನ್ನೂ ಮಾಧ್ಯಮಗಳು ರುಜುವಾತು ಪಡಿಸುವುದಿಲ್ಲ.

ಹೊಟ್ಟೆಪಾಡಿಗಾಗಿ, ಪುಡಿ ಕಾಸಿಗಾಗಿ ಕೊಳಚೆಯಲ್ಲೂ ಮೈ ಅದ್ದಿ ಏಳುವ, ಹಾಗೆ ಮಾಡುವುದರಿಂದ ಸಾವಿರಾರು ಸಂಖ್ಯೆಯಲ್ಲಿ ಸಾವನ್ನೂ ಅಪ್ಪುವ ಬಡ ದಲಿತರು ಇರುವವರೆಗೂ ನಮ್ಮ ದೇಶ ಚರಂಡಿಗಳನ್ನು ಸ್ವಚ್ಛವಾಗಿಸುವ ತಂತ್ರಜ್ಞಾನವನ್ನು ವೃದ್ಧಿಪಡಿಸುವುದಿಲ್ಲ, ಬದಲಾಗಿ ಉಪಗ್ರಹಗಳನ್ನು, ಅಣುಬಾಂಬ್‌ಗಳನ್ನು, ಚಂದ್ರಯಾನಗಳನ್ನು ರೂಪಿಸಿ 'ಅಭಿವೃದ್ಧಿ' ಹೊಂದುತ್ತದೆ!

* * * * *

'ಇಡ್ಲಿ ಸಾಂಬಾರ್'ಗಳೆಂದೇ ಪರಿಗಣಿಸಲ್ಪಡುವ ದಕ್ಷಿಣ ಭಾರತದ ಹೆಚ್ಚಿನ ಜನ ಸಸ್ಯಾಹಾರಿಗಳೆಂದೂ, 'ರೋಟಿ ಚಿಕನ್ ಟಿಕ್ಕಾ'ಗಳೆಂದೇ ಭಾವಿಸಲ್ಪಡುವ ಉತ್ತರ ಭಾರತದ ಹೆಚ್ಚಿನ ಜನ ಮಾಂಸಾಹಾರಿಗಳೆಂದು ಸಾಮಾನ್ಯ ಪರಿಕಲ್ಪನೆ. ಆದರೆ ಇಂಡಿಯನ್ ಫುಡ್ ಇನ್‌ಟೇಕ್ ಇತ್ತೀಚೆಗೆ ನಡೆಸಿರುವ ಸಮೀಕ್ಷೆಯ ಪ್ರಕಾರ ವಾಸ್ತವ ಸ್ಥಿತಿ ಉಲ್ಟಾಪಲ್ಟಾ ಇದೆ. ಯಾಕೆಂದರೆ ಆ ಸಮೀಕ್ಷೆಯ ಪ್ರಕಾರ ಶೇ. 80 ರಷ್ಟು ದಕ್ಷಿಣ ಭಾರತದ ಜನ ಮಾಂಸಾಹಾರಿಗಳಾಗಿದ್ದರೆ, ಶೇ. 44 ರಷ್ಟು ಉತ್ತರ ಭಾರತದ ಜನ ಮಾತ್ರ ಮಾಂಸಾಹಾರಿಗಳಾಗಿದ್ದಾರೆ! ಅಷ್ಟೇ ಅಲ್ಲ, ದಕ್ಷಿಣ ಭಾರತದವರು ಉತ್ತರ ಭಾರತದವರಿಗಿಂತ ಎರಡು ಪಟ್ಟು ಹೆಚ್ಚು ಚಿಕನ್ ತಿನ್ನುತ್ತಾರೆ ಮತ್ತು ಇತ್ತೀಚೆಗೆ ಮತ್ಸ್ಯಾಹಾರವನ್ನೂ ಹೆಚ್ಚಿನ ಸಂಖ್ಯೆ ಹಾಗೂ ಪ್ರಮಾಣದಲ್ಲಿ ಸೇವಿಸುತ್ತಿದ್ದಾರೆ.


ಆದ್ದರಿಂದ ಇನ್ನು ಮುಂದೆ ಉತ್ತರ ಭಾರತದವರನ್ನು 'ರೋಟಿ ದಾಲ್' ಎಂದೂ, ದಕ್ಷಿಣ ಭಾರತದವರನ್ನು 'ಚಿಕನ್ ಚೆಟ್ಟಿನಾಡ್' ಎಂದೂ ಪರಿಗಣಿಸಬಹುದಲ್ಲವೆ?!

■ ಗೌರಿ ಲಂಕೇಶ್



ಕಂಡಹಾಗೆ

ಲಾಟರಿ ಯಡ್ಡಿಯ 300 ಕೋಟಿ ಡೀಲ್



"ನಾನು ಬಡವರಿಗೆ ರೇಷನ್ ಕಾರ್ಡ್ ಕೊಟ್ಟೆ."

"ನಾನು ಲಾಟರಿ ನಿಷೇಧಿಸಿ ಜನ ಪಾಪರ್ ಆಗೋದನ್ನ ತಪ್ಪಿಸಿದೆ."

"ನಾನು ಅದು ಮಾಡಿದೆ, ಇದು ಕಿಸಿದೆ" ಅಂತೆಲ್ಲಾ ಇವತ್ತು ಟಾಂಟಾಂ ಬಾರಿಸಿಕೊಳ್ಳುತ್ತಿರುವ ಯಡಿಯೂರಪ್ಪನ ಅಸಲಿ ಮುಖ ಅವತ್ತು ಬೇರೆಯೇ ಆಗಿತ್ತು.

ಉದಾಹರಣೆಗೆ ಈ ಲಾಟರಿ ನಿಷೇಧದ ವಿಚಾರದಲ್ಲೇ ಹೇಳಬೇಕೆಂದರೆ....

ಅವತ್ತಿನ ಸಂಪುಟ ಸಭೆಯಲ್ಲಿ ಈ ಚರ್ಚೆ ಬರುವ ಮುನ್ನ ಇದೇ ಯಡ್ಡಿ ಮುಖ್ಯಮಂತ್ರಿ ಕುಮಾರಸ್ವಾಮಿ ಹತ್ತಿರಕ್ಕೆ ಇಬ್ಬರು ಮದ್ರಾಸಿಗಳನ್ನು ಕರೆದೊಯ್ದಿದ್ದರು. ಲಾಟರಿ ದಂಧೆಯಲ್ಲೇ ನೂರಾರು ಕೋಟಿ ದುಡಿಯುತ್ತಿದ್ದ ಆ ದಂಧೆಕೋರರ ಪರವಾಗಿ ಮಾತನಾಡಿದ ಯಡ್ಡಿ "ಲಾಟರಿ ಬ್ಯಾನ್ ಮಾಡದಿದ್ದರೆ 300 ಕೋಟಿ ಕೊಡ್ತೀವಿ ಅಂತಿದ್ದಾರೆ. ಏನ್ ಮಾಡೋಣ" ಎಂದು ಕೇಳಿದ್ದರು.

ಆದರೆ ಅಷ್ಟು ಹೊತ್ತಿಗೆ ಸಾರಾಯಿ ಮತ್ತು ಲಾಟರಿ ನಿಷೇಧಿಸುವುದಾಗಿ ಸಾರ್ವಜನಿಕವಾಗಿ ಹೇಳಿ ಕಮಿಟ್ ಆಗಿದ್ದ ಕುಮಾರಸ್ವಾಮಿ ಯಡ್ಡಿಯ ಡೀಲ್‌ಗೆ ಒಪ್ಪಲಿಲ್ಲ, ಕನಿಷ್ಠ ನೂರು ಕೋಟಿ ಲಂಚದ ಆಸೆ ಹೊತ್ತಿದ್ದ ಯಡ್ಡಿ ಕೊನೆಗೆ ವಿಧಿಯಿಲ್ಲದೆ ಲಾಟರಿ ನಿಷೇಧಕ್ಕೆ ಒಪ್ಪಿದ್ದರು.

ರೇಷನ್‌ಕಾರ್ಡ್ ವಿತರಣೆಯಲ್ಲೂ ಜೆಡಿಎಸ್ ನಿಲುವಿನ ಬಗ್ಗೆ ಸಹಮತವಿರದಿದ್ದ ಯಡ್ಡಿ "ಇದರಿಂದ ಹಣಕಾಸು ಹೊರೆ ಜಾಸ್ತಿ ಆಗುತ್ತೆ, ಬಿಪಿಎಲ್ ಕಾರ್ಡ್‌ದಾರರ ಸಂಖ್ಯೆ ಕಡಿಮೆ ಮಾಡಲೇಬೇಕು" ಅಂದಿದ್ದರು. ಆದರೆ ಬಜೆಟ್‌ನಲ್ಲಿ ಬ್ರಾಹ್ಮಣ ಮಠಗಳಿಗೆ ಕೋಟ್ಯಂತರ ರೂಪಾಯಿ ಕೊಡುವಾಗ ಚೆಡ್ಡಿ ಯಡ್ಡಿಗೆ ಹಣಕಾಸು ಹೊರೆಯಾಗುತ್ತೆ ಅನ್ನಿಸಿರಲಿಲ್ಲ ಎಂಬುದೂ ವಾಸ್ತವ.


ಇದೇ ಯಡ್ಡಿ ಒಂದು ವಾರದ ಸಿಎಂ ಆಗಿದ್ದಾಗ ಏಕಾಏಕಿ "ಇನ್ನೊಂದು ತಿಂಗಳಲ್ಲಿ ಬಿಪಿಎಲ್ ಕಾರ್ಡ್ ಹಂಚಿ" ಎಂದು ಅಧಿಕಾರಿಗಳಿಗೆ ಆದೇಶಿಸಿದ್ದರು. ಆದರೆ ಸ್ಪಷ್ಟಗೋಚರ ವಾಸ್ತವ ಸಂಗತಿ ಏನು ಗೊತ್ತೆ?

ಇದೇ ಯಡ್ಡಿ ಹಣಕಾಸು ಸಚಿವನಾಗಿದ್ದ 2006 ರ ಫೆಬ್ರವರಿಯಿಂದ 2007 ರ ಅಕ್ಟೋಬರ್ ಅವಧಿಯಲ್ಲಿ ಬಡತನ ರೇಖೆ ಕೆಳಗಿದ್ದ ರೇಷನ್ ಕಾರ್ಡ್‌ದಾರರ ಸಂಖ್ಯೆ 16 ಲಕ್ಷದಿಂದ 11.50 ಲಕ್ಷಕ್ಕಿಳಿದಿತ್ತು, ಅಂದರೆ ನಾಲ್ಕೂವರೆ ಲಕ್ಷ ಜನರಿಂದ ರೇಷನ್ ಕಾರ್ಡ್ ಕಿತ್ತುಕೊಳ್ಳಲಾಗಿತ್ತು.

ಲಾಟರಿ ನಿಷೇಧ-ರೇಷನ್ ಕಾರ್ಡ್ ವಿಚಾರದಲ್ಲಿ ಯಡ್ಡಿಯ ಅಸಲಿ ಕಾಳಜಿ ಇಷ್ಟೇನೆ.



ಅನಂತ್‌ಕುಮಾರ್ ನಾರಾಯಣಗೌಡ ಭಾಯೀಭಾಯಿ?



ಕನ್ನಡದ ಹೆಸರಲ್ಲಿ ಯಾರ್‍ಯಾರೋ ಏನೇನೋ ಮಾಡ್ತಾರೆ. ಆದರೆ ರಕ್ಷಣಾ ವೇದಿಕೆಯ ನಾರಾಯಣ ಗೌಡರು ಹಂಗಲ್ಲ. ಅವರಿಂದ ಕನ್ನಡಕ್ಕೆ ತುಂಬಾ ಲಾಭ ಆಗಿದೆ. ರಾಜಕೀಯವಾಗಿ ನಾವೆಲ್ಲ ಯಾವುದೇ ಪಕ್ಷದಲ್ಲಿದ್ದರೂ ಕನ್ನಡದ ವಿಷಯ ಬಂದಾಗ ಖಂಡಿತ ವಾಗ್ಲೂ ಈ ನಾರಾಯಣಗೌಡರನ್ನೇ ಬೆಂಬಲಿಸ್ತೀವಿ....!

ಇದು ಬಿಜೆಪಿ ರಾಷ್ಟ್ರನಾಯಕ ಅನಂತ್ ಕುಮಾರ್ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಕನ್ನಡಿಗರ ಸಮಾವೇಶದಲ್ಲಿ ಉದುರಿಸಿದ ಆಣಿಮುತ್ತು. ಪಕ್ಕದಲ್ಲೇ ಚೆಲುವರಾಯಸ್ವಾಮಿ ಕೂತಿದ್ದರು. ಕನ್ನಡದ ವಿಷಯ ಬಂದಾಗೆಲ್ಲ ಅನಂತ್‌ಕುಮಾರ್ ನಾರಾಯಣಗೌಡರನ್ನೇ ಏಕೆ ಬೆಂಬಲಿಸಬೇಕು? ಹಾಗಾದರೆ ಅನಂತ್‌ಕುಮಾರ್ ಮತ್ತು ನಾರಾಯಣಗೌಡರ ಲೆಕ್ಕದಲ್ಲಿ 'ಕನ್ನಡದ ವಿಷಯ'ವೆಂದರೆ ಏನೇನು? ಬೇರೆ ಎಲ್ಲಾ ಪುಢಾರಿಗಳನ್ನು ಬಿಟ್ಟು ಅನಂತ್‌ಕುಮಾರ್‌ರನ್ನೇ ಸ್ವಾಭಿಮಾನಿ ಕನ್ನಡಿಗರ ಸಮಾವೇಶಕ್ಕೆ ಮುಖ್ಯ ಅತಿಥಿಯಾಗಿ ಆಹ್ವಾನಿಸಿದ್ದೇಕೆ?

ಸರಿಸುಮಾರು ಐವತ್ತು ಲಕ್ಷ ಖರ್ಚು ಮಾಡಿ, ರಾಜ್ಯಾದ್ಯಂತದಿಂದ ಕಾರ್ಯಕರ್ತರನ್ನು ಸೇರಿಸಿ, ಬೆಂಗಳೂ ರಿನುದ್ದಕ್ಕೂ ಬ್ಯಾನರ್-ಬಾವುಟಗಳನ್ನು ನೆಟ್ಟು ಒಂದಾ ನೊಂದು ಕಾಲಕ್ಕೆ ರಾಜ್‌ಕುಮಾರ್ ಅಭಿಮಾನಿಗಳು ನಡೆಸುತ್ತಿದ್ದಷ್ಟೇ ಧಾಂಧೂಂ ರ್‍ಯಾಲಿ ಮಾಡಿದ ರಕ್ಷಣಾ ವೇದಿಕೆಯ ನಾ.ಗೌ. ಇಡುವ ಹಕ್ಕೊತ್ತಾಯಗಳಾದರೂ ಏನು?

ಡಿಸೆಂಬರ್ ಒಳಗೆ ಕನ್ನಡವನ್ನು ಶಾಸ್ತ್ರೀಯ ಭಾಷೆ ಮಾಡುವುದು, ಮಹಾಜನ್ ವರದಿ ಯಥಾವತ್ ಜಾರಿಗೊಳಿಸುವುದು, ವಲಸೆ ತಡೆಗಟ್ಟುವುದು, ಎಂ.ಇ.ಎಸ್. ಮತ್ತು ಕೊಂಕಣಿ ವಿರಾಜಮಂಚ್‌ಗಳ ನಿಷೇಧ, ಇಂಗ್ಲಿಷ್ ಬೋರ್ಡುಗಳನ್ನು ನಿಷೇಧಿಸುವುದು ಮತ್ತು ಗಣಿ ಸಂಪತ್ತಿನ ಲೂಟಿಯಲ್ಲಿ ರಾಜ್ಯಕ್ಕೆ ರಾಯಲ್ಟಿಯ ಪಾಲು ಕೇಳುವುದು-ಇವೇ ತಾನೇ ಗೌಡರ ರ್‍ಯಾಲಿಯ ಡಿಮ್ಯಾಂಡು!

ಯಾರ ರಕ್ಷಣೆಗೆ ಈ ವೇದಿಕೆ?


ಈ ಯಾವುದೇ ಬೇಡಿಕೆ ಈಡೇರಿಬಿಟ್ಟರೂ ರೈತನ ಆತ್ಮಹತ್ಯೆ ತಪ್ಪುತ್ತಾ? ಬೆಳೆಗೆ ತಕ್ಕ ಬೆಲೆ ಸಿಗುತ್ತಾ? ಕನ್ನಡಿಗನ ಹೊಟ್ಟೆ ತುಂಬುತ್ತಾ? ಬೇಡ, ವರ್ಷವೊಂದಕ್ಕೆ ಉತ್ತರ ಕರ್ನಾಟಕದ ದಟ್ಟ ದರಿದ್ರ ಜಿಲ್ಲೆಗಳಿಂದ ಗೋವಾ, ಪೂನಾ, ಮುಂಬೈಗಳ ವೇಶ್ಯಾವಾಟಿಕೆ ಸೇರಿಕೊಳ್ಳುವ ಸರಾಸರಿ ಮೂರು ಸಾವಿರ ಕನ್ನಡಿಗ ಹೆಣ್ಣುಮಕ್ಕಳ ರವಾನೆ ಯಾದರೂ ಕನಿಷ್ಠ ನಿಲ್ಲುತ್ತಾ? ರೈತನ ಭೂಮಿ ಕಸಿಯುವ ಐಟಿ ಕಂಪೆನಿಗಳು ಕನ್ನಡಿಗರಿಗೆ ಕೆಲಸ ಕೊಡಬೇಕೆಂಬ ಸಾಧಾರಣ ಬೇಡಿಕೆಯನ್ನು ಏಕೆ ರಕ್ಷಣಾ ವೇದಿಕೆ ಹಾಕುತ್ತಿಲ್ಲ? ಏಕೆ ಕನ್ನಡಿಗರಿಗೆ ಕೆಲಸ ಕೊಡದ ಖಾಸಗಿ ಸಂಸ್ಥೆಗಳ ವಿರುದ್ಧ ನಾ.ಗೌ. ಯುದ್ಧ ಘೋಷಿಸುವುದಿಲ್ಲ?

ದಶಕಗಳಿಂದಾದಿಯಾಗಿ ಕನ್ನಡಿಗರನ್ನು ವಂಚಿಸುತ್ತಲೇ ಬಂದ ಸಂಸತ್ ಸದಸ್ಯರು, ರಾಜಕೀಯ ಪಕ್ಷಗಳ ವಿರುದ್ಧ ಸಣ್ಣದೊಂದು ಆಕ್ರೋಶವನ್ನೂ ವ್ಯಕ್ತಪಡಿಸದೆ, ಕನ್ನಡದ ತಾಯಿ ಬೇರಾದ ರೈತರ ಆತ್ಮಹತ್ಯೆಯ ಬಗ್ಗೆ ಕಿಂಚಿತ್ತೂ ಚಿಂತಿಸದೇ, ಭ್ರಷ್ಟಾಚಾರ, ದುರಾಡಳಿತ, ಎಸ್‌ಇ[...] ಬಹುರಾಷ್ಟ್ರೀಯ ಕಂಪೆನಿಗಳ ದರೋಡೆ ಇ[...] ಯಾವುದರ ಬಗ್ಗೆಯೂ ತಲೆಯನ್ನೇ ಕೆಡಿಸಿಕೊಳ್ಳ[...] ಕೇವಲ ಶಾಸ್ತ್ರೀಯ ಭಾ[...] ಮಾಡಿ, ಇಂಗ್ಲಿಷ್ ಬೋ[...] ನಿಷೇಧಿಸಿ ಎಂದು ಬೊ[...] ಹೊಡೆಯುವ ಶ್ರೀಮಾ[...] ನಾರಾಯಣಗೌಡರು ಲೋ[...] ಸಭೆಯಲ್ಲಿ ಯಾವತ್ತೂ ಕನ್ನಡ[...] ಬಗ್ಗೆ ಸೊಲ್ಲೆತ್ತದ ಅನಂ[...] ಕುಮಾರ್‌ಗಲ್ಲದೇ ಇನ್ನಾ[...] ಪ್ರಿಯವಾಗಬೇಕು?

ರೈತನ ಆತ್ಮಹತ್ಯೆಗೂ[...] ಕನ್ನಡಕ್ಕೂ ಸಂಬಂಧವೇ ಇಲ್ಲವೆಂದಾದರೆ ಅನಂತ್‌ಕುಮಾರ್ ಮತ್ತು[...] ನಾರಾಯಣಗೌಡ ಸಂಬಂಧಿಗಳಾಗದೇ ಇನ್ನೇನು? ಭೂತ ಭಗವದ್ಗೀ[...] ಪಠಿಸಬಹುದಾದರೆ ಅನಂತ್‌ಕುಮಾರ್ ರಕ್ಷಣಾ ವೇದಿಕೆಯ ರ್‍ಯಾಲಿಗೆ ಬಂದು ಕನ್ನಡ ಮಂತ್ರ ಪಠಿಸಿದ್ದು ಯಾವ ಮಹಾ?

ನಾರಾಯಣಗೌಡರ ರಕ್ಷಣಾ ವೇದಿಕೆ ಅದು ಯಾರ ರಕ್ಷಣೆ ವೇದಿಕೆ?

ಕೊನೆಗೂ ದೇವೇಗೌಡ ಮತ್ತು ಪುತ್ರರ ವಿರುದ್ಧ ಬಂಡಾಯವೆದ್ದ ಎಂ.ಪಿ. ಪ್ರಕಾಶ್ ತಮ್ಮ ದಳವಾಯಿ ಗಳನ್ನು ಮತ್ತು ಸೈನಿಕರನ್ನು ಯುದ್ಧಕ್ಕೆ ಸಿದ್ಧಗೊಳಿಸು ತ್ತಿದ್ದಂತೆ ಕೇಂದ್ರ ಸರ್ಕಾರವು ವಿಧಾನಸಭೆಯನ್ನು ವಿಸರ್ಜಿಸಿ ಕದನ ವಿರಾಮವನ್ನು ತಾತ್ಕಾಲಿಕವಾಗಿ ಘೋಷಿಸಿದೆ. ಈಗ ಪ್ರಕಾಶ್ ಮತ್ತು ತಂಡದವರನ್ನು ಕಾಡು ತ್ತಿರುವ ಪ್ರಶ್ನೆ ಯಾರೊಂದಿಗೆ ಮತ್ತು ಯಾರ ವಿರುದ್ಧ ಬರುವ ಚುನಾವಣೆಗಳಲ್ಲಿ ಹೋರಾ ಡುವುದೆಂಬುದಾಗಿದೆ. ಯಾಕೆಂ ದರೆ ಅವರೊಂದಿಗಿರುವ ಪ್ರತಿ ಯೊಬ್ಬ ನಾಯಕ ತನ್ನ ಕ್ಷೇತ್ರದಲ್ಲಿ ತನ್ನ ಹಿತವನ್ನೇ ದೃಷ್ಟಿಯಲ್ಲಿಟ್ಟು ಕೊಂಡು ಯಾರ ವಿರುದ್ಧ ಹೋರಾಡಬೇಕು ಎಂದು ಸೂಚಿಸುತ್ತಿದ್ದಾರೆ.



ಪ್ರಕಾಶ್: ಎತ್ತು ಏರಿಗೆ, ಕೋಣ ನೀರಿಗೆ

ಈಗಾಗಲೇ ಕರ್ನಾಟಕದಲ್ಲಿ ಖರ್ಗೆ-ಧರಂಸಿಂಗ್ ಎಂಬ ಮುದಿ ಎತ್ತುಗಳ ನೇತೃತ್ವದ ಕಾಂಗ್ರೆಸ್, ಯಡ್ಡಿ-ಅನಂತು ತರ ಹದ ರಕ್ತಪಿಪಾಸುಗಳ ಬಿಜೆಪಿ, ದೇವೇಗೌಡ ಮತ್ತು ಮಕ್ಕಳ ಜೆಡಿಎಸ್, ಸಿಂಧ್ಯಾ ಎಳೆಯ ಲೆತ್ನಿಸುತ್ತಿರುವ ಬಿಎಸ್‌ಪಿ ಎಂಬ ಬಂಡಿ, ಬಂಗಾರಪ್ಪ ಎಂಬ ಒಂಟಿ ಸಲಗದ ಸಮಾಜವಾದಿ ಪಕ್ಷ ಮತ್ತು ನೆಪಮಾತ್ರಕ್ಕೆ ಎಂಬಂತಿರುವ ಜೆಡಿಯು ಪಕ್ಷ ಗಳಿವೆ. ಆದ್ದರಿಂದ ಹೊಸ ಪಕ್ಷವನ್ನು ಪ್ರಾರಂಭಿಸುವ ಬದಲಾಗಿ ಈಗಾಗಲೇ ಸ್ಥಾಪನೆ ಗೊಂಡಿರುವ ಯಾವುದಾದ ರೊಂದು ಪಕ್ಷದೊಂದಿಗೆ ಎಲ್ಲರೂ ಹೋಗುವುದೇ ಸೂಕ್ತವೆನಿಸುತ್ತಿದ್ದರೂ ಎಡವಟ್ಟು ಆಗುತ್ತಿರುವುದೇ ಅಲ್ಲಿ. ಪ್ರಕಾಶ್ ಮತ್ತು ಸಂಗಡಿಗರಿಗೆ ಸಮಾಜವಾದಿ ಪಕ್ಷದ ರಾಷ್ಟ್ರೀಯ ನಾಯಕ ಮುಲಾಯಂಸಿಂಗ್ ಯಾದವ್ 'ಓಕೆ' ಅನಿಸಿದರೂ ಅದರಲ್ಲಾಗಲೇ 'ಬಂ' ಇರುವುದೇ ಒಂದು ದೊಡ್ಡ ತಲೆನೋವು. ಇನ್ನು ಕಾಂಗ್ರೆಸ್‌ನೊಂದಿಗೆ ಹೋಗ ಬೇಕೆಂದರೆ, ಮೈಸೂರಿನಲ್ಲಿ ಎಚ್.ಸಿ. ಮಹದೇವಪ್ಪ ನವರಿಗೆ ಹಿರಿಯ ನಾಯಕ ಶ್ರೀನಿವಾಸಪ್ರಸಾದರ ಬಗ್ಗೆ ಚಿಂತೆ, ಸಿ.ಎಂ. ಇಬ್ರಾಹಿಂಗೆ ಜಾಫರ್ ಷರೀಫ್ ಅಡ್ಡಗಾಲು, ಸಂಡೂರಿನಲ್ಲಿ ಸಂತೋಷ್ ಲಾಡ್‌ಗೆ ಎಂ.ವೈ. ಘೋರ್ಪಡೆ ತಡೆಗೋಡೆ, ನಾಗಮಂಗಲದಲ್ಲಿ ಚೆಲುವರಾಯಸ್ವಾಮಿಗೆ ಶಿವರಾಮೇಗೌಡರ ಕಾಟ!


ಪಿ.ಜಿ.ಆರ್. ಸಿಂಧ್ಯಾ ಅವತ್ತಿನಿಂದಲೂ ಇವರೆಲ್ಲ ರನ್ನೂ ಬಿಎಸ್‌ಪಿಗೆ ಆಹ್ವಾನಿಸುತ್ತಿದ್ದರೂ ಆ ಪಕ್ಷದ ವಿಶ್ವಾಸ ಗಳಿಸಿ ಮಾಯಾವತಿಯನ್ನು ಪ್ರಧಾನಮಂತ್ರಿ ಸ್ಥಾನಕ್ಕೆ ಏರಿಸುವುದೇ ಆಗಿರುವುದರಿಂದ ಅದೇನೋ ಹಿಂಜರಿಕೆ. ಅಷ್ಟೇ ಅಲ್ಲ, ಬಿಎಸ್‌ಪಿಯನ್ನು ಬಲಗೊಳಿಸಲು ಹೊರಟು ಆ ಮೂಲಕ ಬಿಜೆಪಿ ವಿರುದ್ಧದ ಜಾತ್ಯತೀತ ಮತಗಳೆಲ್ಲ ಹಂಚಿಹೋಗು ವಂತಾದರೆ ಪರೋಕ್ಷವಾಗಿ ಕೇಸರಿ ಪಕ್ಷಕ್ಕೇ ನೆರವಾಗುವಂತಾಗುತ್ತದೆ ಎಂಬ ಆತಂಕ ಬೇರೆ.

ಹೀಗೆ ಜೆಡಿಎಸ್-ಬಿಜೆಪಿ ವಿರುದ್ಧದ ಆಯ್ಕೆಗಳಲ್ಲಿ ಕಾಂಗ್ರೆಸ್, ಸಮಾಜವಾದಿ ಪಕ್ಷ ಮತ್ತು ಬಿಎಸ್‌ಪಿಗಳನ್ನು ಹೊರತುಪಡಿಸಿದರೆ ಉಳಿಯುವುದು ಮತ್ತದೇ ಜನತಾ ಪರಿವಾರದ ಸಂಯುಕ್ತ ಜನತಾದಳ. ಆದರೆ ಅದರಲ್ಲೂ ಸಮಸ್ಯೆ ಇದೆ. ಜನತಾ ಪರಿವಾರದ ಮತ್ತೊಂದು ಸಿಬುರು ಆದ ಲಾಲೂಪ್ರಸಾದ್ ಯಾದವ್‌ರ ರಾಷ್ಟ್ರೀಯ ಜನತಾದಳವನ್ನು ಬಿಹಾರದಲ್ಲಿ ಸೋಲಿಸಲೆಂದೇ ಹಿಂದೂತ್ವವಾದಿ ಬಿಜೆಪಿಯೊಂದಿಗೆ ಜೆಡಿಯು ಕೈಜೋಡಿಸಿದೆಯಲ್ಲದೆ ಅದು ಎನ್‌ಡಿಎಯ ಸದಸ್ಯ ಪಕ್ಷ ಕೂಡ. ಆದ್ದರಿಂದ ಅಲ್ಲಿ ಬಿಜೆಪಿಯೊಂದಿಗೆ ಆದರೆ ಇಲ್ಲಿ ಬಿಜೆಪಿಯ ವಿರುದ್ಧ ನಿಲ್ಲುವುದು ಹೇಗೆ ಎಂಬುದೇ ಸಂಕಟದ ಅಂಶವಾಗಿದೆ.

ಜೆಡಿ(ಯು) ಪಕ್ಷದ ರಾಷ್ಟ್ರೀಯ ನಾಯಕ ನಿತೀಶ್‌ಕುಮಾರ್‌ರವರೇನೋ ಈಗಾಗಲೇ ಪ್ರಕಾಶ್ ಮತ್ತವರ ತಂಡವನ್ನು ಆಹ್ವಾನಿಸಿ ದ್ದಾರಲ್ಲದೇ ಕರ್ನಾಟಕದ ಸಂಘಟನೆಗೆ ಸಂಪೂರ್ಣ ಸ್ವಾತಂತ್ರ ನೀಡಿ ಬಿಜೆಪಿ ವಿರುದ್ಧವೇ ಸೆಣಸಾಡಿದರೆ ತಮ್ಮ ಅಭ್ಯಂತರವಿಲ್ಲ ಎಂದಿದ್ದಾರೆ. ಇದನ್ನು ನಂಬಿ ಪ್ರಕಾಶ್ ಅಂಡ್ ಗ್ಯಾಂಗ್ ಜೆಡಿಯು ಅನ್ನೇ ಆಯ್ಕೆ ಮಾಡಿಕೊಂಡರೆ ಅವರೊಂದಿಗೆ ಸಿಂಧ್ಯಾ ಕೂಡ ಸೇರುವ ಸಾಧ್ಯತೆ ಇದೆ. ಆದರೆ ಸಿದ್ಧರಾಮಯ್ಯ ಮಾತ್ರ ಜೆಡಿಯು ಸೇರಲೆಂದು ಕಾಂಗ್ರೆಸ್ ಅನ್ನು ತ್ಯಜಿಸುವುದು ಅಸಾಧ್ಯ. ಅಷ್ಟೇ ಅಲ್ಲ, ಸಿದ್ಧರಾಮಯ್ಯ -ಪ್ರಕಾಶ್-ಸಿಂಧ್ಯಾ ಎಂಬ ತ್ರಿಮೂರ್ತಿಗಳ ಬದಲಾಗಿ ಕೇವಲ ಪ್ರಕಾಶ್-ಸಿಂಧ್ಯಾ ಎಂಬ ದ್ವಿಮೂರ್ತಿಗಳ ನಾಯಕತ್ವದಲ್ಲಿ ಜೆಡಿಯು ಪಕ್ಷವು ರಾಜಕೀಯವಾಗಿ ಸಾಧಿಸುವುದು ಕಡಿಮೆಯೇ.


ಈ ಎಲ್ಲಾ ಲೆಕ್ಕಾಚಾರಗಳು ಈಗ ಪ್ರಕಾಶ್ ಮತ್ತವರ ತಂಡದಲ್ಲಿ ನಡೆಯುತ್ತಿದ್ದು ಇಡೀ ಪರಿಸ್ಥಿತಿ ಎತ್ತು ಏರಿಗೆ, ಕೋಣ ನೀರಿಗೆ ಎಂಬಂತಾಗಿದೆ.

ಹೆಸರು ಪರಂಧಾಮನದು, ಕಸುಬು ಸೈಕಲ್ ರವಿಯದ್ದು?!



ಸೈಕಲ್ ರವಿ

ಬನಶಂಕರಿಯ ರೌಡಿ ಪರಂಧಾಮನ ವಿರುದ್ಧ ಬಿಲ್ಡರುಗಳ ಗ್ಯಾಂಗ್ ಕಟ್ಟಿಕೊಂಡು ಪೊಲೀಸ್ ಕಮೀಷನರ್ ಕಚೇರಿಯ ಮುಂದೆ ಪೆರೇಡು ಮಾಡಿದ ಮಾಜಿ ಕೈಗಾರಿಕಾ ಮಂತ್ರಿ ಕಂ ಬಿಲ್ಡರ್ ಕಂ ನೆಲಹಿಡುಕರ ನಾಯಕ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಬಹುಶಃ ಜನಸಾಮಾನ್ಯರ ಪರವಾಗೋ ಮಾನವಂತರನ್ನು ಬೆಂಬಲಿಸಿಯೋ ರೌಡಿಗಳ ವಿರುದ್ಧ ಬೀದಿಗಿಳಿದಿದ್ದರೆ ಓರ್ವ ರಾಜಕಾರಣಿಯಾಗಿ ಕಟ್ಟಾನನ್ನು ಒಪ್ಪಬಹುದಿತ್ತು.



ಆದರೆ ಕಟ್ಟಾ ವಕಾಲತ್ತು ವಹಿಸಿದ ಗಜೇಂದ್ರ ನಾಯ್ಡು ಮತ್ತು ಚಿಟ್ಟಿಬಾಬು ಎಂಬಿಬ್ಬರೂ ಬೆಂಗಳೂರಿನ ಕುಖ್ಯಾತ ಭೂಗಳ್ಳರು. ಜೊತೆಗೆ ಕಟ್ಟಾನ ಪ್ರಚ್ಛನ್ನ ಭೂಕಬಳಿಕೆಯ ನಿಗೂಢ ಪಾರ್ಟ್‌ನರ್‌ಗಳು!

ರೌಡಿ ಪರಂಧಾಮನನ್ನು ಬೆಳೆಸಿದ್ದೇ ಈ ಗಜೇಂದ್ರ ನಾಯ್ಡು ಮತ್ತು ಚಿಟ್ಟಿಬಾಬು ಥರದ ನೆಲಹಿಡುಕರೆಂಬ ಸತ್ಯ ಇಡೀ ಬನಶಂಕರಿಗೇ ಗೊತ್ತು. ಸದ್ಯ ಲಿಂಗನ ಶಿಷ್ಯ ಕುಳ್ಳಿ ಶಿವಕುಮಾರನನ್ನು ಕೊಂದು ಜೈಲು ಪಾಲಾಗಿರುವ ಪರಂಧಾಮ ಅಂಥ ಖತರ್‌ನಾಕ್ ರೌಡಿಯೇನಲ್ಲ. ಆತನ ಶಿಷ್ಯರಾದ ಚಂದನ್ ಉರ್ಫ್ ಜಾಂಟಿ, ಕುಟ್ಟಿ ಆಲಿಯಾಸ್ ದಶರಥನ್, ಅರುಣಾ ಉರ್ಫ್ ಮಾದೇಶ, ಲಿಂಗಾ ಆಲಿಯಾಸ್ ಪುಂಗಾ ಇತ್ಯಾದಿ ಯಾರೂ ಬಿಲ್ಡರುಗಳನ್ನು ಹೊತ್ತೊಯ್ದು ಲಕ್ಷಗಳ ಕಂತೆ ಕಿತ್ತುಕೊಳ್ಳುವಂಥ ಕಸುಬು ದಾರರೂ ಅಲ್ಲ. ಪರಂಧಾಮನ ಹೆಸರಲ್ಲಿ ಜೈಲಲ್ಲೇ ಕೂತು ಮೊಬೈಲ್ ಫೋನ್ ಮೂಲಕ ಧಮಕಿ ಕೊಟ್ಟು, ಹಾಗೊಮ್ಮೆ ಜಗ್ಗದೇ ಹೋದರೆ ಹೊರಗಿರುವ ತನ್ನ ಹುಡುಗರನ್ನು ಛೂ ಬಿಟ್ಟು ಅಟ್ಯಾಕ್ ಮಾಡಿಸಿ ಬಿಲ್ಡರುಗಳನ್ನು ಸುಲಿಯುವ ತಲೆ ಮತ್ತು ತಾಖತ್ತಿರುವುದು ಸುಪಾರಿ ಕಿಲ್ಲರ್ ಸೈಕಲ್ ರವಿಗೆ ಮಾತ್ರ.



ಪರಂಧಾಮ



ಲಿಂಗಾ ಯಾನೆ ಪುಂಗಾ

ಅದು ಪೊಲೀಸರಿಗೂ ಗೊತ್ತು, ಇಡೀ ಬನಶಂಕರಿಗೆ ಇನ್ನೂ ಚೆನ್ನಾಗಿ ಗೊತ್ತು. ಇನ್ನೇನು ನಿಷ್ಠುರಿ ಇನ್ಸ್‌ಪೆಕ್ಟರ್‌ಗಳಾದ ನಂಜುಂಡೇಗೌಡ ಮತ್ತು ರೇವಣ್ಣನ ಕೈಗೆ ಸಿಕ್ಕು ಸೈಕಲ್ ರವಿ ಎನ್‌ಕೌಂಟರ್ ಆಗೇ ಹೋಗುತ್ತಾನೆಂದು ಇಡೀ ಅಂಡರ್‌ವರ್ಲ್ಡ್ ನಿರೀಕ್ಷಿಸಿತ್ತು. ಆದರೆ ಸೈಕಲ್ ರವಿ ಪ್ರಳಯಾಂತಕ. ಜ್ಞಾನಭಾರತಿ ಪೊಲೀಸರಿಗೇ ಚಳ್ಳೇಹಣ್ಣು ತಿನ್ನಿಸಿ[...] ಕೋರ್ಟಿಗೆ ಶರಣಾದ. ಸೇಫಾಗಿ ಜೈಲು[...] ಸೇರಿಕೊಂಡವನು ಅಲ್ಲಿದ್ದ ತನ್ನ ಪಕ್ಕಾ ಶಿಷ್ಯ[...] ಪರಂಧಾಮನ ಜೊತೆಯಾದ. ಅಬ್ಬಾಯಿ ಆತ್ಮಹತ್ಯೆಯ[...] ನಂತರ ಶುದ್ಧಾಂಗ ಎಕ್ಕುಟ್ಟಿ ಹೋಗಿರುವ ಪರಪ್ಪನ[...] ಅಗ್ರಹಾರ ಜೈಲಿನಲ್ಲಿ ಸದ್ಯ ಮೊಬೈಲ್ ಫೋನುಗಳ[...] ಇಟ್ಟಾಡುತ್ತಿವೆ. ತನ್ನ ಶಿಷ್ಯ ಪರಂಧಾಮನ ಹೆಸರಲ್ಲಿ[...] ತಾನೇ ಫೋನ್ ಮಾಡಿ ಬಿಲ್ಡರುಗಳನ್ನು ಸುಲಿಯುವ[...] ಸ್ಕೆಚ್ಚು ಸೈಕಲ್ ರವಿಗಲ್ಲದೇ ಇನ್ನಾರಿಗೆ ಹೊಳೆಯಲು[...] ಸಾಧ್ಯ? ಶಿಕ್ಷೆಯೇನಿದ್ದರೂ ಅದು[...] ಪರಂಧಾಮನ ತಲೆಗೆ-ದುಡ[...] ಮಾತ್ರ ತನ್ನ ಜೇಬಿಗೆ ಎಂದು ಲೆಕ್ಕ[...] ಹಾಕಿಯೇ ಸೈಕಲ್ ರವಿ ಮೊದಲು[...] ಬಿಲ್ಡರ್ ಚಿಟ್ಟಿ ಬಾಬುವಿಗೆ ಧೈ[...] ಕೊಟ್ಟಿದ್ದಾನೆ. ಹೆದರಿದ ಚಿಟ್ಟಿಬಾಬು[...] ಜೈಲಿಗೆ ಹೋಗಿ ಸೈಕಲ್ ರ[...] ಮತ್ತು ಪರಂಧಾಮ ಇಬ್ಬರನ್ನೂ[...] ಒಟ್ಟಿಗೆ ಕಂಡು ಮೂರು ಲಕ್ಷ ಒಪ್ಪಿ[...] ಬಂದಿದ್ದಾನೆ. ಅಲ್ಲಿಗೆ ರುಚಿ ಸಿ[...] ಸೈಕಲ್ ರವಿ ಗಜೇಂದ್ರ ನಾಯ್ಡುವಿ[...] ವಕ್ಕರಿಸಿದ್ದಾನೆ. ನನ್ನ ದುಷ್ಮನ್[...] ಲಿಂಗನಿಗೆ ದುಡ್ಡು ಕೊಡ್ತೀಯಾ[...] ನಂಗೆ ಕೊಡಲ್ವಾ? ಎಂದೇ ಪರಂಧಾಮನಿಂದ ಬೆದರಿ[...] ಕರೆ ಬರುತ್ತದೆಯೆಂದರೆ ಧನಿ ಪರಂಧಾಮನದ್ದಾದರೂ[...] ತಲೆ ಸೈಕಲ್ ರವಿಯದ್ದೆಂದು ಬಿಲ್ಡರ್ ಗಜೇಂದ್ರನಿ[...] ಚೆನ್ನಾಗಿ ಗೊತ್ತಿತ್ತು.

ತನ್ನ ಅಡ್ಡೆಗೆ ನುಗ್ಗಿ ಹೊಡೆದು ಕಾರ್[...] ಕಿತ್ತುಕೊಂಡು ಹೋದ ಹುಡುಗರು ಪರಂಧಾರಮನಿಗಿಂತಲೂ ಸೈಕಲ್ ರವಿಯ ಶಿಷ್ಯರೆಂಬುದು ಕೂಡ ಗಜೇಂದ್ರನಿಗೆ ಚೆನ್ನಾಗಿ ಗೊತ್ತು. ಇದು ಗೊತ್ತಿದ್ದೂ ಆತನ ಗುರು ಮಾಜಿ ಮಂತ್ರಿ ಕಟ್ಟಾ ಸೈಕಲ್ ರವಿಯ ವಿರುದ್ಧ[...] ದೂರು ಕೊಡದೇ ಏಕೆ ಪುಡಿ ಪರಂಧಾಮನ ವಿರುದ್ಧ ದೂರುತ್ತಿದ್ದಾನೆ?

ಬಹುಶಃ ಸೈಕಲ್ ರವಿಯನ್ನು ಕಟ್ಟಾ[...] ಮಗ ಕೂಡ ತನ್ನ ಲ್ಯಾಂಡ್ ಗ್ರಾಬಿಂಗ್‌ಗ[...] ಬಳಸಿದ್ದನೆ? ಅಥವಾ ಪರಂಧಾಮನಿಗೆ ಬಿಸಿ ಮುಟ್ಟಿದರೆ ಸೈಕಲ್ ಬಾಲ ಮುದುರಿಕೊಳ್ಳುತ್ತಾನೆಂಬ ಹುನ್ನಾರವೆ?


ಪದ್ಮನಾಭನಗರದ ನಾಯ್ಡು ಬಿಲ್ಡರುಗಳು ಹುಟ್ಟು ಹಾಕಿದ ಪಾತಕಿಗಳು ಈಗ ಅವರ ರಕ್ತವನ್ನೇ ಚಪ್ಪರಿಸುತ್ತಿರುವುದು ಎಂಥಾ ವಿಕಟವಲ್ಲವೆ?

-ರಾ.ಸೋ[...]

ಚಿತ್ರದುರ್ಗ: ಕಿರಿಕ್ ಕಮಿಷನರ್‌ಗೆ ಕಡಿವಾಣ ಇಲ್ಲವೆ?

ಚಿತ್ರದುರ್ಗದ ಮುನಿಸಿಪಾಲಿಟಿ ಕಮಿಷನರ್ ಜಯಣ್ಣ ಎಂಬಾತ ತನ್ನ ವಶೀಲಿಬಾಜಿ ಕಾರ್ಯಶೈಲಿಯಿಂದ ಒಂದು ಕಡೆ ಜನರನ್ನು, ಮತ್ತೊಂದು ಕಡೆ ನೌಕರರನ್ನು ಪೀಡಿಸುತ್ತಾ ಇನ್ನಿಲ್ಲದ ಕುಖ್ಯಾತಿಯನ್ನು ಮೈಗೂಡಿಸಿಕೊಳ್ಳುತ್ತಿದ್ದಾನೆ.

ಈತನೆದು ಅತಿಯಾದ ಈಗೋ ಪ್ರಾಬ್ಲಂ. ತನ್ನ ಅಧೀನ ನೌಕರರ ಬಗ್ಗೆ ಕನಿಷ್ಠ ವಿಶ್ವಾಸವನ್ನೂ ಇಡಲಾರ. ಪ್ರತಿಯೊಂದು ಕಡತಕ್ಕೂ ಯಾವುದಾದರೊಂದು ಆಕ್ಷೇಪಣೆ ಮಾಡುವುದು ಹಾಗೂ ಸಣ್ಣಪುಟ್ಟದ್ದನ್ನು ಗುಡ್ಡ ಮಾಡಿ ನೋಡುವ ಪ್ರವೃತ್ತಿಯಿಂದಾಗಿ ಮುನಿಸಿಪಾಲಿಟಿ ನೌಕರರ ಪಾಲಿಗಂತೂ ದೊಡ್ಡ ತಲೆನೋವಾಗಿ ಪರಿಣಮಿಸಿದ್ದಾನೆ.



ಖಾತೆ ಬದಲಾವಣೆ, ಕಟ್ಟಡ ನಿರ್ಮಾಣದ ಪರವಾನಗಿ ಈತನ ವಶೀಲಿಬಾಜಿಯ ಮೂಲಗಳು. ಸಾಮಾನ್ಯವಾಗಿ ನಾಗರಿಕರು ಖಾತೆ ಬದಲಾವಣೆಗೆ ಅರ್ಜಿ ಕೊಟ್ಟ ನಂತರ ಮುನಿಸಿಪಾಲಿಟಿಯಿಂದ ಮೂವತ್ತು ದಿನಗಳ ನೋಟಿಸ್ ನೀಡಲಾಗುತ್ತದೆ. ಈ ಗಡುವು ಮುಗಿದ ಮೇಲೆ ರೆವಿನ್ಯೂ ಇನ್ಸ್‌ಪೆಕ್ಟರ್ ಸ್ಥಳ ತನಿಖೆ ಮಾಡಿ-ಅಭಿಪ್ರಾಯ ಕೊಡುತ್ತಾರೆ. ಇದನ್ನು ಪರಿಶೀಲಿಸಿ ಕಛೇರಿ ವ್ಯವಸ್ಥಾಪಕರು ಅಭಿಪ್ರಾಯ ನೀಡುತ್ತಾರೆ. ಇದನ್ನು ಆಧರಿಸಿ ಕಮಿಷನರ್ ಆದವರು ಖಾತೆ ಬದಲಾವಣೆ ಮಾಡಬಹುದು. ಆದರೆ ಕಮಿಷನರ್ ಜಯಣ್ಣ ಹಾಗೆ ಮಾಡುವುದಿಲ್ಲ, ಪ್ರತಿಯೊಂದಕ್ಕೂ ಸ್ಥಳ ತನಿಖೆ ಅಂತಾ ನಗರದ ಬೀದಿಬೀದಿಯಲ್ಲಿ ಠಳಾಯಿಸುತ್ತಾನೆ. ಸಂಬಂಧಪಟ್ಟ ಅರ್ಜಿದಾರರು ಕಮಿಷನರ್ ಜಯಣ್ಣನಿಗೆ ದರ್ಶನ ನೀಡದ ಹೊರತು ಆ ಕೆಲಸ ಆಗುವುದೇ ಇಲ್ಲ.

ಕಟ್ಟಡ ನಿರ್ಮಾಣ ಪರವಾನಗಿ ಪಡೆಯುವ ಪ್ರಕ್ರಿಯೆ ಕೂಡಾ ಇದೇ ರೀತಿಯದಾಗಿರುತ್ತದೆ. ಕಟ್ಟಡ ನಿರ್ಮಾಣ ಪರವಾಗಿ ಅರ್ಜಿಯನ್ನು ಅರ್ಜಿದಾರ ನೀಡಿದ ನಂತರ ಅದನ್ನು ನಗರ ಯೋಜನಾ ಕಚೇರಿಗೆ ಕಳುಹಿಸಲಾಗುತ್ತದೆ. ಅವರು ಸ್ಥಳ ತನಿಖೆ ಮಾಡಿ ನಿರ್ಮಾಣಕ್ಕೆ ಶಿಫಾರಸ್ಸು ಮಾಡಿಕಳುಹಿಸುತ್ತಾರೆ. ಇದಾದ ನಂತರ ನಗರಸಭೆಯ ಆರೋಗ್ಯ ನಿರೀಕ್ಷಕರು ಸ್ಥಳ ತನಿಖೆ ಮಾಡಿ ವರದಿ ನೀಡುತ್ತಾರೆ. ಜೂನಿಯರ್ ಇಂಜಿನಿಯರ್, ಸಹಾಯಕ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಂತಿಮ ಪರಿಶೀಲನೆ ಮಾಡಿ ಓ.ಕೆ. ಮಾಡ್ತಾರೆ. ಇಷ್ಟೆಲ್ಲಾ ಪ್ರಕ್ರಿಯೆ ಮುಗಿದ ನಂತರ ಕಮಿಷನರ್ ಕರ್ನಾಟಕ ಪೌರಸಭೆಗಳ ಅಧಿನಿಯಮ 1964, ನಿಯಮ 182 ಪ್ರಕಾರ ಲೆಸೆನ್ಸ್ ಕೊಡಬೇಕು. ಏನಾದರೂ ಲೋಪದೋಷಗಳಿದ್ದಲ್ಲಿ ಟಿಪ್ಪಣಿ ಹಾಕಿ ತಡೆಹಿಡಿಯಬಹುದು. ಕಮಿಷನರ್ ಜಯಣ್ಣ ಇಂತಹ ಅರ್ಜಿದಾರರಿಗೆ ಪರವಾನಗಿಯನ್ನೂ ನೀಡದೆ, ಪರವಾನಗಿ ನೀಡದಿರುವುದಕ್ಕೆ ಕಾರಣವನ್ನೂ ಕೊಡದೆ ಸುಖಾಸುಮ್ಮನೆ ತಡೆಯೊಡ್ಡುತ್ತಾನೆ. ಮತ್ತೆ ಯಥಾಪ್ರಕಾರ ಕಟ್ಟಡ ಪರವಾನಗಿ ಕೋರಿರುವ ಅರ್ಜಿದಾರರು ಕಮಿಷನರ್ ಜಯಣ್ಣನ ದರ್ಶನ ಮಾಡಲೇಬೇಕು. ಇಲ್ಲವಾದರೆ ಸಾಕ್ಷಾತ್ ಕಮಿಷನರ್ ಸಾಹೇಬರೇ ಜೀಪಿನಲ್ಲಿ ಡ್ರೈವರ್ ಒಬ್ಬನನ್ನೇ ಕರೆದುಕೊಂಡು ಅರ್ಜಿದಾರರ ಮನೆಬಾಗಿಲು ಬಡಿಯುತ್ತಾರೆ. ಕಮಿಷನರ್ ಆಗಿ ಜಯಣ್ಣನಿಗೆ ಸ್ಥಳ ತನಿಖೆ ಅಥವಾ ವಿಚಾರಣೆ ನಡೆಸುವ ಅಧಿಕಾರವೇನೋ ಇದೆ. ಆದರೆ ಜಯಣ್ಣ ಮಾತ್ರ 'ಸ್ಥಳ ತನಿಖೆ' ಎಂಬ ಅಸ್ತ್ರವನ್ನು ವಶೀಲಿಬಾಜಿ ಉದ್ದೇಶದಿಂದಲೇ ಮಾಡುತ್ತಾನೆ.

ಜಯಣ್ಣನ ಈ ವಶೀಲಿಬಾಜಿ ಹಾಗೂ ನೌಕರಪೀಡನಾ ಪ್ರವೃತ್ತಿ ಹದ್ದುಮೀರಿರುವುದಕ್ಕೆ ಕೌನ್ಸಿಲ್ ಇನ್ನೂ ಅಸ್ತಿತ್ವಕ್ಕೆ



ಬಾರದಿರುವುದು ಹಾಗೂ ನಗರಸಭೆಯ ಆಡಳಿತಾಧಿಕಾರಿಯಾಗಿರುವ ಅಮ್ಲಾನ್ ಆದಿತ್ಯ ಬಿಶ್ವಾಸ್ ನಗರಸಭೆಯ 186 ಕೇಸುಗಳ ಬಗ್ಗೆ ತಲೆ ಹಾಕದಿರುವುದು.

ಜಿಲ್ಲಾಧಿಕಾರಿಗಳ ಕಾರ್ಯವೈಖರಿಯ ಬಗ್ಗೆ ಯಾವುದೇ ರೀತಿಯ ಅಪಸ್ವರಗಳು ಕೇಳಿಬರುತ್ತಿಲ್ಲ, ಆದರೆ ಕಮಿಷನರ್ ಜಯಣ್ಣ ಮಾತ್ರ ನಗರಸಭೆ ನೌಕರರು ಮತ್ತು ಜಿಲ್ಲಾಧಿಕಾರಿಗಳ ನಡುವೆ ವ್ಯವಸ್ಥಿತವಾಗಿ ಗ್ಯಾಪ್ ಕ್ರಿಯೆಟ್ ಮಾಡುತ್ತಿದ್ದಾನೆ. ತಾನಾಯಿತು, ತನ್ನ ಕೆಲಸವಾಯಿತು ಎಂಬಂತಿರುವ ಜಿಲ್ಲಾಧಿಕಾರಿಗಳ ಹೆಸರಲ್ಲೇ ಗುತ್ತಿಗೆದಾರರಿಂದ ಪರ್ಸೆಂಟೇಜ್ ಗುಂಜುವ ಕೆಲಸಕ್ಕೆ ಕೈ ಹಾಕಿದ್ದಾನೆಂದರೆ ನೀವೇ ಊಹಿಸಿ.

ಪ್ರಸ್ತುತ ನಗರದಲ್ಲಿ ನಗರಸಭೆಗೆ ಸೇರಿದ 120 ಕ್ಕೂ ಹೆಚ್ಚು ಮಳಿಗೆಗಳ ಲೀಸ್ ಅವಧಿ ಮುಗಿದಿದೆ. ಈ ಮಳಿಗೆಗಳಲ್ಲಿ ತರಕಾರಿ, ಮೀನು, ಮಟನ್ ಮಾರ್ಕೆಟ್ ಎಲ್ಲಾ ಸೇರಿದೆ. ಈ ಮಳಿಗೆಗಳ ಮಾಲೀಕರಿಂದ ಲೀಸ್ ರಿನ್ಯೂವಲ್ ಮಾಡಿಕೊಡುವ ಹೆಸರಿನಲ್ಲಿ ಪೊಳ್ಳು ಆಶ್ವಾಸನೆ ನೀಡಿ ವಸೂಲಿಗಿಳಿದಿದ್ದಾನೆ. ವಾಸ್ತವವಾಗಿ ಈ ಮಳಿಗೆಗಳನ್ನು ನೀಡಲು ಹೊಸದಾಗಿ ಸಾರ್ವಜನಿಕ ಟೆಂಡರು ಕರೆಯಬೇಕು.

ಈತನ ಕಾರ್ಯಶೈಲಿಯ ಬಗ್ಗೆ ಟೀಕಿಸಿದವರನ್ನು ಮಾಜಿ ಶಾಸಕ ಎಚ್. ಆಂಜನೇಯ ಅವರ ಹೆಸರನ್ನು ಹೇಳಿ ಬೆದರಿಸುವ ತಂತ್ರ ರೂಢಿಸಿಕೊಂಡಿದ್ದಾನೆ. ಇವನ ಕಿರಿಕ್ ಶೈಲಿಯ ಕಾರ್ಯವೈಖರಿಯಿಂದ ರೋಸಿಹೋಗಿರುವ ನಗರಸಭೆಯ ನೌಕರರು ಯಾವಾಗ ಬೇಕಾದರೂ ಸಿಡಿದೇಳುವ ಪರಿಸ್ಥಿತಿ ಇದೆ. ಯಾವುದೇ ಕ್ಷಣದಲ್ಲಾದರೂ ನೌಕರರು ಬೀದಿಗಿಳಿಯಬಹುದು.

ಜಿಲ್ಲಾಧಿಕಾರಿ ಅಮ್ಲಾನ್ ಆದಿತ್ಯ ಬಿಸ್ವಾಸ್ ಕನಿಷ್ಠ ಕೌನ್ಸಿಲ್ ಅಸ್ತಿತ್ವಕ್ಕೆ ಬರುವ ತನಕ ನಗರಸಭೆಯ ಆಡಳಿತದತ್ತ ಗಮನಹರಿಸಿ, ಜಯಣ್ಣನ ವಶೀಲಿಬಾಜಿ ಹಾಗೂ ಪೀಡನೆಯ ಪ್ರವೃತ್ತಿಗೆ ಕಡಿವಾಣ ಹಾಕಬೇಕು.


ಈತನ ಸರ್ವಿಸ್ ರೆಕಾರ್ಡ್ ಖರಾಬಾಗಿದೆ. ಎಫ್‌ಡಿಸಿಯಾಗಿ ಇಲಾಖೆಗೆ ವಕ್ಕರಿಸಿದ ಜಯಣ್ಣ ದಾವಣಗೆರೆ, ಹರಿಹರ, ಚಳ್ಳಕೆರೆ, ಹರಪನಹಳ್ಳಿ, ಶಿರಾ, ಗಂಗಾವತಿ, ಹುಕ್ಕೇರಿ, ಚಿಕ್ಕಬಳ್ಳಾಪುರ.... ಹೀಗೆ ತಾನು ಸೇವೆ ಮಾಡಿದಲ್ಲೆಲ್ಲಾ ತನ್ನ ವಶೀಲಿಬಾಜಿ ನಡವಳಿಕೆಯಿಂದ ಕುಖ್ಯಾತಿ ಪಡೆದಿದ್ದಾನೆ. ಒಮ್ಮೆ ಲೋಕಾಯುಕ್ತರ ಬಲೆಗೂ ಬಿದ್ದಿದ್ದ. ಇದಿಷ್ಟನ್ನು ಗಮನದಲ್ಲಿರಿಸಿಕೊಂಡು ಜಿಲ್ಲಾಧಿಕಾರಿಗಳು ಈತನ ಆಡಳಿತ ವ್ಯವಹಾರಗಳ ಮೇಲೆ ಕಣ್ಣಿಡಬೇಕು.

■ ವರದಿಗಾರ

ಮಂಗಳೂರು

ಹುಂಬ ವರ್ಗೀಸ್ ಮಾಡಿದ ಕೊಲೆ

ಮೊನ್ನೆ ಡಿಸೆಂಬರ್ ಒಂದರಂದು ರಾತ್ರಿ ನಡೆದ ಘಟನೆಯಿದು. ದಕ್ಷಿಣ ಕನ್ನಡ ಜಿಲ್ಲೆಯ ನೆಲ್ಯಾಡಿ ಎಂಬ ಊರಿನ ಇಲೀಟ್ ರಬ್ಬರ್ ಫ್ಯಾಕ್ಟರಿಯ ಮಾಲಿಕ ವರ್ಗೀಸ್ ತನ್ನ ಫ್ಯಾಕ್ಟರಿಯ ಕಾವಲುಗಾರ ಜೋಬಿನ್ ಯಾನೆ ಜೋಬಿಯನ್ನು ಗುಂಡಿಕ್ಕಿ ಸಾಯಿಸಿದ್ದಾನೆ.



ಅದು ನಡೆದದ್ದು ಹೀಗೆ...

'ಬೇಲಿಯೇ ಎದ್ದು ಹೊಲ ಮೇಯಿತು' ಎಂಬ ಗಾದೆಯೊಂದಿದೆಯಲ್ಲ, ವರ್ಗೀಸ್‌ನ ರಬ್ಬರ್ ಫ್ಯಾಕ್ಟರಿಯಲ್ಲಿ ಕಾವಲುಗಾರನಾಗಿದ್ದ ಜೋಬಿನ್‌ನದೂ ಹೆಚ್ಚುಕಡಿಮೆ ಇಂತಹದೇ ಕೃತ್ಯ. ಮೊದಮೊದಲು ಫ್ಯಾಕ್ಟರಿಯಲ್ಲಿ ಗುಜರಿ ಸಾಮಾನುಗಳನ್ನು ಕದ್ದು ಮಾರಿಕೊಂಡಿದ್ದ. ನಂತರ ಕಳ್ಳತನದ ರುಚಿ ತಲೆಗೆ ಹತ್ತಿದಂತೆ ಫ್ಯಾಕ್ಟರಿಯಲ್ಲಿ ಜೋಡಿಸಿಟ್ಟಿದ್ದ ರಬ್ಬರ್ ಶೀಟುಗಳನ್ನು ಕದಿಯಲಾರಂಭಿಸಿದ. ಕಳ್ಳತನವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವುದಕ್ಕೆ ತನ್ನ ಇನ್ನೊಬ್ಬ ಸಹೋದ್ಯೋಗಿ ಕಾವಲುಗಾರನನ್ನೂ ಪಾರ್ಟನರ್ ಆಗಿ ಸೇರಿಸಿಕೊಂಡಿದ್ದ. ಪ್ರಾಯಶಃ ಇಲ್ಲೇ ಆತ ಎಡವಿದ. ಇದು ಫ್ಯಾಕ್ಟರಿಯ ಮಾಲಿಕ ವರ್ಗೀಸ್‌ನ ಕಿವಿ ತಲುಪುವುದಕ್ಕೆ ಜಾಸ್ತಿ ದಿನ ಬೇಕಾಗಲಿಲ್ಲ. ಜೋಬಿನ್‌ನನ್ನು ರೆಡ್ ಹ್ಯಾಂಡಾಗಿ ಹಿಡಿಯಬೇಕೆಂದು ಸ್ಕೆಚ್ ಹಾಕಿದ ವರ್ಗೀಸ್ ಅದಕ್ಕಾಗಿ ಸಮಯ ಸಾಧಿಸತೊಡಗಿದ.

ಮೊನ್ನೆ ಶನಿವಾರ ರಾತ್ರಿ ಜೋಬಿನ್ ರಬ್ಬರ್ ಕದಿಯುವ ಯೋಜನೆ ತಿಳಿಯುತ್ತಿದ್ದಂತೆ ವರ್ಗೀಸ್ ನೆಲ್ಯಾಡಿಯ ಪೊಲೀಸರಿಗೆ ವಿಷಯ ತಿಳಿಸಿ ರೆಡ್‌ಹ್ಯಾಂಡ್ ಆಗಿ ಹಿಡಿಯುವಂತೆ ಮನವಿ ಮಾಡಿದ. ಆದರೆ ಸಿಬ್ಬಂದಿಯ ಕೊರತೆಯ ಸಬೂಬು ಹೇಳಿದ ಪೊಲೀಸರು ವರ್ಗೀಸ್‌ನನ್ನು ಸಾಗಹಾಕಿದರು. ಹೇಗಾದರೂ ಮಾಡಿ ಹಿಡಿಯಲೇ ಬೇಕೆಂದು ಹಟತೊಟ್ಟಿದ್ದ ವರ್ಗೀಸ್ ಜೇಮ್ಸ್ ಬಾಂಡ್ ರೀತಿಯಲ್ಲಿ ಒಬ್ಬಂಟಿಯಾಗಿಯೇ ಪಿಸ್ತೂಲ್ ಹಿಡಿದು ಕಾರ್ಯಾಚರಣೆಗಿಳಿದುಬಿಟ್ಟ.

ಅಷ್ಟೊತ್ತಿಗಾಗಲೇ ನೆಲ್ಯಾಡಿಯ ಚರಣ್ ಬಾರ್‌ನಲ್ಲಿ ಕಂಠಪೂರ್ತಿ ಕುಡಿದು ಅಮಲೇರಿಸಿಕೊಂಡಿದ್ದ ಜೋಬಿನ್ ಧಣಿ ವರ್ಗೀಸ್‌ನನ್ನು ಮಧ್ಯರಾತ್ರಿ ನೋಡಿ ಅವಾಕ್ಕಾದ. ಆದರೆ ಅವನೂ ಹಟ ಬಿಡದವನಂತೆ ನೇರವಾಗಿ ವರ್ಗೀಸ್ ಮೇಲೆಯೇ ಎರಗಿಬಿಟ್ಟ. ತನ್ನ ಆತ್ಮರಕ್ಷಣೆಗೆ ಅಂತ ಇಟ್ಟುಕೊಂಡಿದ್ದ ಪಿಸ್ತೂಲನ್ನು ವರ್ಗೀಸ್ ಹೊರತೆಗೆದಿದ್ದೇ ತಡ ಅದನ್ನೂ ಕಿತ್ತುಕೊಳ್ಳಲು ಜೋಬಿನ್ ಮುಂದಾಗಿದ್ದಾನೆ. ಹಠವಾದಿ ವರ್ಗೀಸ್ ಒಂದಿಷ್ಟೂ ತಾಳ್ಮೆವಹಿಸದೇ ಟ್ರಿಗರ್‌ನ್ನು ಎಳೆದೇ ಬಿಟ್ಟ. ಗುಂಡು ನೇರವಾಗಿ ಜೋಬಿನ್‌ನ ಎದೆಯೊಳಗೆ ನುಗ್ಗಿ ಆತ ಸ್ಥಳದಲ್ಲಿಯೇ ಕುಸಿದುಬಿದ್ದ, ತಕ್ಷಣ ಆತನನ್ನು ವರ್ಗೀಸನೇ ಖುದ್ದಾಗಿ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ಒಯ್ದಿದ್ದಾನೆ. ಅಷ್ಟರಲ್ಲಾಗಲೇ ಜೋಬಿನ್‌ನ ಜೀವ ಹಾರಿಹೋಗಿತ್ತು. ಅಲ್ಲಿಂದ ನೇರವಾಗಿ ವರ್ಗೀಸ್ ಉಪ್ಪಿನಂಗಡಿ ಪೊಲೀಸ್ ಠಾಣೆಗೆ ಹೋಗಿ ಸರೆಂಡರ್ ಆಗಿದ್ದಾನೆ.

ರಬ್ಬರ್ ಮಾಡಿದ ಮೋಡಿ!

ಮಿನಿ ಕೇರಳದಂತಿರುವ ನೆಲ್ಯಾಡಿಗೆ ಕೃಷಿ ಭೂಮಿ ಅರಸುತ್ತಾ ವಲಸೆ ಬಂದು ನೆಲೆಸಿದ ಮಲೆಯಾಳಿಗಳಲ್ಲಿ ವರ್ಗೀಸ್ ಕೂಡ ಒಬ್ಬ. ಮೊದಮೊದಲು ಆತನಿಗೆ ಇಲ್ಲಿನ ಪರಿಸರಕ್ಕೆ ಹೊಂದಿಕೊಳ್ಳುವುದೇ ದುಸ್ತರವಾಗಿತ್ತು. ಯಾವಾಗ ಅವನು ರಬ್ಬರ್ ವ್ಯಾಪಾರಕ್ಕೆ ಕೈಹಾಕಿದನೋ ಅವನ ಜೀವನವೇ ಬದಲಾಗಿಹೋಯಿತು. ಬ್ಯಾಂಕಿನಲ್ಲಿ ಸಾಲ ಮಾಡಿ ನೆಲ್ಯಾಡಿಯಲ್ಲಿ ರಬ್ಬರ್ ಫ್ಯಾಕ್ಟರಿ ತೆರೆಯುವುದಕ್ಕೂ ರಬ್ಬರ್ ಬೆಲೆ ಗಗನಕ್ಕೇರುವುದಕ್ಕೂ ಸರಿಯಾಗಿ ವರ್ಗೀಸ್‌ನ ಅದೃಷ್ಟ ಖುಲಾಯಿಸಿಬಿಟ್ಟಿತು. ಅಂದಿನಿಂದಲೇ ಈತನಿಗೆ ರಬ್ಬರ್ ವರ್ಗೀಸ್ ಎಂಬ ಅನ್ವರ್ಥನಾಮವೇ ಬಂದುಬಿಟ್ಟಿದೆ.

ರಬ್ಬರ್ ಫ್ಯಾಕ್ಟರಿಯಿಂದ ಕಮಾಯಿಸಿದ ದುಡ್ಡನ್ನು ವರ್ಗೀಸ್ ಕಂಡಕಂಡಲ್ಲಿ ಜಮೀನು ಖರೀದಿಸುವುದಕ್ಕೆ ವಿನಿಯೋಗಿಸತೊಡಗಿದ. ಸಕಲೇಶಪುರ ಬಳಿಯ ಮಾರನಹಳ್ಳಿಯಲ್ಲಿ ಈತ ಖರೀದಿಸಿದ ಎಸ್ಟೇಟ್‌ನಲ್ಲಿಯೇ ಮುತ್ತಪ್ಪ ರೈನ ಶಿಷ್ಯ ಸುಧೀರ್ ಪ್ರಭು ಈತನನ್ನು ಎರಡು ವರ್ಷಗಳ ಹಿಂದೆ ಕಿಡ್ನಾಪ್ ಮಾಡಿ ತೊಂಭತ್ತು ಸಾವಿರ ರೂ. ಪೀಕಿಸಿದ್ದ. ಈ ಕಿಡ್ನಾಪ್ ಪ್ರಕರಣದ ಮೂಲಕವೇ ವರ್ಗೀಸ್ ಅಂದು ರಾಜ್ಯವ್ಯಾಪಿ ಪ್ರಚಾರಕ್ಕೆ ಬಂದಿದ್ದ.

ಇದೇ ಪ್ರಥಮವೇನಲ್ಲ

ಸುಧೀರ್ ಪ್ರಭು ವರ್ಗೀಸ್‌ನನ್ನು ಕಿಡ್ನಾಪ್ ಮಾಡಿದ ನಂತರ ಉಪ್ಪಿನಂಗಡಿಯ ಪೊಲೀಸ್ ಕಡತದಲ್ಲಿ ರಬ್ಬರ್ ವರ್ಗೀಸ್‌ನದು ಸದಾ ಚಲಾವಣೆಯಲ್ಲಿರುವ ಹೆಸರಾಗಿಬಿಟ್ಟಿದೆ. ಒಂದು ವರ್ಷದ ಹಿಂದೆ ಈತನ ಮಗ ಶಿಬು, ಆಗತಾನೆ ಕೊಂಡು ತಂದಿದ್ದ ಪಿಸ್ತೂಲನ್ನು ನೆಲ್ಯಾಡಿಯ ಚರಣ್ ಬಾರ್‌ನಲ್ಲಿ ತನ್ನ ಸ್ನೇಹಿತರಿಗೆ ತೋರಿಸುತ್ತಾ ಶೋಕಿ ನಡೆಸಿದ್ದ. ಗುಂಡಿನ ಗಮ್ಮತ್ತಿನಲ್ಲಿದ್ದ ಶಿಬು ರಿವಾಲ್ವಾರ್‌ನ ಟ್ರಿಗರ್ ಎಳೆದುಬಿಟ್ಟಿದ್ದ. ಅವತ್ತು ಅವನ ಅದೃಷ್ಟ ಚೆನ್ನಾಗಿತ್ತು, ಗುಂಡು ಯಾರಿಗೂ ತಾಗದೇ ದಿನೂ ಅನಾಹುತವಾಗಿರಲಿಲ್ಲ. ಈ ಬಾರಿ ಖುದ್ದು ವರ್ಗೀಸ್‌ನೇ ಗುಂಡುಹಾರಿಸಿ ಕಾವಲುಗಾರನನ್ನು ಕೊಂದಿದ್ದಾನೆ. ಮಂಗಳೂರಿನ ಜನಕ್ಕೆ ಅಪ್ಪ ಮಕ್ಕಳಿಂದ ಇನ್ನೇನು ಕಾದಿದೆಯೋ?

■ ಪಿ.ಪಿ

ಸುಮ್ ಸುಮ್ಮನೆ



ಇದೀಗ ಬಂದಿರುವ ತಾಜಾ ಸುದ್ದಿ:

ಜಾತ್ಯತೀತ ಜನತಾದಳದ ಸುಪ್ರಿಮೋ ದೇವೇಗೌಡರು ಹೊಸ ರಾಜಕೀಯ ಪಕ್ಷವನ್ನು ಸ್ಥಾಪಿಸಲು ನಿರ್ಧರಿಸಿದ್ದಾರೆ.

ಹೊಸ ಪಕ್ಷದ ಹೆಸರು 'ನಾನು ನನ್ನ ಮಕ್ಕಳು' ಎಂಬುದಾಗಿದ್ದು ಅದರ ಗುರುತು ತೆನೆಹೊತ್ತ ಮಹಿಳೆಯ ಬದಲಾಗಿ 'ಮಕ್ಕಳ ಹೊತ್ತ ಮುದುಕ' ಆಗಿರುತ್ತದೆ.

"ಯಾರ್ರೀ ಆ......"

ಜಗತ್ತಿನಲ್ಲಿ ಅತಿ ದೊಡ್ಡ ಫೂಲ್ ಎಂಬ ಗಿನ್ನಿಸ್ ದಾಖಲೆ ಸ್ಥಾಪಿಸಿದ್ದ ಸರದಾರ್ಜಿಯೊಬ್ಬ ಆಕಸ್ಮಾತ್ ತನ್ನನ್ನು ಆ ಸ್ಥಾನದಿಂದ ಯಾರಾದರೂ ಉಚ್ಚಾಟನೆಗೊಳಿಸಿದ್ದರೆ ಕತೆ ಏನು ಎಂದು ಚಿಂತಾಕ್ರಾಂತನಾದ. ಆದ್ದರಿಂದ ತಾನೂ ಇನ್ನೂ ಅತಿ ದೊಡ್ಡ ಫೂಲ್ ಆಗಿ ಉಳಿದಿದ್ದೇನೋ ಇಲ್ಲವೋ ಎಂದು ಖಾತ್ರಿಪಡಿಸಿಕೊಳ್ಳಲು ಗಿನ್ನಿಸ್ ಸಂಸ್ಥೆಯ ಕಚೇರಿಗೆ ಭೇಟಿ ನೀಡಿದ.

ಆದರೆ ಸ್ವಲ್ಪ ಹೊತ್ತಿನಲ್ಲೇ ಹೊರಬಂದ ಸರ್ದಾರ್ಜಿ "ಯಾರ್ರೀ ಆ ಯಡ್ಯೂರಪ್ಪ....!" ಎಂದು ಶಪಿಸುತ್ತಿದ್ದ!



ಉಡುಪಿ: ಸೌಹಾರ್ದ ಸಾಹಿತ್ಯ ಸಮ್ಮೇಳನ



ಕ.ಸಾ.ಪ. ಸಮ್ಮೇಳನಕ್ಕೆ ಪ್ರತಿರೋಧದ ಹಿನ್ನೆಲೆ

"ಇಲ್ಲಿ ಕಟ್ಟಿಗೆ ತೇರು ವರ್ಷ ವರ್ಷಕ್ಕೇರು
ಅಕ್ಕಿ ಮುಡಿಮುಡಿ, ವಾದಿರಾಜಗುಳ್ಳ
ಪ್ರಾಣ ಮುಖ್ಯರ ಮುಟ್ಟುಚಟ್ಟು ತೊಟ್ಟಿಗಳಲ್ಲಿ
ನಿಂತ ನೀರಿನ ವಾಸ ಸುತ್ತಲೆಲ್ಲ

....

ಧನಕನಕವಸ್ತು ವಾಹನದ ಭೋಗದ ಮೇಲೆ
ವಿಷವ್ಯೂರಿ ಮಲಗಿರುವ ವಿಕೃತ ಮುದ್ರೆ
ಇಲ್ಲಿ ಸಲ್ಲದ ಅಲ್ಲು ಕೂಡ ಸಲ್ಲದ ಚಿನ್ನ
ಸವರಿ ಇಟ್ಟಿರುವ ಹಿತ್ತಾಳೆ ಟಂಕೆ"

(ಗೋಪಾಲಕೃಷ್ಣ ಅಡಿಗರ "ಆನಂದ ತೀರ್ಥರಿಗೆ" ಕವನದಲ್ಲಿ ಉಡುಪಿ ಕುರಿತ ಸಾಲುಗಳು).

"ಕತ್ತಲೆಂದರೆ ಕತ್ತಲು. ಕಣ್ಣಿಗೆ ಕಣ್ಣು ತಾಗಿಸಿದರೂ ಏನೂ ಕಾಣುವ ಹಾಗಿಲ್ಲ"

(ಶಿವರಾಮ ಕಾರಂತರ ಕಾದಂಬರಿ "ಚೋಮನ ದುಡಿ"ಯ ಮೊದಲ ಸಾಲು).

ನಾಡಿನ ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರವೂ ಶೈಕ್ಷಣಿಕ ಕೇಂದ್ರವೂ ಆಗಿರುವ ಉಡುಪಿಯನ್ನು ಈಗ ಆವರಿಸಿಕೊಂಡಿರುವ "ತಮಂಧದ ಕೇಡಿ"ಗೆ ಮೇಲಿನ ಎರಡು ಉಧೃತಗಳು ರೂಪಕಗಳಾಗಬಲ್ಲವು. ಗೋಪಾಲಕೃಷ್ಣ ಅಡಿಗರು, ತಮ್ಮ ಕವನದಲ್ಲಿ ಉಡುಪಿಯ ಸದ್ಯದ ಆಧ್ಯಾತ್ಮಿಕ ಅಧೋಗತಿಯ ಬಗ್ಗೆ ಹೇಳಿರುವುದನ್ನು ಇಲ್ಲಿನ ಎಂಟು ಮಠಗಳ ಮಾಧ್ವಯತಿಗಳು ಓದಿದರೆ ಮೂರ್ಛೆ ಹೋಗುವುದು ನಿಶ್ಚಯ. ಸಾಹಿತ್ಯ ಮುಂತಾದ್ದರ ಕುರಿತು ಈ ಯತಿಗಳ ಅನಕ್ಷರತೆಯೇ ಅವರನ್ನು ಬಚಾವು ಮಾಡಿದೆ. 1933 ರಲ್ಲಿ ಪ್ರಕಟವಾದ ಶಿವರಾಮ ಕಾರಂತರ ಚೋಮನದುಡಿ, ದಕ್ಷಿಣ ಕನ್ನಡ ಜಿಲ್ಲೆಯ ಕುಗ್ರಾಮವೊಂದರ ಅಸ್ಪೃಶ್ಯರ ಬದುಕಿನ ದುಃಖದುಮ್ಮಾನಗಳನ್ನೂ, ಅದೆಲ್ಲದರ ನಡುವೆಯೇ ತಲೆ ಎತ್ತಿ ಬಾಳಲು ಅವರು ನಡೆಸುವ ಹೋರಾಟವನ್ನೂ ಚಿತ್ರಿಸುವ ಕಾದಂಬರಿ. ಚೋಮ ಈ ನಾಡಿನ ಎಲ್ಲ ನೊಂದವರು, ಅವಮಾನಿತರು ಮತ್ತು ಅಂಚಿಗೆ ತಳ್ಳಲ್ಪಟ್ಟವರ ಸಾರ್ವಕಾಲಿಕ ಪ್ರತಿಮೆ. ಕಾದಂಬರಿಯ ಮೊದಲ ಸಾಲು, ಕಥಾನಕದ ಕಾಲದ ಒಂದು ಇರುಳಿನ ಕತ್ತಲೆಯ ನಿರೂಪಣೆಯೂ ಹೌದು; ಸಮಾಜದ ಪ್ರಜ್ಞೆಯನ್ನು ಆವರಿಸಿಕೊಂಡಿರುವ 'ತಮಂಧದ' ರೂಪಕವೂ ಹೌದು.

ಉಡುಪಿ 'ನಮ್ಮವರು' ಎಂದು ಸಕಾರಣವಾಗಿ ಹೆಮ್ಮೆ ಪಟ್ಟುಕೊಳ್ಳಬಹುದಾದ ಇಬ್ಬರು ಧೀಮಂತರನ್ನು ಈ ಹೊತ್ತು ನೆನಪಿಸಿಕೊಳ್ಳುತ್ತಿರುವುದಕ್ಕೆ ಕಾರಣವಿದೆ. ಕ.ಸಾ.ಪ. ಸಾಹಿತ್ಯ ಸಮ್ಮೇಳನವೆಂಬ ಜನಜಂಗುಳಿಯ ವರ್ಷಾವಧಿ ಜಾತ್ರೆ ಈ ಬಾರಿ ಉಡುಪಿಯಲ್ಲಿ ನಡೆಯಲಿದೆ. ಅದರ ತಯಾರಿ ಭರದಿಂದ ಸಾಗಿದ್ದು 20 ಲಕ್ಷ ರೂ.ಗಳ ವೆಚ್ಚದಲ್ಲಿ ಸಮ್ಮೇಳನದ ಮುಖ್ಯ ಸಭಾಂಗಣದ ಚಪ್ಪರ ಮೇಲೇಳುತ್ತಿದೆ. ಅದು 25,000 ಜನರಿಗೆ ಕೂರಲು ಅವಕಾಶವಿರುವಷ್ಟು ದೊಡ್ಡದಾಗಿರುತ್ತದಂತೆ! ಸಮ್ಮೇಳನದ ಭೋಜನ ಶಾಲೆಯೂ ಸಿದ್ಧವಾಗುತ್ತಿದ್ದು 25,000 ತಟ್ಟೆ ಮತ್ತು ಲೋಟಗಳು ರೆಡಿಯಾಗಿವೆಯಂತೆ. ಅಂದಮೇಲೆ 25,000 ಚಮಚಾಗಳೂ ಇರಬಹುದು. ಸಮ್ಮೇಳನ ನಡೆಯುವ ಮೂರೂ ದಿನ ಊಟಕ್ಕೆ ವಾದಿರಾಜಗುಳ್ಳದ (ಸ್ಥಳೀಯ ತಳಿಯ ಬದನೇ ಕಾಯಿ!) ಹುಳಿಯನ್ನೂ, ಬೇಕೆನ್ನಿಸುವಷ್ಟು ಪಾಯಸವನ್ನೂ ಬಡಿಸಲಾಗುವುದು ಎಂದೂ ಪ್ರಕಟಿಸಲಾಗಿದೆ! ಮೊದಲೇ ಉಡುಪಿಯ ಅಡುಗೆ ಲೋಕ ಪ್ರಸಿದ್ಧವಾದದ್ದು; ಈಗ ಅದಕ್ಕೆ ಸಾಹಿತ್ಯದ ರುಚಿಯೂ ಬೆರೆತು ಉಡುಪಿಯ ಕ.ಸಾ.ಪ. ಸಮ್ಮೇಳನ ಒಂದು ಭರ್ಜರಿ ಭೋಜನ ಸಮ್ಮೇಳನವಾಗುವುದರಲ್ಲಿ ಸಂದೇಹವಿಲ್ಲ.

ಉಡುಪಿ, ರುಚಿಕಟ್ಟಾದ ಅಡುಗೆಗೆ ಮಾತ್ರ ಹೆಸರು ಮಾಡಿಲ್ಲ. ದ್ವೈತ ಸಿದ್ಧಾಂತವನ್ನು ರೂಪಿಸಿ ತ್ರಿಮತಾಚಾರ್ಯರಲ್ಲಿ ಒಬ್ಬರು ಎನ್ನಿಸಿಕೊಂಡಿರುವ ಆನಂದತೀರ್ಥರು ಉಡುಪಿಯವರು. ಇಲ್ಲಿನ ಕೃಷ್ಣಮಠ ಮತ್ತು ಎಂಟು ಮಾಠಮಾನ್ಯಗಳನ್ನು ಸ್ಥಾಪಿಸಿದವರೂ ಅವರೇ. ಹಾಗೆಯೇ ಈ ಪರಂಪರೆಯ ಒಳಗಿದ್ದುಕೊಂಡೇ ಅದನ್ನು ವಿಮರ್ಶೆಗೆ ಒಳಪಡಿಸಿದ ಕನಕ, ಪುರಂದರರಿಗೂ ಉಡುಪಿ ಆಶ್ರಯ ನೀಡಿದೆ. ಕನ್ನಡ ಸಾಹಿತ್ಯದ ಉದ್ದಕ್ಕೂ ಕಾಣುವ ಪ್ರತಿರೋಧದ ಪರಂಪರೆಗೆ ಉಡುಪಿಯ ಕೊಡುಗೆಯೂ ಇದೆ. ಮನುಷ್ಯನ ಘನತೆ, ಸ್ವಾತಂತ್ರ್ಯ ಮತ್ತು ಸಮಾನತೆಯ ಮೌಲ್ಯಗಳಿಗಾಗಿ ನಡೆಸಿದ ಪ್ರತಿರೋಧದ ಪರಂಪರೆ ಇದು. ಉಡುಪಿಯ ಕ.ಸಾ.ಪ. ಸಮ್ಮೇಳನ ಇದನ್ನು ಗುರುತಿಸುತ್ತದೆಯೆ? ಅಥವಾ ಉಡುಪಿ ಕ್ಷೇತ್ರದ ವೈಭವೀಕರಣವನ್ನಷ್ಟೆ ಮಾಡುತ್ತದೆಯೇ? ಹೀಗೆ ಕೇಳುವ ಜರೂರು ಈಗ ಯಾಕೆ ಬಂದಿದೆಯೆಂದರೆ, ಇತ್ತೀಚಿಗಿನ ದಿನಗಳಲ್ಲಿ ಉಡುಪಿ ದ್ವೇಷ, ಹಿಂಸೆ ಮತ್ತು ಅಸಹನೆಗಳಿಗೆ ರಾಜ್ಯದಲ್ಲಿ ಹೆಸರು ಪಡೆಯುತ್ತಿದೆ. ಈಗ ಪುರಂದರ, ಕನಕರೇನಾದರೂ ಉಡುಪಿಯಲ್ಲಿ ಕಾಣಿಸಿಕೊಂಡರೆ ಅವರಿಗೆ ಸಹ ಹಿಂದೂವಿರೋಧಿಗಳು ಎಂಬ ಹಣೆಪಟ್ಟಿಯನ್ನು ಇಲ್ಲಿನ ಹಿಂದೂತ್ವವಾದಿಗಳು ಹಚ್ಚಬಹುದು.

ಉಡುಪಿ 800 ವರ್ಷಗಳಿಂದಲೂ ಒಂದು ಪವಿತ್ರ ಕ್ಷೇತ್ರವಾಗಿದೆ, ಆದರೆ ಪರಮತದ್ವೇಷ ಹಾಗೂ ಸ್ವಧರ್ಮದ ರಕ್ಷಣೆಗಾಗಿ ಜೀವಹಿಂಸೆಯಾದರೂ ಸರಿ ಎಂಬ ಸಿದ್ಧಾಂತದ ಪ್ರತಿಪಾದನೆ ಮಾತ್ರ ಇತ್ತೀಚಿಗಿನ ಬೆಳವಣಿಗೆ. ಈ ಸನ್ನಿವೇಶದಲ್ಲಿ ಉಡುಪಿಯ ಕ.ಸಾ.ಪ. ಸಮ್ಮೇಳನ, ಇಲ್ಲಿನ ಹಿಂಸೆ, ಮಾನವಹಕ್ಕುಗಳ ಉಲ್ಲಂಘನೆ, ದುಡ್ಡಿನ ದರ್ಬಾರು ಹಾಗೂ ಬಲಿಷ್ಠರ ಯಜಮಾನಿಕೆಗಳ ಕರಾಳವಾಸ್ತವವನ್ನು ಮುಚ್ಚಿ ಹಾಕುವ ಸೋಗಲಾಡಿತನವಷ್ಟೇ ಆದೀತು. ಸಾಹಿತ್ಯ ಸಮ್ಮೇಳನದ ಸ್ಥಳೀಯ ಉಸ್ತುವಾರಿ ನಡೆಸುತ್ತಿರುವವರಲ್ಲಿ ಹಲವರು, ಈ ಹಿಂಸೆ ಮತ್ತು ದ್ವೇಷಗಳ ಪ್ರವರ್ತಕರೇ ಆಗಿರುವುದು ನಮ್ಮ ಸಂದೇಹವನ್ನು ಇನ್ನಷ್ಟು ಬಲಪಡಿಸುತ್ತಿದೆ. ಹಾಗಾಗಿ ಕ.ಸಾ.ಪ. ಸಮ್ಮೇಳನದಲ್ಲಿ ತೊಡಗಿಸಿಕೊಂಡಿರುವವರಿಗೆ ಸಾಹಿತ್ಯದ ಮೂಲ ಆಶಯಗಳನ್ನು ನೆನಪಿಸಲು ಹಾಗೂ ಉಡುಪಿಯಲ್ಲಿ ಹಿಂದೂತ್ವದ ಸಂಘಟನೆಗಳು ಸೃಷ್ಟಿಸಿರುವ ಹಿಂಸೆ, ಅಸಹನೆ, ಅಪಪ್ರಚಾರಗಳ ಸಂಸ್ಕೃತಿಯನ್ನು ಪ್ರತಿಭಟಿಸುವ ನಿಟ್ಟಿನಲ್ಲಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ದಸಂಸ ಹಾಗೂ ಇನ್ನಿತರ ಸಮಾನ ಮನಸ್ಕ ಸಂಘಟನೆಗಳು ಒಟ್ಟಾಗಿ ಉಡುಪಿಯಲ್ಲಿ ಇದೇ ಡಿಸೆಂಬರ್ 9 ಭಾನುವಾರದಂದು ಸೌಹಾರ್ದ ಸಾಹಿತ್ಯ ಸಮ್ಮೇಳನ ನಡೆಸಲು ನಿರ್ಧರಿಸಿವೆ.

ಕ.ಸಾ.ಪ.ದ ವಾರ್ಷಿಕ ಸಾಹಿತ್ಯ ಸಮ್ಮೇಳನವನ್ನು ವಿರೋಧಿಸಿ ಪ್ರತಿ ಸಾಹಿತ್ಯ ಸಮ್ಮೇಳನವನ್ನು ಸಂಘಟಿಸುತ್ತಿರುವುದು ಇದೇನೂ ಮೊದಲ ಬಾರಿ ಅಲ್ಲ. 1979 ರಲ್ಲಿ ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ನಡೆದ ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಅದನ್ನು ಪ್ರತಿಭಟಿಸಿ ಬೆಂಗಳೂರಿನಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ನಡೆಸಲಾಯಿತು. ಈ ಸಮ್ಮೇಳನದಲ್ಲಿ ಸಕ್ರಿಯವಾಗಿ ಪಾಲುಗೊಂಡವರಲ್ಲಿ ಬರಗೂರು ರಾಮಚಂದ್ರಪ್ಪ, ಡಿ. ಡಿ.ಆರ್. ನಾಗರಾಜ, ಕಿ.ರಂ. ನಾಗರಾಜ, ದೇವನೂರು ಮಹಾದೇವ, ದಲಿತ ಕವಿ ಸಿದ್ಧಲಿಂಗಯ್ಯ, ನಾಟಕ ನಿರ್ದೇಶಕ ಪ್ರಸನ್ನ, ಎಚ್. ಗೋವಿಂದಯ್ಯ ಮೊದಲಾದವರ ಜೊತೆ ಕ.ಸಾ.ಪ.ದ ಹಾಲಿ ಅಧ್ಯಕ್ಷ ಚಂದ್ರಶೇಖರ ಪಾಟೀಲರೂ ಇದ್ದರು. ಆನಂತರದ ವಿದ್ಯಮಾನಗಳನ್ನು ಸವಕಲು ಮಾತೊಂದರಲ್ಲಿ ಹೇಳುವುದಾದರೆ, ಕರ್ನಾಟಕದ ಎಲ್ಲ ನದಿಗಳಲ್ಲೂ ಸಾಕಷ್ಟು ನೀರು ಹರಿದುಹೋಗಿದೆ ಹಾಗೂ ಬೆಂಗಳೂರಿನ ಬಂಡಾಯ ಸಮ್ಮೇಳನವನ್ನು ಸಂಘಟಿಸಿದ ಮಹನೀಯರಲ್ಲಿ ಅನೇಕರ ಗುರುತು ಚಹರೆಗಳು ಈಗ ಪತ್ತೆಹಚ್ಚಲಾಗದಷ್ಟು ಬದಲಾಗಿ ಬಿಟ್ಟಿವೆ! ಬಂಡಾಯ ಚಳವಳಿಯೂ ತನ್ನ ಕಾವನ್ನು ಕಳೆದು ಕೊಂಡಿದೆ. ಆದಾಗ್ಯೂ ಅದರ ಪ್ರಭಾವವನ್ನು ಈಗಲೂ ಗುರುತಿಸಬಹುದಾಗಿದೆ. ಸಂಸ್ಕೃತಿ ಮತ್ತು ಸಮಾಜವನ್ನು ಹೊಸದೃಷ್ಟಿಯಿಂದ ನೋಡುವ, ಪ್ರಶ್ನಿಸುವ, ಸಂದೇಹಿಸುವ, ಯೋಚನಾಕ್ರಮಗಳಿಗೆ ಬಂಡಾಯ ಚಳವಳಿ ಹಾದಿ ಹಾಕಿಕೊಟ್ಟಿತು; ಯುವ ಲೇಖಕರಿಗೆ ಪ್ರಭುತ್ವ ಮತ್ತು ವ್ಯವಸ್ಥೆಗಳನ್ನು ಧಿಕ್ಕರಿಸಿ ನಿಲ್ಲುವ ಧೈರ್ಯವನ್ನಂತೂ ಧಾರಾಳವಾಗಿ ನೀಡಿತು. ನನಗೆ ಗೊತ್ತಿರುವ ಮಟ್ಟಿಗೆ ಧರ್ಮಸ್ಥಳದ ಸಮ್ಮೇಳನ ಹೊರತುಪಡಿಸಿ ಕ.ಸಾ.ಪ.ದ ಬೇರೆ ಯಾವ ಸಮ್ಮೇಳನವನ್ನೂ ಬಂಡಾಯ ಸಂಘಟನೆ ಪ್ರತಿಭಟಿಸುವ ಗೋಜಿಗೆ ಹೋಗಿಲ್ಲ, ಹಾಗೆಯೇ ಉಡುಪಿಯ ಸಮ್ಮೇಳನವನ್ನು ಪ್ರತಿಭಟಿಸುತ್ತಿರುವ ಕೋಮು ಸೌಹಾರ್ದ ವೇದಿಕೆ ಕೂಡ ಕ.ಸಾ.ಪ.ದ ಹಿಂದಿನ ಯಾವ ಸಮ್ಮೇಳನವನ್ನೂ ವಿರೋಧಿಸಿಲ್ಲ.

ಕ.ಸಾ.ಪ.ದ ಬಗ್ಗೆ ನಮಗೆ ಮೂಲಭೂತವಾದ ಭಿನ್ನಮತ ವೇನೂ ಇಲ್ಲ; ಸಾಹಿತ್ಯ ಸಮ್ಮೇಳನಗಳ ಬಗ್ಗೆಯೂ ನಮ್ಮ ವಿರೋಧವೇನಿಲ್ಲ. ಆದಾಗ್ಯೂ ಉಡುಪಿಯ ಸಮ್ಮೇಳನವನ್ನು ನಾವು ಪ್ರತಿಭಟಿಸುತ್ತಿರುವುದಕ್ಕೆ ಕೆಲವು ಕಾರಣಗಳಿವೆ. ಎಲ್ಲಕ್ಕಿಂತ ಮೊದಲಾಗಿ ಉಡುಪಿಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿರುವ ಎಲ್.ಎಸ್. ಶೇಷಗಿರಿರಾಯರು ಮತ್ತು ಅವರ ಆಯ್ಕೆಯ ವೈಖರಿ ಬಗ್ಗೆ ನಮಗೆ ಹಲವು ಸಂದೇಹಗಳಿವೆ. ಸಾಹಿತ್ಯ ಸಮ್ಮೇಳನಕ್ಕೆ ಉಡುಪಿಯವರೇ ಆದ ಕಾದಂಬರಿಕಾರ ವ್ಯಾಸರಾಯ ಬಲ್ಲಾಳರು ಅಧ್ಯಕ್ಷರಾಗುವರು ಎಂಬುದು ಎಲ್ಲರ ನಿರೀಕ್ಷೆಯೂ, ಅಪೇಕ್ಷೆಯೂ ಆಗಿತ್ತು, ಅಧ್ಯಕ್ಷ ಪದವಿಗೆ ಅವರಿಗಿರುವ ಅರ್ಹತೆಯಂತೂ ನಿರ್ವಿವಾದವಾಗಿತ್ತು. ಹಾಗಿದ್ದೂ ಕೊನೆಯ ಗಳಿಗೆಯಲ್ಲಿ ಎಲ್.ಎಸ್. ಶೇಷಗಿರಿರಾಯರು ಅಧ್ಯಕ್ಷರಾಗಿ ಆಯ್ಕೆಗೊಂಡರು.

ವ್ಯಾಸರಾಯ ಬಲ್ಲಾಳರು ಪ್ರಗತಿಶೀಲ ಮನೋಭಾವದ ಲೇಖಕ ಎನ್ನುವ ಕಾರಣಕ್ಕೆ ರಾಜ್ಯದಲ್ಲಿ ಮೇಲುಗೈ ಪಡೆದಿರುವ ಸಂಘ ಪರಿವಾರದ ಪ್ರಭಾವಶಾಲಿ ರಾಜಕಾರಣಿಗಳು ಅವರಿಗೆ ಅಡ್ಡಗಾಲು ಹಾಕಿರಬಹುದೇ? ಈಗ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಎಲ್.ಎಸ್. ಶೇಷಗಿರಿರಾಯರು ಸಂಘ ಪರಿವಾರದ ಸಂಸ್ಥೆಯಾದ ರಾಷ್ಟ್ರೋತ್ಥಾನ ಪರಿಷತ್ತಿನಲ್ಲಿ ಕೆಲಕಾಲ ಮುಖ್ಯ ಸಂಪಾದಕರಾಗಿ ದುಡಿದಿರುವುದು ನಮ್ಮ ಸಂದೇಹವನ್ನು ಇನ್ನಷ್ಟು ಹೆಚ್ಚಿಸಿದೆ. ಈ ಪ್ರಕಾಶನ ಸಂಸ್ಥೆ ಕೋಮುದ್ವೇಷ, ಸಂಕುಚಿತ ಮನೋಭಾವ, ಅಂಧಾಭಿಮಾನಗಳನ್ನು ಪ್ರಚೋದಿಸುವ ಪುಸ್ತಕಗಳನ್ನಷ್ಟೇ ಪ್ರಕಟಿಸುತ್ತಿದ್ದು ಹಿಂದೂತ್ವದ ರಾಜಕೀಯಕ್ಕೆ ಜನರನ್ನು ಸಜ್ಜುಗೊಳಿಸುವುದೇ ಅದರ ಏಕಮಾತ್ರ ಉದ್ದೇಶ. ಆರ್.ಎಸ್.ಎಸ್, ಭಜರಂಗದಳ ಮುಂತಾದವುಗಳ ಲಾಂಗು, ಬಡಿಗೆ, ತ್ರಿಶೂಲಗಳ ಮಿದುಳು ಈ ರಾಷ್ಟ್ರೋತ್ಥಾನ ಪರಿಷತ್ತು. ಇಂತಹ ಕರಾಳ ಹಿನ್ನೆಲೆ ಹೊಂದಿರುವ ಸಂಸ್ಥೆಯೊಂದರ ಜೊತೆ ನಿಕಟ ಸಂಪರ್ಕವಿರಿಸಿಕೊಂಡಿರುವ ಎಲ್.ಎಸ್. ಶೇಷಗಿರಿರಾಯರು, ಬಿಜೆಪಿ ರಾಜ್ಯ ಸರ್ಕಾರದಲ್ಲಿ ಪಾಲುಗೊಂಡಿದ್ದಾಗಲೇ, ಹಿಂದೂತ್ವದ ಭದ್ರನೆಲೆಯಾಗಿರುವ ಉಡುಪಿಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಗೊಂಡಿರುವುದು ಕೇವಲ ಕಾಕತಾಳೀಯವಾಗಿರಲಾರದು.

ಹಾಲಿ ಸಮ್ಮೇಳನಾಧ್ಯಕ್ಷರ ಬಗ್ಗೆ ನಮಗೆ ಇನ್ನೊಂದು ಆತಂಕವಿದೆ. ಕ.ಸಾ.ಪ.ದ ವಾರ್ಷಿಕ ಸಮ್ಮೇಳನಗಳ ಅಧ್ಯಕ್ಷರು ತಮ್ಮ ಪ್ರಧಾನ ಭಾಷಣದಲ್ಲಿ ರಾಜ್ಯದ ಪ್ರಸ್ತುತ ಸ್ಥಿತಿಗತಿಗಳನ್ನು ವಿವರವಾಗಿ ವಿಶ್ಲೇಷಿಸುವ ಪರಿಪಾಠವಿದೆ. ಶೇಷಗಿರಿರಾಯರಿಂದಲೂ ನಾವು ಅಂತಹದ್ದೊಂದು ಭಾಷಣವನ್ನು ನಿರೀಕ್ಷಿಸಬಹುದೆ? ಕರ್ನಾಟಕದಲ್ಲಿ ಈಗ ಮೇಲುಗೈ ಪಡೆದಿರುವ ಹಿಂದೂತ್ವದ ಬಗ್ಗೆ ಅವರು ತಮ್ಮ ಭಾಷಣದಲ್ಲಿ ಏನು ಹೇಳುತ್ತಾರೆ? ಬಾಬಾಬುಡನ್ ಗಿರಿಯ ಬಗ್ಗೆ ಸಂಘಪರಿವಾರ ಹುಟ್ಟು ಹಾಕಿದ ವಿವಾದ ಕುರಿತು ಶೇಷಗಿರಿರಾಯರ ನಿಲುವೇನು? ಹಿಂದೂತ್ವದ ಹಿಂಸಾತ್ಮಕ ರಾಜಕೀಯವನ್ನು ಸಮ್ಮೇಳನಾಧ್ಯಕ್ಷರು ತಮ್ಮ ಭಾಷಣದಲ್ಲಿ ಖಂಡಿಸಿದರೆ ನಮ್ಮ ತಪ್ಪನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತೇವೆ. ಹಾಗೆಂದು ಅವರು ಖಂಡಿಸಿದ ಮಾತ್ರಕ್ಕೆ ಹಿಂದೂತ್ವ ಸೃಷ್ಟಿಸಿರುವ ಹಳವಂಡಗಳ ಹೊಣೆಗಾರಿಕೆಯ ಪ್ರಶ್ನೆಗಳು ಇತ್ಯರ್ಥವಾಗಿ ಬಿಡುವುದಿಲ್ಲ. ಉದಾಹರಣೆಗೆ ಉಡುಪಿ ಮಾತ್ರವಲ್ಲ ರಾಜ್ಯವನ್ನೇ ಈಗ ಆವರಿಸಿಕೊಂಡಿರುವ ಅಂಧಕಾರಕ್ಕೆ ರೂಪಕವಾಗಬಲ್ಲ, ಆದಿ ಉಡುಪಿ ಬೆತ್ತಲೆ ಪ್ರಕರಣವನ್ನೇ ತೆಗೆದುಕೊಳ್ಳಿ. 2005 ರ ಮಾರ್ಚ್ ತಿಂಗಳ ಒಂದು ಮುಸ್ಸಂಜೆ ಉಡುಪಿಯ ಹೊರವಲಯದ ಆದಿ ಉಡುಪಿಯ ಮೈದಾನದಲ್ಲಿ, 62 ರ ಹರೆಯದ ಹಾಜಬ್ಬ ಮತ್ತು ಅವರ ಮಗ ಹಸನಬ್ಬರನ್ನು 15-20 ಜನರ ಗುಂಪೊಂದು, ಸಂಪೂರ್ಣವಾಗಿ ಬೆತ್ತಲುಗೊಳಿಸಿ, ಅವರನ್ನೂ ಅವರ ಮತವನ್ನೂ ಅವಾಚ್ಯವಾಗಿ ಬೈಯುತ್ತ, ಸುತ್ತುಸುತ್ತು ಅಟ್ಟಿಸಿಕೊಂಡು ಹೋಗಿ ಹೊಡೆಯಿತು. ಅದನ್ನು ನೂರಿನ್ನೂರು ನಾಗರಿಕರು ಸುತ್ತ ನಿಂತು ನೋಡಿದರು. ಈ ಶೋ ಎರಡು ಮೂರು ಗಂಟೆಗಳ ಕಾಲ ನಡೆಯಿತು. ಈ ನತದೃಷ್ಟ ತಂದೆಮಕ್ಕಳು ಕಸಾಯಿಗೆ ದನಕರು ಸಾಗಿಸುತ್ತಿದ್ದರು ಎನ್ನುವುದೇ ಉಡುಪಿಯ ಹಿಂದೂವೀರರು ಅವರಿಗೆ ಈ ಪರಿ ಹೊಡೆದದ್ದಕ್ಕೆ ಕಾರಣವಾಗಿತ್ತು, ಮಾರನೆಯ ದಿನ ಹಾಜಬ್ಬ, ಹಸನಬ್ಬರ ಬೆತ್ತಲೆ ಫೋಟೋ ಕನ್ನಡಪ್ರಭ ಪತ್ರಿಕೆಯಲ್ಲಿ ಪ್ರಕಟವಾದ ಏಕಮಾತ್ರ ಕಾರಣಕ್ಕೆ ಪೊಲೀಸರು ಪ್ರಕರಣದ ಆರೋಪಿಗಳ ಮೇಲೆ ಒಂದು ಕಾಟಾಚಾರದ ಕೇಸು ಬುಕ್ ಮಾಡಿಕೊಂಡರು. ಕೇಸು ಈಗ ಉಡುಪಿಯ ತ್ವರಿತ ನ್ಯಾಯಾಲಯದಲ್ಲಿ ನಡೆಯುತ್ತಿದೆ. (O.S. 98/06) ಈ ನಡುವೆ ಈ ಘಟನೆಯ ವಿರುದ್ಧ ಮೆರವಣಿಗೆ, ಸಭೆಗಳ ಬೃಹತ್ ಪ್ರತಿಭಟನಾ ಕಾರ್ಯಕ್ರಮವೊಂದು ಉಡುಪಿಯಲ್ಲಿ ನಡೆಯಿತು. ಇದನ್ನು ವರದಿ ಮಾಡಿದ ಜಿಲ್ಲೆಯ ಪ್ರಮುಖ ಪತ್ರಿಕೆ, ಮೆರವಣಿಗೆಯಲ್ಲಿದ್ದ ಕೆಲವರು ಪಾಕಿಸ್ತಾನದ ಧ್ವಜ ಹಿಡಿದಿದ್ದರು ಎಂಬ ಹಸಿ ಸುಳ್ಳನ್ನು ಪ್ರಕಟಿಸಿತು. ನಂತರ ಆ ಬಗ್ಗೆ ಪತ್ರಿಕೆ ಕ್ಷಮೆ ಯಾಚಿಸಿತು. ಆದರೆ ಮುಸ್ಲಿಮರ ವಿರುದ್ಧ ದ್ವೇಷ ಪ್ರಚೋದಿಸುವ ತನ್ನ ಧೋರಣೆಯನ್ನು ಮಾತ್ರ ಅದು ಬಿಡಲಿಲ್ಲ, ಬೆತ್ತಲೆ ಪ್ರಕರಣ ನಡೆದ ಕೆಲ ತಿಂಗಳಲ್ಲಿಯೇ, ಅದರ ಪ್ರಮುಖ ಆರೋಪಿಯೊಬ್ಬರನ್ನು ಅಂದಿನ ಬಿಜೆಪಿ/ಜೆಡಿಎಸ್ ಸರ್ಕಾರ ಉಡುಪಿ ನಗರಸಭೆಗೆ ನಾಮಕರಣ ಸದಸ್ಯರನ್ನಾಗಿ ನೇಮಿಸಿತು. ಉಡುಪಿಯ ಕೋಮು ಸೌಹಾರ್ದ ವೇದಿಕೆಯನ್ನು ಹೊರತುಪಡಿಸಿ ಇತರ ಯಾವ ಸಂಘಟನೆಯೂ ಇದನ್ನು ಪ್ರತಿಭಟಿಸಲಿಲ್ಲ. ಈಗ ಈ ಆರೋಪಿ ಉಡುಪಿ ನಗರಸಭೆಯ ಚುನಾಯಿತ ಸದಸ್ಯ! ಮೊನ್ನೆ ನಡೆದ ನಗರಸಭಾ ಚುನಾವಣೆಯಲ್ಲಿ ಅವರು ಬಿಜೆಪಿ ವತಿಯಿಂದ ನಗರದ ಅತ್ಯಂತ ಪ್ರತಿಷ್ಠಿತ ವಾರ್ಡಿನಲ್ಲಿ ಸ್ಪರ್ಧಿಸಿ ಭಾರೀ ಬಹುಮತದಿಂದ ಗೆದ್ದಿದ್ದಾರೆ. ಇದರ ಅರ್ಥವೇನು ಎಂದು ನಾವು ಯೋಚಿಸಬೇಕು. ಅಸಹಾಯಕರಾದ ತಂದೆ ಮಕ್ಕಳ ಮೇಲೆ ಗುಂಪು ಕಟ್ಟಿಕೊಂಡು ನೂರಾರು ಜನರ ಸಮ್ಮುಖದಲ್ಲಿ ಹಲ್ಲೆ ಮಾಡಿದ್ದೇ ಅಲ್ಲದೆ ಅವರನ್ನು ಸಂಪೂರ್ಣ ವಿವಸ್ತ್ರಗೊಳಿಸಿ ಹೊಡೆದದ್ದು ಅಪರಾಧ ಎಂದು ಉಡುಪಿಯ ಸುಶಿಕ್ಷಿತರಿಗೆ ಈಗ ಯಾಕೆ ಅನ್ನಿಸುತ್ತಿಲ್ಲ? ಈ ತಂದೆ ಮಕ್ಕಳು ಮುಸ್ಲಿಮರಾದ ಮಾತ್ರಕ್ಕೆ ಕನಿಷ್ಠ ಮನುಷ್ಯ ಗೌರವಕ್ಕೂ ಪಾತ್ರರಲ್ಲವೋ? ಮನುಷ್ಯ ಒಂಟಿತನದಲ್ಲಿ ಅಸಹಾಯಕ, ಗುಂಪಿನಲ್ಲಿ ಪಶು. ಕರಾವಳಿಯಲ್ಲಿ ಹಿಂದೂತ್ವದ ಗುಂಪುಗಳಿಂದ ಪೆಟ್ಟು ತಿಂದ ಪ್ರತಿಯೊಬ್ಬ ಮುಸ್ಲಿಮನೂ ಏಕಾಂಗಿಯಾಗಿ, ನೋಯುವ ದೇಹಮನಸ್ಸುಗಳನ್ನು ಮಾತ್ರ ಪಡೆದವನಾಗಿ, ಅಂದರೆ ಮನುಷ್ಯ ಮಾತ್ರನಾಗಿ ಈ ನೋವನ್ನು ಅನುಭವಿಸಿದ್ದಾನೆ. ರಾಜಕೀಯ ಈ ನೋವನ್ನು ನಿರ್ಲಕ್ಷ್ಯದಿಂದ ಕಾಣುತ್ತದೆ. ಏಕಾಂಗಿ ಮನುಷ್ಯರಿಂದ ರಾಜಕೀಯ ನಡೆಯುವುದಿಲ್ಲ, ಗುಂಪು ರಾಜಕೀಯದ ಮೂಲ ಘಟಕ. ಈ ಏಕಾಂಗಿ ಮನುಷ್ಯರು, ಅವರ ಸಂಸಾರಗಳು, ನೋವು ಹತಾಶೆಗಳು–ಇವನ್ನು ಹಚ್ಚಿಕೊಳ್ಳುವುದು ಸಾಹಿತ್ಯ ಮಾತ್ರ. ಕವಿ ಈ ಜಗತ್ತಿನ ಎಲ್ಲ ನೊಂದವರ ಪ್ರಾಣಮಿತ್ರ. ಸಹಸ್ಪಂದನ, ಸಹಭಾಗಿತ್ವ, ಸಹಾನುಭೂತಿಗಳಿಲ್ಲದ ಸಾಹಿತ್ಯವೇ ಇಲ್ಲ, ಸಾಹಿತಿ, ಸಮಾಜದ ಆತ್ಮಸಾಕ್ಷಿ ಎನ್ನುವುದು ಈ ಅರ್ಥದಲ್ಲಿ, ಉಡುಪಿಯ ಕ.ಸಾ.ಪ. ಸಾಹಿತ್ಯ ಸಮ್ಮೇಳನ ಕರ್ನಾಟಕದಲ್ಲಿ ಹಿಂದೂತ್ವದ ಕರಾಳಕೃತ್ಯಗಳನ್ನು ಎತ್ತಿ ಹೇಳುತ್ತದೆಯೇ? ಖಂಡಿಸುತ್ತದೆಯೇ? ನೋವು ಅವಮಾನಗಳಲ್ಲಿ ನಲುಗಿರುವವರ ಜೊತೆ ನಿಲ್ಲುತ್ತದೆಯೇ? ಈ ಸಮ್ಮೇಳನದ ಉಸ್ತುವಾರಿ ವಹಿಸಿಕೊಂಡವರು ನಮ್ಮಲ್ಲಿ ಈ ಭರವಸೆ ಹುಟ್ಟಿಸುತ್ತಿಲ್ಲ. ಉಡುಪಿಯ ಜನರೇ ಕಳೆದುಕೊಂಡಿರುವ ನ್ಯಾಯಾನ್ಯಾಯದ ಪ್ರಜ್ಞೆಯನ್ನೂ, ವಿವೇಕ ವಿವೇಚನೆಗಳನ್ನೂ ನಾವು ಉಡುಪಿಯ ಸಾಹಿತ್ಯ ಸಮ್ಮೇಳನದಿಂದ ನಿರೀಕ್ಷಿಸಲಾರೆವು.


■ ಜೆ. ರಾಜಶೇಖರ

ಅಸಮಾನತೆ ಮತ್ತು
ಕೋಮುವಾದದ ವಿರುದ್ಧ

ಸೌಹಾರ್ದ ಸಾಹಿತ್ಯ ಸಮ್ಮೇಳನ

2007 ಡಿಸೆಂಬರ್ 9 ಭಾನುವಾರ
ಬೆಳಿಗ್ಗೆ 9.00 ರಿಂದ ರಾತ್ರಿ 8.00ರವರೆಗೆ
ಸ್ಥಳ: ಅಮ್ಮಣಿ ರಾಮಣ್ಣ ಶೆಟ್ಟಿ ಸಭಾಭವನ
ಬಂಟ್ಸ್ ಹಾಸ್ಟೆಲ್ ರಸ್ತೆ,
ತಾಲ್ಲೂಕು ಕಛೇರಿ ಬಳಿ, ಉಡುಪಿ-1

■ ಸರ್ವರಿಗೂ ಸ್ವಾಗತ



ಕಚ್ಚೆ ಹರುಕ ಚೆಡ್ಡಿ ವೀರ!

ಗದಗ

ಚೆಡ್ಡಿಗಳ 'ಸ್ತ್ರೀ ರಕ್ಷಣೆ' ಅನ್ನೋ ಸಿದ್ಧಾಂತದ ಅಸಲಿ ಮಸಲತ್ತು ಈಗ ಬೆತ್ತಲಾಗಿದೆ. ಸದಾ ಹಿಂದೂ, ಹೆಣ್ಣು, ಗೋಮೂತ್ರ, ಪಾವಿತ್ರತೆ ಕುರಿತು ಬಾಯಿ ಬಡಿದುಕೊಳ್ಳುತ್ತಿದ್ದ ಸಗಣಿಗಳ್ಳರು ಹಿಂದೂ ಲಾಡೆನ್ ಮುತಾಲಿಕನಿಂದ ಪ್ರೇರೇಪಿತರಾಗಿ ಹಾಡು ಹಗಲೇ ಮಹಿಳೆಯರ ಮಾನವನ್ನು ಹರಾಜು ಹಾಕುತ್ತಿದ್ದಾರೆ. ಒಂದು ಕಡೆ ಮುತಾಲಿಕ್ ಅಂತರ್‌ಜಾತಿ ಪ್ರೇಮ ಪ್ರಕರಣಗಳನ್ನು ಒಂದು ಸಮುದಾಯದ ಮೇಲೆ ಹೇರಿ ಊರಿಗೆ ಬೆಂಕಿ ಹಚ್ಚಿ ಮೈಚಳಿ ನೀಗಿಸಿ ಕೊಳ್ಳುತ್ತಿದ್ದರೆ, ಇನ್ನೊಂದೆಡೆ ಅವನ ಪರಮ ಚೆಡ್ಡಿ ಭಕ್ತರೇ ಕಂಡಕಂಡ ಪರಧರ್ಮ ಹುಡುಗಿಯರ ದಾವಣಿಗೆ ಕೈಹಾಕಿ ತೀಟೆ ತೀರಿಸಿಕೊಳ್ಳುತ್ತಿದ್ದಾರೆ.

ಕೆಲದಿನಗಳ ಹಿಂದೆ ಪಕ್ಕದ ಸವಣೂರಿನಲ್ಲಿ ಮುದುಕನೊಬ್ಬ ತನ್ನ ಹದಿಹರೆಯದ ಪ್ರೇಮಿಯೊಂದಿಗೆ 'ಡ್ಯುಯೆಟ್' ಹಾಡುತ್ತಾ ಊರು ಬಿಟ್ಟಿದ್ದ. ಹಿಂದೂ ಹುಡುಗಿಯನ್ನು ಕರೆದುಕೊಂಡು ಹೋದವನು ಮುಸ್ಲಿಂ ಎಂಬ ಕಾರಣಕ್ಕೇ ಕ್ರುದ್ಧಗೊಂಡ ಮುತಾಲಿಕ್ ಇಡೀ ಸವಣೂರಿಗೆ ಬೆಂಕಿ ಹಚ್ಚಲು ಪ್ರಯತ್ನಿಸಿದ್ದ. ಹೆಚ್ಚುಕಡಿಮೆ ಅದೇ ಸಂದರ್ಭದಲ್ಲಿ ಗದಗ ಜಿಲ್ಲೆಯ ಶಿರಹಟ್ಟಿಯಲ್ಲಿ ಮುತಾಲಿಕ್‌ನ ರಾಷ್ಟ್ರೀಯ ಹಿಂದೂ ಸೇನಾದ ಜಿಲ್ಲಾಧ್ಯಕ್ಷ ಸುರೇಶ ಅಕ್ಕಿ ಅಲ್ಪಸಂಖ್ಯಾತ ಜೈನ್ ಸಮುದಾಯದ ಹುಡುಗಿಯೊಬ್ಬಳನ್ನು ಮಟಮಟ ಮಧ್ಯಾಹ್ನವೇ ಹೊತ್ತೊಯ್ದು ದೊಡ್ಡ ರಂಪಾಟವೆಬ್ಬಿಸಿದ್ದಾನೆ.

ಗದಗ ಜಿಲ್ಲೆಯ ಶಿರಹಟ್ಟಿ ಧಾರ್ಮಿಕ ಸೌಹಾರ್ದತೆಗೆ ಹೆಸರುವಾಸಿ; ಶಿಶುನಾಳ ಶರೀಫರಿಂದ ಪರಧರ್ಮ ಸಹಿಷ್ಣುತೆಯಲ್ಲಿ ತನ್ನದೇ ಹಾದಿಯಲ್ಲಿ ಹೆಜ್ಜೆ ಇಡುತ್ತಿರುವ ಫಕೀರೇಶ್ವರ ಪರಂಪರೆಯನ್ನು ಒಪ್ಪಿಕೊಂಡಿರುವ ಪುಟ್ಟ ಪ್ರದೇಶ. ಸರ್ವಧರ್ಮ ಸಮನ್ವಯ ಕೇಂದ್ರದಂತಿರುವ ಶಿರಹಟ್ಟಿಯಲ್ಲಿ ಕೆಲವರ್ಷಗಳ ಹಿಂದೆ ಕೋಮುಕಿಚ್ಚು ಹಚ್ಚಲು ಮುತಾಲಿಕ್‌ನ ವಾನರ ಪಡೆ ನಡೆಸಿದ್ದ ಷಡ್ಯಂತ್ರ ಅಷ್ಟಿಷ್ಟಲ್ಲ. ಈ ಪಡೆಗೆ ನೇತೃತ್ವ ವಹಿಸಿದ್ದವನೇ ಸುರೇಶ್ ಅಕ್ಕಿ ಎಂಬ ಮಂಗ. ಊರಿನ ಮಧ್ಯದಲ್ಲಿರುವ ಬಸವಣ್ಣನ ಮೂರ್ತಿ ವಿರೂಪಗೊಂಡಿದೆ ಎಂದು ಕತೆ ಕಟ್ಟಿ ಇಡೀ ಶಿರಹಟ್ಟಿಯ ಜನರ ಮನಸ್ಸು ಕೆಡಿಸಲು ಪ್ರಯತ್ನಿಸಿದ್ದ. ಆದರೆ ಇಲ್ಲಿಯ ಜನ ಅದಕ್ಕೆ ಸೊಪ್ಪು ಹಾಕದೇ ಬಾಯಿ ತುಂಬ ಎಲೆ-ಅಡಿಕೆ ಹಾಕಿಕೊಂಡು ಕ್ಯಾಕರಿಸಿ ಆತನ ಮುಖದ ತುಂಬಾ ಉಗುಳಿ, ವಾರ್ನ್ ಮಾಡಿ ಕೈಬಿಟ್ಟಿದ್ದರು. ಆದರೆ ಸದಾ ಗಲಾಟೆ ಶುರುಹಚ್ಚುವುದರ ಬಗ್ಗೆಯೇ ಚಿಂತಿಸುವ ಸುರೇಶ ಅಕ್ಕಿ ಮುಸ್ಲಿಂ ಹೆಣ್ಣು ಮಕ್ಕಳನ್ನು ಚುಡಾಯಿಸುವುದು, ದರ್ಗಾವನ್ನು ಕೆಡುವೋದು – ಇಂತಹ ಘನಂದಾರಿ ಕೃತ್ಯಗಳಲ್ಲಿ ತೊಡಗಿ ಕುಖ್ಯಾತಿ ಗಳಿಸಿದ್ದಾನೆ.



ಸುರೇಶ್ ಅಕ್ಕಿ

ಸುರೇಶ ಅಕ್ಕಿಯ ಮಾಮೂಲು ಕುಲಕಸುಬು ಬಡ್ಡಿ ದಂಧೆ. ಇವನ ಬಡ್ಡಿ ವ್ಯವಹಾರಕ್ಕೆ ಮಾರುಹೋಗಿಯೇ ಸಂಜು ಜೈನ್ ಎಂಬ ಯುವತಿಯ ತಂದೆ ಸುಖರಾಜ ಜೈನ್ ಇವನೊಂದಿಗೆ ಸೇರಿ ಫೈನಾನ್ಸ್ ವ್ಯವಹಾರವನ್ನು ಲಾಂಚ್ ಮಾಡಿದರು. ಸುರೇಶ ಅಕ್ಕಿಯ ಕಚ್ಚೆಹರುಕತನದ ಬಗ್ಗೆ ಗೊತ್ತಿರದ ಸುಖರಾಜ್ ಜೈನ್ ಆತನನ್ನು ತನ್ನ ಅಡುಗೆ ಮನೆಯ ತನಕ ಬಿಟ್ಟುಕೊಂಡಿದ್ದರು. ಇದನ್ನು ದುರ್ಬಳಕೆ ಮಾಡಿಕೊಂಡ ಅಕ್ಕಿ ಸಂಜುಳ ಮೇಲೆ ವಕ್ರದೃಷ್ಟಿ ಬೀರಿ ಮೊನ್ನೆ ಆಕೆಯನ್ನೇ ಎತ್ತಾಕಿಕೊಂಡು ಹೋದ.

ಈತ ಎಂತಹ ಕಚ್ಚೆ ಹರುಕ ಎಂದರೆ ಒಂದು ವರ್ಷದ ಹಿಂದೆಯಷ್ಟೇ ಇವನಿಗೆ ಮದುವೆಯಾಗಿದೆ. ನವೆಂಬರ್ 19 ರಂದು ಈತನ ಹೆಂಡತಿಯ ಸೀಮಂತ ಕಾರ್ಯವಿತ್ತು, ಆ ದಿನದಂದೇ ಈತ ಸಂಜು ಜೈನ್‌ಳನ್ನು ಹೊತ್ತೊಯ್ದಿದ್ದಾನೆ!

ಇದು ನಡೆದಾಗ ಸಂಜುಳ ತಂದೆ ತಾಯಿ ರಾಜಸ್ತಾನಕ್ಕೆ ಹೋಗಿದ್ದರು. ಮಗಳ ಕಿಡ್ನಾಪ್ ವಿಷಯ ತಿಳಿದು ಸುಖರಾಜ ಜೈನ್ ಕುಟುಂಬ ಎದೆಬಡಿದುಕೊಂಡು ಹಿಂದಿರುಗಿ ಶಿರಹಟ್ಟಿ ಪೋಲಿಸ್ ಠಾಣೆಯಲ್ಲಿ ಕಾಣೆಸಿಕೊಂಡರು. ಸಂಜು ಜೈನ್‌ಳನ್ನು ಸುರೇಶ ಅಕ್ಕಿ ಕಿಡ್ನಾಪ್ ಮಾಡಿದ್ದ ಸುದ್ದಿ ತಿಳಿದ ಶಿರಹಟ್ಟಿ ಜನ ಜಾತಿ, ಧರ್ಮ ಎಂಬ ಭೇದಭಾವಗಳನ್ನು ಮರೆತು "ಆ ಹುಚ್ಚು ಸೂ. . . . ಮಗನ್ನ ನಮ್ಮೂರಾಗ ಇಟ್ಕೊಂಡಿದ್ದ ತಪ್ಪಾಯ್ತು" ಅಂತಾ ಕಿಡಿ ಕಾರಿ, ಸಭೆ ಸೇರಿಕೊಂಡರು; ಸದಾ ಊರಿನ ನೆಮ್ಮದಿಗೆ ಬೆಂಕಿ ಸುರಿಯುತ್ತಿದ್ದ ಸುರೇಶ ಅಕ್ಕಿಯನ್ನು ಊರಿಂದ ಬಹಿಷ್ಕಾರ ಹಾಕಲು ತಿರ್ಮಾನಿಸಿದರು; ನೇರ ಪೊಲೀಸ್ ಠಾಣೆಗೆ ತೆರಳಿ, ಪೊಲೀಸರ ಮೈಮೇಲಿನ ದೆವ್ವ ಬಿಡಿಸಿದರು. "ಇನ್ನ ನಾವ್ ಸುಮ್ನ ಕುಂತ್ರ ಜನಾ ನಮ್ಗೂ ಚಪ್ಲಿ ತೊಗೊಂಡ ಹೊಡಿತಾರ" ಎಂದು ಕನವರಿಸಿದ ಪೊಲೀಸರು ನವೆಂಬರ್ 24ರಂದು ಸುರೇಶ ಅಕ್ಕಿಯನ್ನ ಹುಡುಗಿ ಸಮೇತ ಠಾಣೆಗೆ ಎಳೆದು ತಂದರು. ಸಂಜು ಜೈನ್‌ಳನ್ನು ಸುಖರಾಜ್‌ರ ಕುಟುಂಬಕ್ಕೆ ಒಪ್ಪಿಸಿ, ಸುರೇಶ ಅಕ್ಕಿಯನ್ನು ಜೈಲಿಗಟ್ಟಿದರು.

ಸಂಜು ಜೈನ್‌ಳ ಕಿಡ್ನಾಪ್ ಪ್ರಕರಣದ ಹಿಂದೆ ಮುತಾಲಿಕ್‌ನ ಪ್ರೇರೇಪಣೆಯಂತೂ ಇದ್ದೇ ಇದೆ. ಮುತಾಲಿಕ್‌ನ ಬಾಯಿ ಹರಕುತನವೇ ಸಂಜೂಳನ್ನು ಸುರೇಶ ಅಕ್ಕಿ ಹೊತ್ತೊಯ್ಯುವುದಕ್ಕೆ ಕಾರಣವಾಗಿದೆ. ಇಂತಹ ವಿಕೃತ ವಾನರರನ್ನು ಗದಗಿನಿಂದ ಒದ್ದೋಡಿಸಬೇಕಿದೆ, ಶಿಶುನಾಳ ಶರೀಫರ ಪರಂಪರೆಯನ್ನು ಎತ್ತಿ ಹಿಡಿಯಬೇಕಿದೆ.

– ಹುರಳಿಕುಪ್ಪಿ ವಿನಯ್

ಕಚ್ಚೆ ಹರುಕರ ಗುರು ಮುತಾಲಿಕ್

ರಾಜ್ಯದ ನೆಮ್ಮದಿಗೆ ಕಂಟಕಪ್ರಾಯವಾಗಿರುವ ಪ್ರಮೋದ ಮುತಾಲಿಕ್ ಕಚ್ಚೆ ಹರುಕರ ಗುರು ಎಂಬುದು ಶಿರಹಟ್ಟಿ ಕಿಡ್ನಾಪ್ ಪ್ರಕರಣದಿಂದ ಮತ್ತೊಮ್ಮೆ ಸಾಬೀತಾಗಿದೆ. ಆದರೆ ಉತ್ತರ ಕರ್ನಾಟಕದಲ್ಲಿ ತನ್ನ ವಾನರ ಪಡೆಯಲ್ಲಿ ಸುರೇಶ ಅಕ್ಕಿಯಂತಹ ಹೆಣ್ಣುಬಾಕರನ್ನೇ ಮುತಾಲಿಕ್ ತುಂಬಿಸಿಕೊಂಡಿರುವುದು ನಗ್ನ ಸತ್ಯ.

ಮುತಾಲಿಕ್‌ನ ಮತ್ತೋರ್ವ ಶಿಷ್ಯ ಸಂಗೂ ಹುಂಡೆಕಾರ ಈ ಹಿಂದೆಯೇ ಹುಡುಗಿಯೊಬ್ಬಳಿಗೆ ಸಂತಾನಾಭಿವೃದ್ಧಿ ಪ್ಯಾಕ್ಸಿಸಿ, ಕೊನೆಗೆ ಅವಳಿಗೆ ಕೈಕೊಟ್ಟಿದ್ದ. ಹುಬ್ಬಳ್ಳಿ ಜನ ಅವನನ್ನು ಅಟ್ಟಾಡಿಸಿಕೊಂಡು ಉಗಿದು ಒದ್ದಿದ್ದರು. ಇಷ್ಟೆಲ್ಲಾ ಆದರೂ ಮುತಾಲಿಕ್ ಮಾತ್ರ ಹುಂಡೆಕಾರನನ್ನು ತನ್ನ ಪಡೆಯಿಂದ ಹೊರದಬ್ಬಲಿಲ್ಲ.

ಮುತಾಲಿಕ್‌ನ ಇನ್ನೊಬ್ಬ ಪರಮ ಶಿಷ್ಯ ಹುಬ್ಬಳ್ಳಿಯ ಕಮರಿಪೇಟೆಯ ಅಕ್ರಮ ಲಿಕ್ಕರ್ ಕುಳ ಕೃಷ್ಣಾ ಕಂಡಗಾಳೆಕರ. ಈತ ಅದೆಷ್ಟೋ ರಾತ್ರಿಗಳನ್ನು ಹಿಂದೂ ಹುಡುಗಿಯರ ಸೆರಗಿನಲ್ಲಿ ಕಳೆದಿದ್ದು ಗುಟ್ಟಾಗಿ ಉಳಿದಿಲ್ಲ.

ಮುತಾಲಿಕ್ ಎಂಬ ಬಾಯಿ ಹರುಕ ಗುರುವಿನ ಸಾನ್ನಿಧ್ಯದಲ್ಲಿ ಇನ್ನೆಷ್ಟು ಕಚ್ಚೆಹರುಕ ಶಿಷ್ಯಂದಿರು ಇದ್ದಾರೋ ಕಾಲವೇ ಹೇಳುತ್ತದೆ. ಆದರೆ ಅದಕ್ಕೂ ಮುನ್ನ ಅದೆಷ್ಟು ಹುಡುಗಿಯರ ಬದುಕು ಬರ್ಬಾದ್ ಆಗುತ್ತದೆಯೋ ಎಂಬುದೇ ಎಲ್ಲರ ಚಿಂತೆ.

ಅಂದಹಾಗೆ, ಶಿರಹಟ್ಟಿಯ ಸುರೇಶ ಅಕ್ಕಿ ಮಾಡಿದ ಘನಂದಾರಿ ಕೆಲಸದಿಂದಾಗಿ ಗದುಗಿನ ಚೆಡ್ಡಿಗಳೆಲ್ಲ ಬಾಯಿಗೆ ಬೀಗ ಹಾಕಿಕೊಂಡು ಕೂತಿದ್ದಾರೆ. ಅದೆಲ್ಲೋ ಸಮುದ್ರದ ಆಳದಲ್ಲಿರುವ ಬೆಟ್ಟ, ಸೇತುವೆ ಅಂತ ದಿನವಿಡೀ ವಟವಟ ಎನ್ನುತ್ತಾ ಒಂದಿಲ್ಲೊಂದು ಸರ್ಕಸ್ ನಡೆಸುತ್ತಿದ್ದ ಗದಗಿನ ಶ್ರೀಕಾಂತ ಕಟವಟೆ, ಪವಾರ, ರವಿ ಶಿದ್ಲಿಂಗ, ನರಗುಂದಕರ, ಶ್ರೀಧರ ಕುಲಕರ್ಣಿಗಳೆಂಬ ಚೆಡ್ಡಿ ಲೀಡರಗಳೆಲ್ಲ ತಮ್ಮದೆ ಪಡೆಯ ಹಿಂದೂ ವೀರನಿಂದ ನಡೆದ ಜೈನರ ಹುಡುಗಿಯ ಕಿಡ್ನಾಪ್ ಪ್ರಕರಣವನ್ನು ಕುರಿತು ತುಟಿಪಿಟಿಕ್ಕೆನ್ನುತ್ತಿಲ್ಲ. ಇವರ ಮನೆಹಾಳ ಹಿಂದೂ ಪ್ರೇಮ ಮತ್ತು ಸ್ತ್ರೀ ರಕ್ಷಣೆ ಅದೆಷ್ಟು ನಿಷ್ಠೆಯಿಂದ ಕೂಡಿದೆ ಎಂಬುದು ಇದರಿಂದಲೇ ಸ್ಪಷ್ಟವಾಗುತ್ತದೆ.

ಮದ್ಯ-ಗಾಂಜಾಗಳ ದರ್ಬಾರ್



ಹುಬ್ಬಳ್ಳಿ-ಧಾರವಾಡ

ಸರ್ಕಾರ ಸಾರಾಯಿ ನಿಷೇಧ ಮಾಡಿ ಯಾರಿಗೆ ಒಳ್ಳೆಯದು ಮಾಡಿತ್ತೋ ಗೊತ್ತಿಲ್ಲ. ಇದರಿಂದ ಬಾರ್‌ಗಳ ಮಾಲೀಕರು ಮಾತ್ರ ಉದ್ಧಾರವಾಗಿಬಿಟ್ಟಿದ್ದಾರೆ. ಮೊದಲು ಕಡಿಮೆ ಹಣದಲ್ಲಿ ಸಾರಾಯಿ ಕುಡಿಯುತ್ತಿದ್ದ ಜನ ಈಗ ಅನಿವಾರ್ಯವಾಗಿ ಬಾರ್‌ಗಳಿಗೆ ಹೆಚ್ಚು ಹಣ ಸುರಿಯಬೇಕಾಗಿದೆ. ಆದರೆ ಅವರಿಗೆ ಅಲ್ಲಿ ಸಿಗುವುದೂ ಕೂಡ ಅಸಲಿ ಮದ್ಯವಲ್ಲ, ಎಲ್ಲ ನಕಲಿಯೇ. ಹುಬ್ಬಳ್ಳಿ-ಧಾರವಾಡ ಅವಳಿನಗರಗಳ ಯಾವುದೇ ಬಾರ್‌ಗೆ ಹೋದರೂ ಅಲ್ಲಿ ಅಸಲಿ ಮದ್ಯ ಸಿಗುತ್ತದೆಂಬ ಖಾತ್ರಿ ಇಲ್ಲ, ಎಲ್ಲಿ ನೋಡಿದರೂ ನಕಲಿ ಮದ್ಯದ್ದೇ ದರ್ಬಾರ್.

ನಕಲಿ ಮದ್ಯ ತಯಾರಿಕೆಯ ಕೇಂದ್ರವಾದ ಕಮರಿಪೇಟೆಗೆ ಸರಿಯಾಗಿ ಗುದ್ದಿದ ಹಿಂದಿನ ಪೊಲೀಸ್ ಕಮೀಷನರ್ ಗಗನ್‌ದೀಪ್ ನಕಲಿ ಮದ್ಯ ತಯಾರಿಕೆಯನ್ನು ಒಂದಷ್ಟು ಮಟ್ಟಿಗೆ ಕಂಟ್ರೋಲ್ ಮಾಡಿದ್ದರು. ಈಗದು ಮತ್ತೆ ಗರಿಗೆದರಿ ನಿಂತಿದೆ. ಹಾಲಿ ಕಮೀಷನರ್ ನಾರಾಯಣ್ ನಡುಮನಿ ಮೊನ್ನೆ ಹುಬ್ಬಳ್ಳಿಗೆ ಬರುತ್ತಿದ್ದ ಸುಮಾರು 88,000 ಲೀಟರ್ ಅಕ್ರಮ ಸ್ಪಿರಿಟ್‌ನ್ನು ವಶಪಡಿಸಿಕೊಂಡಿದ್ದಾರೆ. ನಾಲ್ಕು ಸ್ಪಿರಿಟ್ ತುಂಬಿದ ಟ್ಯಾಂಕರ್‌ಗಳು, ಸ್ಪಿರಿಟ್ ಕ್ಯಾನ್‌ಗಳು, ಬಾಟ್ಲಿಂಗ್‌ಗಳು – ಹೀಗೆ ಒಟ್ಟು 55 ಲಕ್ಷ ಮೌಲ್ಯದ ವಸ್ತುಗಳನ್ನು ಈ ರೇಡ್‌ನಲ್ಲಿ ವಶಪಡಿಸಿಕೊಳ್ಳಲಾಗಿದೆ.



ಪ್ರೇಮನಾಥ್ ಉರ್ಫ್ ಬುದ್ದು ಸಾ

ಕದ್ದುಮುಚ್ಚಿ ಮದ್ಯ ಮಾರುವ ಅಂಗಡಿಗಳು ಮಾತ್ರವೇ ಈ ಸ್ಪಿರಿಟ್‌ನ್ನು ಉಪಯೋಗಿಸುತ್ತಿವೆ ಎನ್ನುವುದಾದರೆ ಇಷ್ಟೊಂದು ದೊಡ್ಡ ಪ್ರಮಾಣದ ಸ್ಪಿರಿಟ್ ಅಗತ್ಯವೇ ಇಲ್ಲ. ಬದಲಾಗಿ, ಅವಳಿ ನಗರಗಳ ಬಾರ್‌ಗಳೂ ಕೂಡ ನಕಲಿ ಮದ್ಯವನ್ನೇ ಮಾರುತ್ತಿರುವುದರಿಂದಲೇ ಅವಳಿ ನಗರಗಳಿಗೆ ಇಷ್ಟೊಂದು ಪ್ರಮಾಣದ ನಕಲಿ ಸ್ಪಿರಿಟ್ ಹರಿದು ಬರುತ್ತಿರುವುದು.

ಬಾರ್ ಮಾಲಿಕರ ಕೃಪಾಕಟಾಕ್ಷದಿಂದ ಮೈಕೈ ಬೆಚ್ಚಗೆ ಮಾಡಿಕೊಂಡು ಕುಳಿತಿರುವ ಪೊಲೀಸರು ಬಾರ್‌ಗಳಲ್ಲಿ ದೊರೆಯುವುದು ಅಸಲಿ ಮದ್ಯವೇ ಎಂದು ವಕಾಲತ್ತು ವಹಿಸುತ್ತಿದ್ದಾರೆ. ಪಾಪ, ಅವರು ಅದಕ್ಕಿಂತ ಹೆಚ್ಚು ಇನ್ನೇನು ಮಾಡಬಹುದು ಹೇಳಿ?

ಮೊನ್ನೆ ಅಕ್ರಮ ಸ್ಪಿರಿಟ್ ವಶಪಡಿಸಿಕೊಂಡ ಪೊಲೀಸರು ತಕ್ಷಣ ಪ್ರೇಮನಾಥ್ ಸಾ ಉರ್ಫ್ ಬುದ್ದು ಸಾ ಬಾಂಡಗೆ ಎಂಬಾತನನ್ನು ಅರೆಸ್ಟ್ ಮಾಡಿದ್ದಾರೆ. ಈತ ಈ ದಂಧೆಗೆ ಹಳೇ ಗಿರಾಕಿ. ಆದರೆ ಅಕ್ರಮ ಸ್ಪಿರಿಟ್ ದಂಧೆ ಮಾಡುವವರನ್ನು, ಗೂಂಡಾಗಳನ್ನು ಒದ್ದು ಕಂಬಿ ಹಿಂದೆ ಕಳಿಸಿದ ಗಗನ್‌ದೀಪ್ ಅವರಿಗಾಗಲೀ, ನಡುಮನಿ ಸಾಹೇಬ್ರಿಗಾಗಲೀ ಈತ ಸಿಕ್ಕಿರಲಿಲ್ಲ ಎಂದರೆ ನಂಬುವುದು ತುಸು ಕಷ್ಟವೆ. ಅಲ್ಲದೆ, ನಕಲಿ ಮದ್ಯ ತಯಾರಿಕೆಗೆ ಬೇಕಾಗುವ ಈ ಸ್ಪಿರಿಟ್ (ಮದ್ಯಸಾರ) ತಯಾರಾಗುವುದು ಸಕ್ಕರೆ ಕಾರ್ಖಾನೆಗಳಲ್ಲಿ ಎಂಬುದು ಗೊತ್ತಿದ್ದರೂ ಅವಳಿನಗರಗಳ ಪೊಲೀಸರು ಅವುಗಳ ಮೇಲೆ ನಿಗಾ ಇಡದಿರುವುದು ಏನನ್ನು ಸೂಚಿಸುತ್ತದೆ?

ನಾಗರಾಜ್ ಛಬ್ಬಿಯೇ ಕಾರುಬಾರು

ವಾಸ್ತವದಲ್ಲಿ ಅವಳಿ ನಗರದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ನಡೆಯುತ್ತಿರುವ ನಕಲಿ ಮದ್ಯದ ವಹಿವಾಟಿನ ಹಿಂದೆ ಇರುವುದು ನಾಗರಾಜ್ ಛಬ್ಬಿ ಎಂಬುದು ಬಹಳ ಜನಕ್ಕೆ ಗೊತ್ತಿರಲಿಕ್ಕಿಲ್ಲ. ಈತ ಮಾಜಿ ಮುಖ್ಯಮಂತ್ರಿ ಧ್ರಮ್ ಸಿಂಗರ ಖಾಸಾ ಭಂಟ ಮಾತ್ರವಲ್ಲ ಕಾಂಗ್ರೆಸ್‌ನ ಜಿಲ್ಲಾ ಗ್ರಾಮೀಣ ಅಧ್ಯಕ್ಷ ಕೂಡ.


ಈತ ಹುಬ್ಬಳ್ಳಿಯ ಎಂ.ಕೆ. ಶುಗರ್ ಫ್ಯಾಕ್ಟರಿ, ಸವದತ್ತಿಯ ರೇಣುಕಾ ಶುಗರ್ಸ್, ಜಮಖಂಡಿಯ ಶುಗರ್ ಫ್ಯಾಕ್ಟರಿಗಳಿಂದ ಮದ್ಯಸಾರ ತರಿಸಿ ಅವಳಿ ನಗರದಾದ್ಯಂತ ಹಂಚುತ್ತಾನೆ. ಈ ದಂಧೆಗೆಂದೇ ಈತ ನಾಲ್ಕು ಟ್ಯಾಂಕರ್‌ಗಳನ್ನು ಖರೀದಿಸಿದ್ದಾನೆ. ಮಾಜಿ ಕೇಂದ್ರ ಸಚಿವ ಸಿದ್ದು ನ್ಯಾಮಗೌಡರ ಜಾತಿ ಗೆಳೆತನ ಬೆಳೆಸಿ, ಅವರ ಶುಗರ್ ಫ್ಯಾಕ್ಟರಿಯಿಂದಲೇ ಸ್ಪಿರಿಟ್ ಪೂರೈಸುವ ದಂಧೆ ಶುರು ಹಚ್ಚಿಕೊಂಡಿದ್ದ. ಒಂದು ಕಾಲದಲ್ಲಿ ರೂಪಾಯಿಗೂ ಬಾಯಿಬಿಡುತ್ತಿದ್ದ ಈತ ಇಂದು ಕೋಟ್ಯಾಧಿಪತಿಯಾಗಿದ್ದಾನೆಂದರೆ ಸ್ಪಿರಿಟ್ ದಂಧೆಯ ಮಹಿಮೆ ಅರ್ಥವಾಗದಿರದು. ಹುಬ್ಬಳ್ಳಿಯ ಸಿದ್ಧಾರೂಢ ಮಠದ ಹತ್ತಿರ ಈತ ಹೊಸದಾಗಿ ಕಟ್ಟಿಸಿದ ಬಂಗ್ಲೆಯ ಮೌಲ್ಯ ಕೋಟಿ ದಾಟುತ್ತದೆ: ಇವನು ಸಾಕಿದ ನಾಲ್ಕು ನಾಯಿಗಳ ಕಿಮ್ಮತ್ತೇ ನಾಲ್ಕು ಲಕ್ಷ.



ನಾಗರಾಜ್ ಛಬ್ಬಿ


ಈಗ ಕಲಘಟಗಿ ಕ್ಷೇತ್ರದಿಂದ ಶಾಸಕನಾಗಿ ಆಯ್ಕೆಯಾಗಲು ಈತ ಎಲ್ಲಾ ಸಿದ್ಧತೆಗಳನ್ನು ನಡೆಸಿದ್ದಾನೆ. ಎರಡು ವರ್ಷಗಳ ಹಿಂದೆ ಕೋಟ್ಯಂತರ ರೂಪಾಯಿ ಚೆಲ್ಲಿ ರಾಜ್ಯ ಯುವ ಕಾಂಗ್ರೆಸ್ ಸಮಾವೇಶ ಮಾಡಿ ಕೇಂದ್ರ, ರಾಜ್ಯ ನಾಯಕರ ಆಶೀರ್ವಾದ ಪಡೆದುಕೊಂಡಿದ್ದಾನೆ. ಅಷ್ಟೇ ಅಲ್ಲದೆ, ಕೇಂದ್ರದ ನಾಯಕರಿಗೆ ಕಪ್ಪಕಾಣಿಕೆಗಳನ್ನು ಸಮರ್ಪಿಸಿ ಕೇಂದ್ರ ಸರ್ಕಾರದ ತರಬೇತಿ ಮತ್ತು ಉದ್ಯೋಗ ಇಲಾಖೆಯ ಸಂಸ್ಥೆಯಲ್ಲಿ ಅಧ್ಯಕ್ಷಗಿರಿ ಕೂಡ ಸಂಪಾದಿಸಿಕೊಂಡಿದ್ದಾನೆ. ಈ ಎಲ್ಲಾ ಕಾರಣಗಳಿಂದಲೇ ನಡುಮನಿ ಸಾಹೇಬ್ರು ಅವನ ಉಸಾಬರಿಗೆ ಬರುತ್ತಿಲ್ಲ ಅಂತ ಕಾಣುತ್ತೆ. ಹುಬ್ಬಳ್ಳಿ ಧಾರವಾಡ ಶಹರಿನ ಜನರನ್ನು ಕಾಪಾಡುವವರು ಯಾರು?

– ವರದಿಗಾರ




‘ಮುಖ್ಯಮಂತ್ರಿ ಐ ಲವ್ ಯೂ’ಗೆ ತಿರುಗೇಟು

ಸಿಎಂ ಹೆಡ್ಡಪ್ಪನ ಪ್ರೇಮ ಪ್ರಸಂಗ!



ಹೆಡ್ಡಪ್ಪ ಆಗಿ ಓಂಪುರಿ



ಕುಮಾರ ಆಗಿ ಕೊಬ್ರಿ ಮಂಜು

ಪಾತ್ರದ ಹೆಸರು ಮುಖ್ಯಮಂತ್ರಿ ಹೆಡ್ಡಪ್ಪ!

ಥೇಟು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರನ್ನೇ ಹೋಲುವ ಪಾತ್ರವದು. ವಿಧಾನಸೌಧದ ಮೆಟ್ಟಿಲುಗಳ ಮೇಲೆ ರಾಜ್ಯಪಾಲರು ಹೆಡ್ಡಪ್ಪನವರಿಗೆ ಪ್ರಮಾಣವಚನ ಭೋದಿಸಿದ ಮರುಕ್ಷಣವೇ ನೆರೆದ ಸಹಸ್ರಾರು ಜನರೆದುರೇ ಅಹಿತಕರ ಘಟನೆಯೊಂದು ನಡೆಯುತ್ತದೆ. ಇನ್ನೇನು ಮುಖ್ಯಮಂತ್ರಿ ಹೆಡ್ಡಪ್ಪ ಮತ್ತು ಪ್ರಜಾ ಜನಾಂದೋಲನ ಪಕ್ಷದ (ಪಿಜೆಪಿ) ನಾಯಕಿ ಶುಭಾ ಕಾರಂಜಿ ಒಟ್ಟೊಟ್ಟಿಗೇ ನಿಂತು ಪ್ರಮಾಣವಚನ ಕಾರ್ಯಕ್ರಮಕ್ಕೆ ಬಂದಿದ್ದ ಜನಕ್ಕೆ ಕೈಬೀಸಿ ಅಭಿನಂದಿಸಬೇಕೆನ್ನುವಷ್ಟರಲ್ಲಿ ಮುಖ್ಯಮಂತ್ರಿ ಹೆಡ್ಡಪ್ಪನ ಮೊಮ್ಮಗಳು ಇದ್ದಕ್ಕಿದ್ದಂತೆ ವೇದಿಕೆಗೆ ನುಗ್ಗಿ ತಾತ ಹೆಡ್ಡಪ್ಪನನ್ನು ಹಿಡಿದು ಹೊಡೆಯಲಾರಂಭಿಸುತ್ತಾಳೆ. ‘ಅಜ್ಜಿಯನ್ನು ಸಾಯಿಸಿದ್ದು ನೀನೇ..... ನೀನೇ.....!’ ಎಂದು ಮುಖ್ಯಮಂತ್ರಿಯನ್ನೂ ಪಕ್ಕದಲ್ಲಿದ್ದ ಶುಭಾ ಕಾರಂಜಿಯನ್ನೂ ಕಂಡು ಅಳಲಾರಂಭಿಸುತ್ತಾಳೆ.

ಅಲ್ಲಿಗೆ ಗಾಬರಿ ಬಿದ್ದ ಮುಖ್ಯಮಂತ್ರಿ ಹೆಡ್ಡಪ್ಪನ ಮಗಳು ತನ್ನ ಪುಟ್ಟ ಮಗಳನ್ನು ಹೊಡೆಯುತ್ತಲೇ ಎಳೆದೊಯ್ಯುತ್ತಾಳೆ. ಇದನ್ನು ಗಮನಿಸಿದ ವರದಿಗಾರನೊಬ್ಬನಿಗೆ ಅಲ್ಲಿಗೆ ವರ್ಷದ ಹಿಂದೆ ಕೊಲೆಯಾಗಿದ್ದ ಹೆಡ್ಡಪ್ಪನ ಪತ್ನಿ ನೇತ್ರಾದೇವಿಯ ಹತ್ಯೆಯನ್ನು ಕೆದಕಲು ಈ ಘಟನೆಯೇ ಪ್ರೇರಣೆಯಾಗುತ್ತದೆ.

ನೇತ್ರಾದೇವಿ ಆಗ ಉಪಮುಖ್ಯಮಂತ್ರಿಯಾಗಿದ್ದ ಹೆಡ್ಡಪ್ಪನ ಪತ್ನಿ. ಆ ಹೊತ್ತಿಗಾಗಲೇ ಹೆಡ್ಡಪ್ಪನ ಇಬ್ಬರು ನಾದಿನಿಯರು ತಮಗೆ ಹೆಡ್ಡಪ್ಪ ಕಿರುಕುಳ ಕೊಡುತ್ತಿದ್ದಾನೆಂದು ಪತ್ರಿಕಾಗೋಷ್ಠಿ ಕರೆದು ಆರೋಪಿಸುತ್ತಾರೆ. ಇದು ಆಗ ವಿರೋಧ ಪಕ್ಷವಾಗಿದ್ದ ಪಿಜೆಪಿಗೆ ನುಂಗಲಾರದ ತುತ್ತಾಗುತ್ತದೆ. ಕ್ರಮೇಣ ಮಾಜಿ ಮುಖ್ಯಮಂತ್ರಿ ದೇವಪ್ಪಗೌಡರ ಮಗ ಕುಮಾರ್ ಮತ್ತು ಹೆಡ್ಡಪ್ಪ ಒಂದಾಗಿ ಸರ್ಕಾರ ರಚಿಸುತ್ತಾರೆ. ಹೆಡ್ಡಪ್ಪ ಉಪಮುಖ್ಯಮಂತ್ರಿಯಾದ ಕೆಲವೇ ತಿಂಗಳಲ್ಲಿ ಆತನ ಪತ್ನಿ ನೇತ್ರಾದೇವಿಯ ಹೆಣ ಮನೆಯ ಹಿಂದಿದ್ದ ನೀರಿನ ತೊಟ್ಟಿಯಲ್ಲಿ ತೇಲಾಡುತ್ತದೆ. ಅದೊಂದು ಕೊಲೆ ಎಂಬುದೇ ಗೊತ್ತಾಗದ ಹಾಗೇ ಪೋಸ್ಟ್‌ಮಾರ್ಟಂ ಕೂಡ ಮಾಡದೇ ನೇತ್ರಾದೇವಿಯ ಅಂತ್ಯಕ್ರಿಯೆ ಮುಗಿದುಹೋಗುತ್ತದೆ.

ಅಸಲೀ ಸಂಗತಿಯೇನೆಂದರೆ ಉಪಮುಖ್ಯಮಂತ್ರಿ ಹೆಡ್ಡಪ್ಪ ಮತ್ತು ಅದೇ ಪಕ್ಷದ ನಾಯಕಿ ಶುಭಾ ಕಾರಂಜಿ ಸೇರಿಕೊಂಡು ನೇತ್ರಾದೇವಿಯನ್ನು ಕೊಂದು ನೀರಿನ ತೊಟ್ಟಿಗೆ ಹಾಕಿರುತ್ತಾರೆ. ಹಾಗೇ ಕೊಂದಿದ್ದನ್ನು ಹೆಡ್ಡಪ್ಪನ ಪುಟ್ಟ ಮೊಮ್ಮಗಳು ತನ್ನ ಕಣ್ಣಾರೆ ನೋಡಿರುತ್ತಾಳೆ. ಆವತ್ತಿನಿಂದ ತಾತ ಹೆಡ್ಡಪ್ಪನನ್ನು ಕಂಡಿದ್ದೇ ಆ ಮೊಮ್ಮಗಳು ‘ಅಜ್ಜಿಯನ್ನು ನೀನೇ ಕೊಂದಿದ್ದು’ ಎಂದು ಅಳುತ್ತಿರುತ್ತಾಳೆ. ಅ ಕಾರಣಕ್ಕೇ ಹೆಡ್ಡಪ್ಪ ತನ್ನ ಮೊಮ್ಮಗಳನ್ನು ಯಾರ ಕಣ್ಣಿಗೂ ಬೀಳದ ಹಾಗೇ ಮಗಳಿಗೆ ಹೇಳಿ ಬಚ್ಚಿಟ್ಟಿರುತ್ತಾನೆ. ಆದರೆ ಪ್ರಮಾಣ ವಚನ ಸಮಾರಂಭಗಳಲ್ಲಿ ನಡೀಬಾರದ್ದು ನಡೆದು ಹೋಗುತ್ತದೆ.

ಅಂತಿಮವಾಗಿ ಮಾಜಿ ಪ್ರಧಾನಿ ದೇವಪ್ಪಗೌಡರ ಮಗ ಕುಮಾರ್ ಮತ್ತು ವರದಿಗಾರನೊಬ್ಬ ಸೇರಿಕೊಂಡು ಮುಖ್ಯಮಂತ್ರಿ ಹೆಡ್ಡಪ್ಪ ಮತ್ತು ನಾಯಕಿ ಶುಭಾ ಕಾರಂಜಿ ಸೇರಿಕೊಂಡು ನೇತ್ರಾದೇವಿಯನ್ನು ಕೊಂದ ಬಗ್ಗೆ ಸಾಕ್ಷ್ಯಾಧಾರ ಸಂಗ್ರಹಿಸಿ ರಾಜ್ಯಪಾಲರಿಗೆ ದೂರು ಕೊಡುತ್ತಾರೆ. ರಾಜ್ಯಪಾಲರು ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಿದಾಗ ಸಿಬಿಐ ಪೊಲೀಸರು ಮುಖ್ಯಮಂತ್ರಿಯಾಗಿದ್ದ ಹೆಡ್ಡಪ್ಪನನ್ನೇ ಬಂಧಿಸಿ ಜೈಲಿಗೆ ಹಾಕುತ್ತಾರೆ. ಅಲ್ಲಿಗೆ ಹೆಡ್ಡಪ್ಪನ ವಿರುದ್ಧ ಪಿಜೆಪಿ ಪಕ್ಷದ ಶಾಸಕರೇ ಬಂಡೆದ್ದು ರಾಷ್ಟ್ರಪತಿ ಆಳ್ವಿಕೆ ಘೋಷಣೆಯಾಗುತ್ತದೆ. ವಿಧಾನ ಸಭೆಯೂ ವಿಸರ್ಜನೆಯಾಗುತ್ತದೆ!

ಇದು ‘ಶಿಕಾರಿ ಸಿ.ಎಂ. ಹೆಡ್ಡಪ್ಪನ ಪ್ರೇಮ ಪ್ರಸಂಗ’ ಎಂಬ ಚಿತ್ರದ ಕಥಾವಸ್ತು. ‘ಮರ್ಡರ್ ಆಫ್ ಮಿಸೆಸ್ ಹೆಡ್ಡಪ್ಪ’ ಎಂಬ ಮತ್ತೊಂದು ಹೆಸರನ್ನೂ ಇಡುವ ಸಾಧ್ಯತೆಯಿದೆ. ಅಂದಹಾಗೇ ಇಷ್ಟರಲ್ಲೇ ಮುಹೂರ್ತ ಕಾಣಲಿರುವ ಈ ಸಿನಿಮಾದ ನಿರ್ಮಾಪಕ ಮತ್ತು ನಿರ್ದೇಶಕ ಬಾ.ಮಾ. ಹರೀಶ್!

ಬಾ.ಮಾ. ಹರೀಶ್ ಕನ್ನಡ ಪ್ರಮುಖ ಚಿತ್ರ ನಿರ್ಮಾಪಕರಲ್ಲೊಬ್ಬರೆಂಬ ಬಗ್ಗೆ ಎರಡು ಮಾತಿಲ್ಲ. ಈಗಾಗಲೇ ಫಿಲ್ಮ್ ಛೇಂಬರ್‌ನಲ್ಲಿ ಇದೇ ಧಾಟಿಯ ಮೂರ್ನಾಲ್ಕು ಟೈಟಲ್‌ಗಳನ್ನು ರಿಜಿಸ್ಟರ್ ಮಾಡಿಸಿದ್ದಾರೆ. ಬರುವ ಚುನಾವಣೆಯ ಹೊತ್ತಿಗೆ ಚಿತ್ರ ಬಿಡುಗಡೆ ಗ್ಯಾರಂಟಿ ಎನ್ನುತ್ತಾರೆ. ಸಿ.ಎಂ. ಹೆಡ್ಡಪ್ಪನ ಪಾತ್ರಕ್ಕೆ ಹಿಂದಿಯ ಖ್ಯಾತ ನಟ ಓಂಪುರಿಯ ಕಾಲ್ ಶೀಟ್ ಕೇಳುತ್ತಾರಂತೆ. ಶುಭಾ ಕಾರಂಜಿಯ ಪಾತ್ರಕ್ಕೆ ವನಿತಾವಾಸು ಗೊತ್ತಾಗಿದ್ದಾರಂತೆ. ಕೊಲೆಯಾದ ಪತ್ನಿ ನೇತ್ರಾದೇವಿ ಪಾತ್ರವನ್ನು ಕನ್ನಡದ ನಟಿ ಸತ್ಯಭಾಮಾ ನಿರ್ವಹಿಸುತ್ತಾರಂತೆ!



ಯಡಿಯೂರಪ್ಪ



ಮೈತ್ರಾದೇವಿ


ಇದು ಬಾ.ಮಾ. ಹರೀಶ್ ಕೊಡುವ ವಿವರಣೆ. ತಮಾಷೆಯೆಂದರೆ ಇದೇ ಚಿತ್ರದಲ್ಲಿ ಗಣಿ ರೆಡ್ಡಿಯ ಪಾತ್ರವೂ ಇದೆಯಂತೆ. ಜೊತೆಗೆ ಬಳ್ಳಾರಿಯ ರೌಡಿ ರಾಮುಲು ಪಾತ್ರವೂ ಬರುತ್ತದೆಯಂತೆ. ಗುರು ಮುಖ್ಯಮಂತ್ರಿ ಹೆಡ್ಡಪ್ಪನನ್ನು ಅನುಕರಿಸಲು ಹೋಗಿ ಆತನ ಬಲಗೈ ಬಂಟ ಎಮ್ಮೆಲ್ಲೇ ರೇಣುಕಾಪ್ರಸಾದ್ ನರ್ಸ್ ಜಯಮ್ಮಳ ಜೊತೆ ಚಕ್ಕಂದ ಆಡುವ ಬಿಸಿಬಿಸಿ ದೃಶ್ಯಗಳನ್ನೂ ಚಿತ್ರೀಕರಿಸುತ್ತಾರಂತೆ. ಎಮ್ಮೆಲ್ಲೇ ರೇಣುಕಾಪ್ರಸಾದ್ ಪಾತ್ರವನ್ನು ಮಳವಳ್ಳಿಯ ಶಾಸಕ ಅಂದಾನಿಯೂ, ನರ್ಸ್ ಜಯಮ್ಮಳಾಗಿ ಶ್ರೀರಕ್ಷಾ ಅಥವಾ ಚಿತ್ರಾ ಶೆಣೈ ನಟಿಸಲಿದ್ದಾರೆಂದು ಬಾ.ಮಾ. ಹರೀಶ್ ಹೇಳುತ್ತಾರೆ. ವಿಶೇಷವೆಂದರೆ ಈ ಚಿತ್ರದಲ್ಲಿ ಬರುವ ಮತ್ತೊಬ್ಬ ಮುಖ್ಯಮಂತ್ರಿ ಕುಮಾರ್ ಪಾತ್ರವನ್ನು ಕನ್ನಡದ ಪ್ರಮುಖ ಫಿಲ್ಮ್ ಪ್ರೊಡ್ಯೂಸರ್ ಕೊಬ್ರಿ ಮಂಜು ನಿರ್ವಹಿಸಲಿರುವುದು!

ಚಿತ್ರದ ಕತೆ, ಪಾತ್ರಗಳ ರೂಪ ನೋಡಿದ ಯಾರಿಗಾದರೂ ಇದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಪತ್ನಿ ಮೈತ್ರಾದೇವಿಯವರ ನಿಗೂಢ ಸಾವಿನ ಕುರಿತಂತೆ ತಯಾರಾಗುತ್ತಿರುವ ಸಿನಿಮಾ ಎನ್ನಿಸಲೇಬೇಕಲ್ಲವೆ?

ಯಡಿಯೂರಪ್ಪನವರನ್ನು ‘ಹೆಡ್ಡಪ್ಪ’ನನ್ನಾಗಿಸಿ, ಮೈತ್ರಾದೇವಿಯನ್ನು ನೇತ್ರಾದೇವಿ ಮಾಡಿ, ದೇವೇಗೌಡರನ್ನು ದೇವಪ್ಪಗೌಡರನ್ನಾಗಿಸಿ, ಶೋಭಾ ಕರಂದ್ಲಾಜೆಯನ್ನು ಶುಭಾ ಕಾರಂಜಿಯಾಗಿ ಚಿತ್ರಿಸಿ; ಜೊತೆಗೆ ಎಮ್ಮೆಲ್ಲೇ ರೇಣುಕಾಚಾರ್ಯ ಮತ್ತು ನರ್ಸ್ ಜಯಲಕ್ಷ್ಮಿಯ ಐಟಂಸಾಂಗ್ ಇಟ್ಟುಬಿಟ್ಟರೆ ಚುನಾವಣೆಯ ಹೊತ್ತಿಗೆ ಜನಕ್ಕೆ ಇದಕ್ಕಿಂತ ಮನರಂಜನೆ ಬೇಕೆ?

ಆದರೆ ಬಾ.ಮಾ. ಹರೀಶ್ ಇದನ್ನು ಒಪ್ಪುವುದಿಲ್ಲ. ಇದೊಂದು ಕಾಲ್ಪನಿಕ ಕತೆ ಎನ್ನುತ್ತಾರೆ. “ಕುಮಾರಸ್ವಾಮಿ ಮತ್ತು ರಾಧಿಕಾ ಪ್ರೇಮ ಪ್ರಸಂಗದ ಬಗ್ಗೆ ಇನ್ನೊಬ್ಬರು ಸಿನಿಮಾ ಮಾಡ್ತಾರೆ ಅಂದ್ರೆ, ಯಾರೂ ಆ ಬಗ್ಗೆ ಏಕೆ ಕೇಳುವುದಿಲ್ಲ? ನಾನ್ಯಾಕೆ ಇಂಥ ಸಿನಿಮಾ ಮಾಡಬಾರದು? ಮುಖ್ಯಮಂತ್ರಿಯೊಬ್ಬ ಯಾರೋ ನಟಿಯನ್ನು ಲವ್ ಮಾಡೋ ಕತೆಗಿಂತಲೂ ಮುಖ್ಯಮಂತ್ರಿಯೊಬ್ಬ ತನ್ನದೇ ಪಕ್ಷದ ನಾಯಕಿಯ ಮೋಹಕ್ಕೆ ಬಿದ್ದು ತನ್ನ ಪತ್ನಿಯನ್ನೇ ಕೊಲೆ ಮಾಡೋ ಕಾಲ್ಪನಿಕ ಕತೆ ಹೆಚ್ಚು ಪರಿಣಾಮಕಾರಿ ಮತ್ತು ಗಂಭೀರದ ಸಿನಿಮಾ ಆಗುತ್ತದೆ. ಅದಕ್ಕಿಂತಲೂ ಇದೇ ಹೆಚ್ಚು ಪ್ರೇಕ್ಷಕರನ್ನು ಸೆಳೆಯುತ್ತದೆ. ಅದೂ ಚುನಾವಣೆಯ ಹೊತ್ತಿಗೇ ಬಿಡುಗಡೆಯಾಗೋದ್ರಿಂದ ಅದರ ಎಫೆಕ್ಟ್ ಕೂಡ ಆಳವಾಗಿರುತ್ತದೆ....!” ಎನ್ನುತ್ತಾರೆ ಬಾ.ಮಾ. ಹರೀಶ್.

ಹಕೀಕತ್ತೇನೆಂದರೆ ಕುಮಾರ್-ರಾಧಿಕಾ ಪ್ರಣಯದ ಕುರಿತ ಚಿತ್ರಕ್ಕೆ ಗಣಿರೆಡ್ಡಿ ಎರಡು ಕೋಟಿ ಕೊಟ್ಟಿದ್ದಾರೆಂಬ ಗುಲ್ಲೆದ್ದ ಹಾಗೆಯೇ ಬಾ.ಮಾ. ಹರೀಶ್ ಚಿತ್ರಕ್ಕೆ ಸ್ವತಃ ಬಿಜೆಪಿಯ ಅನಂತ್ ಕುಮಾರ್ ಧನಸಹಾಯ ಮಾಡುತ್ತಿದ್ದಾರೆಂಬ ವದಂತಿಯೂ ಹುಟ್ಟಿಕೊಂಡಿದೆ. ಈ ಪೈಕಿ ಯಾವುದು ಸತ್ಯ? ಬಿಜೆಪಿ ಅಂತಃಕಲಹಕ್ಕೆ ಇದಕ್ಕಿಂತ ಉದಾಹರಣೆ ಬೇಕೆ? ●



ಶುಭಾ ಕಾರಂಜಿಯಾಗಿ ವನಿತಾವಾಸು


ಮೈಸೂರು: ಭೂಗತ ಲೋಕಕ್ಕೆ ಬಂತು ಬಂದೂಕು!

ಮೈಸೂರಿನ ಲ್ಯಾಂಡ್ ಮಾಫಿಯಾ ಕೈಗೆ ಈಗ ಗನ್ ಬಂದಿದೆ! ಚಿಲ್ಲರೆ ರೌಡಿಯಾಗಿದ್ದ ಅಫ್ತಾಬ್ ಯಾನೆ ಅನ್ವರ್ ಬೇಗ್ ಕಾರ್ಪೊರೇಟರ್ ಆಗಿ ಗೆದ್ದ ನಂತರ ತಾನೊಬ್ಬ ಪಾಳೇಗಾರನಾದೆ ಅಂದುಕೊಂಡನೇನೊ....

ಲೈಸನ್ಸ್ ಇಲ್ಲದ ರಿವಾಲ್ವರ್ ಒಂದನ್ನು ತಂದಿಟ್ಟುಕೊಂಡು ಮೊನ್ನೆ ಶನಿವಾರ ಅಮಾಯಕನೊಬ್ಬನ ಮೇಲೆ ಫೈರ್ ಮಾಡಿ ಓಡಿಹೋಗಿದ್ದಾನೆ. ಅವನೀಗ ಬೆಂಗಳೂರಿನಲ್ಲಿ ತಲೆಮರೆಸಿಕೊಂಡಿರುವ ಸಾಧ್ಯತೆಗಳಿವೆ.

ರೌಡಿಗಳು ರಾಜಕಾರಣಿಗಳಾಗುವುದು, ರಾಜಕಾರಣಿಗಳೇ ರೌಡಿಗಳಂತಾಡುವುದು ಕರ್ನಾಟಕದಲ್ಲೀಗ ಮಾಮೂಲಿ ವಿದ್ಯಮಾನವಾಗಿಹೋಗಿದೆ. ಅಫ್ತಾಬ್ ಇದಕ್ಕೊಂದು ಲೇಟೆಸ್ಟ್ ಉದಾಹರಣೆಯಷ್ಟೇ.

ರಾಜೀವ್ ನಗರದ ನಾಸಿರ್ ಷರೀಫ್ ಎಂಬುವನ ಮೇಲೆ ಗುಂಡು ಹಾರಿಸಿ ಪರಾರಿಯಾಗಿರುವ ಅಫ್ತಾಬ್ ಕಾಯಮ್ಮಾಗಿ ಜೈಲಿನಲ್ಲಿರಬೇಕಾದ ಮುಷ್ಕ. ಸಣ್ಣಪುಟ್ಟ ರಿಯಲ್ ಎಸ್ಟೇಟ್ ಡೀಲ್‌ಗಳನ್ನು ಮಾಡಿಕೊಂಡು, ಜೊತೆಗೊಂದಿಷ್ಟು ಪರೋಡಿ ಎಲಿಮೆಂಟುಗಳನ್ನು ಸಾಕಿಕೊಂಡಿದ್ದ ಅಫ್ತಾಬ್‌ಗೆ ರಾಜೀವ್‌ನಗರ ಏರಿಯಾದಲ್ಲಿ ಮೊದಲಿಂದಲೂ ಕಂಟ್ರೋಲ್ ಇತ್ತು. ಮೊನ್ನೆ ನಡೆದ ಎಲೆಕ್ಷನ್‌ನಲ್ಲಿ ಕಾಂಗ್ರೆಸ್‌ನಿಂದ ಗೆದ್ದು ಕಾರ್ಪೊರೇಟರ್ ಆದ ಮೇಲೆ ಇವನು ಹೊಣೆಗಾರಿಕೆ ಕಲಿಯುವ ಬದಲು ಅದನ್ನೇ ತನ್ನ ರೌಡಿಸಂಗೆ ಸಿಕ್ಕ ಲೈಸೆನ್ಸ್ ಎಂದು ಭಾವಿಸಿಬಿಟ್ಟ.




ಅಫ್ತಾಬ್

ಉದಯಗಿರಿ ಬಡಾವಣೆಯಲ್ಲಿ Alfllo ಎಂಬ ರಿಯಲ್ ಎಸ್ಟೇಟ್ ಆಫೀಸ್ ಇಟ್ಟುಕೊಂಡಿರುವ ಅಫ್ತಾಬ್‌ಗೆ ಮೊದಲಿಂದಲೂ ಲಿಟಿಗೇಷನ್ ಇರುವ ಮನೆ, ಸೈಟುಗಳ ಡೀಲು ಕುದುರಿಸಿ ಹಣ ಮಾಡಿಕೊಳ್ಳುವ ಕ್ರಿಮಿನಲ್ ಚರಿತ್ರೆ ಇದೆ. ಅದೇ ಚಾಳಿಯಿಂದ ಮೊನ್ನೆ ರಾಜೀವ್ ನಗರದಲ್ಲಿರುವ ನಾಸಿರ್ ಷರೀಫ್ ವಾಸಿಸುತ್ತಿದ್ದ


ಬಣಜಿಗರಿಗೆ ಸೀಟು- ಪಂಚಮಸಾಲಿಗರಿಗೆ ಚೊಂಬು

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜಾತಿ ರಾಜಕಾರಣವೇ ಮೆರೆಯುತ್ತಿರುವುದು ಮತ್ತು ಈ ಜಾತಿ ರಾಜಕಾರಣದಿಂದ ಮುಕ್ತವಾಗಿ ಯಾವ ರಾಜಕೀಯ ಪಕ್ಷವೂ ಉಳಿದುಕೊಂಡಿಲ್ಲದಿರುವುದು ಹೇವರಿಕೆ ಹುಟ್ಟಿಸುವ ವಿಚಾರ.

ಅದರಲ್ಲೂ ಬಿಜೆಪಿಯಂತೂ ಬ್ರಾಹ್ಮಣರು ನಾಯಕತ್ವ ವಹಿಸಿಕೊಂಡು ನಿಯಂತ್ರಿಸುವ ಪಕ್ಷವಾಗಿಹೋಗಿದೆ. ಪಕ್ಷದ ನಾಯಕತ್ವ ಸ್ಥಾನಗಳನ್ನು ತುಂಬುವಾಗ, ಚುನಾವಣಾ ಸಂದರ್ಭದಲ್ಲಿ ಪಕ್ಷದ ಟಿಕೆಟ್ ಹಂಚುವಾಗ ಮುಂತಾದ ವಿಚಾರಗಳಲ್ಲಿ ಬ್ರಾಹ್ಮಣರಿಗೇ ಮೊದಲ ಆದ್ಯತೆ. ಅಂದರೆ, ಸಂಖ್ಯಾತ್ಮಕವಾಗಿ ತೀರಾ ಕಡಿಮೆ ಇರುವ ಬ್ರಾಹ್ಮಣರು ಬಹುಸಂಖ್ಯಾತ ಶೂದ್ರ ಜನ ಸಮೂಹವನ್ನು ಆಳುವುದು, ನಿಯಂತ್ರಿಸುವುದು ಈ ರಾಜಕಾರಣದಿಂದಲೇ ಸಾಧ್ಯವಾಗುತ್ತಿರುವುದು.


ಜಗದೀಶ್ ಶೆಟ್ಟರ್

ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಲಿಂಗಾಯತ ಮತದಾರರೇ ಹೆಚ್ಚಾಗಿದ್ದು ಅಲ್ಲಿ ಬ್ರಾಹ್ಮಣ ಅಭ್ಯರ್ಥಿಯನ್ನು ಚುನಾವಣೆಯಲ್ಲಿ ನಿಲ್ಲಿಸಿದರೆ ಗೆಲುವು ಸಾಧ್ಯವಿಲ್ಲ ಎನ್ನಿಸಿದರೆ ಆಗೇನು ಮಾಡುತ್ತಾರೆ. ಖಂಡಿತವಾಗಿಯೂ ಲಿಂಗಾಯತರನ್ನೇ ಕಣಕ್ಕಿಳಿಸುತ್ತಾರೆ. ಲಿಂಗಾಯತರು ಎಂದರೆ ಯಾವ ಲಿಂಗಾಯತರು? ಏಕೆಂದರೆ, ಲಿಂಗಾಯತರಲ್ಲಿ ಹಲವಾರು ಒಳಪಂಗಡಗಳಿವೆ. ಬಿಜೆಪಿಯು ಅಲ್ಲಿಯೂ ತನ್ನ ಕುಹಕ ಬುದ್ಧಿಯನ್ನು ತೋರಿಸುತ್ತದೆ. ಅದು ಬಹುಸಂಖ್ಯಾತರಾಗಿರುವ ಪಂಚಮಸಾಲಿಗರನ್ನು ಆಯ್ಕೆ ಮಾಡುವುದಿಲ್ಲ, ಬ್ರಾಹ್ಮಣರಂತೆ ಅಲ್ಪಸಂಖ್ಯಾತರಾಗಿರುವ ಬಣಜಿಗ (ಶೆಟ್ಟರು) ಸಮುದಾಯದ ಅಭ್ಯರ್ಥಿಗಳನ್ನೇ ಆಯ್ಕೆ ಮಾಡುತ್ತದೆ. ಹಿಂದೂ ಹೆಸರಿನಲ್ಲಿ ಅಲ್ಪಸಂಖ್ಯಾತ ಬ್ರಾಹ್ಮಣರು ಇಡೀ ಸಮಾಜವನ್ನು ನಿಯಂತ್ರಿಸಿ ಶೋಷಿಸುವಂತೆ ಲಿಂಗಾಯತ ಹೆಸರಿನಲ್ಲಿ ಅಲ್ಪಸಂಖ್ಯಾತರಾಗಿರುವ ಬಣಜಿಗರು ಇಡೀ ಲಿಂಗಾಯತ ಸಮುದಾಯವನ್ನು ನಿಯಂತ್ರಿಸಿ ಶೋಷಿಸುವ ತಂತ್ರವಿದು. ಹಿಂದೂ ಸಮಾಜದ ಒಳಿತಿಗೇ ತಾವೆಲ್ಲ ದುಡಿಯುವುದು ಎಂದು ಬಾಹ್ಯವಾಗಿ ಬಿಂಬಿಸಿದರೂ ವಾಸ್ತವದಲ್ಲಿ ಅದು ಬ್ರಾಹ್ಮಣರ ಒಳಿತೇ ಆಗಿರುತ್ತದೆ. ಅಂತೆಯೇ, ಇಲ್ಲಿ ಲಿಂಗಾಯತ ಸಮುದಾಯದ ಅಭಿವೃದ್ಧಿ ಎಂದು ಬಿಂಬಿಸಿದರೂ ಅದು ವಾಸ್ತವದಲ್ಲಿ ಬಣಜಿಗರ ಅಭಿವೃದ್ಧಿ ಮಾತ್ರವೇ ಆಗಿರುತ್ತದೆ.


ಭೀಮಣ್ಣ ಖಂಡ್ರೆ

ಈ ಬ್ರಾಹ್ಮಣ-ಬಣಜಿಗ ರಾಜಕಾರಣವನ್ನು ಉದಾಹರಣೆಗಳ ಸಮೇತವಾಗಿ ವಿಶ್ಲೇಷಿಸಿದರೆ ಈ ಅಂಶ ಮತ್ತಷ್ಟು ಸ್ಪಷ್ಟವಾಗುತ್ತದೆ. ಕರ್ನಾಟಕದ ಒಟ್ಟು ಜನಸಂಖ್ಯೆಯ ಶೆ. 17ರಷ್ಟಿರುವ ಲಿಂಗಾಯತ ಸಮುದಾಯದಲ್ಲಿ ಒಟ್ಟು 36 ರಷ್ಟು ಒಳಪಂಗಡಗಳಿವೆ. ಉತ್ತರ ಕರ್ನಾಟಕದಲ್ಲಿ ನಾಲ್ಕೈದು ಪಂಗಡಗಳು ಮಾತ್ರವೆ ಸಿಗುತ್ತವೆ. ಅವುಗಳಲ್ಲಿ ಸಂಖ್ಯಾತ್ಮಕವಾಗಿ ಪ್ರಬಲವಾಗಿರುವವರೆಂದರೆ ಪಂಚಮಸಾಲಿಗಳು. ನಂತರದ ಸ್ಥಾನ ಗಾಣಿಗರದು, ಮೂರನೇ ಸ್ಥಾನ ಬಣಜಿಗರದ್ದು (ಶೆಟ್ಟರು), ನಾಲ್ಕನೇ ಸ್ಥಾನದಲ್ಲಿ ಜಂಗಮರು ಬರುತ್ತಾರೆ. ಆದರೆ, ಒಟ್ಟು ಲಿಂಗಾಯತರಲ್ಲಿ ಕೇವಲ ಶೇ. 3ರಷ್ಟಿರುವ ಬಣಜಿಗರೇ ಇಡೀ ಲಿಂಗಾಯತ ಸಮುದಾಯದ ನಾಯಕರೆಂಬಂತೆ ಬಿಂಬಿಸುತ್ತಾ ತಮ್ಮ ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡಿದ್ದಾರೆ.

ಇದನ್ನೆಲ್ಲಾ ಅಭ್ಯಸಿಸಿದ ನಂತರ ಬಿಜೆಪಿಯು ಮೊದಲು ಬಣಜಿಗ ಸಮುದಾಯವನ್ನು ಗೆದ್ದುಕೊಂಡರೆ ಇಡೀ ಲಿಂಗಾಯತ ಸಮುದಾಯವು ತನ್ನ ತೆಕ್ಕೆಗೆ ಬರುತ್ತದೆಂದು ಅಂದಾಜಿಸಿ ಕಾರ್ಯೋನ್ಮುಖವಾಯಿತು. ಇದಕ್ಕೆ ಮೊದಲು ಮಣೆ ಹಾಕಿದವನು ಜಗದೀಶ್ ಶೆಟ್ಟರ್ ಎಂಬ ಬಣಜಿಗ ಲಿಂಗಾಯತ. ಆನಂತರ ಬಾದಾಮಿಯ ಬಣಜಿಗ ಎಂ.ಕೆ ಪಟ್ಟಣಶೆಟ್ಟಿ ಯೊಂದಿಗೆ ಗಾಣಿಗ ಗದ್ದಿನಗೌಡ ಬಿಜೆಪಿಯನ್ನು ಪ್ರವೇಶ ಮಾಡಿದ್ದೇ ತಡ; ಉತ್ತರ ಕರ್ನಾಟಕದ ಲಿಂಗಾಯತರು ಬಿಜೆಪಿಯತ್ತ ವಾಲತೊಡಗಿದರು.


ಕಾಶಪ್ಪನವರ್


ಬಣಜಿಗ ಸಮುದಾಯದ ಮೇಲೆ ಬಿಜೆಪಿಗೆ ಕಂಟ್ರೋಲ್ ಸಿಕ್ಕಿದ್ದು ಇಡೀ ಲಿಂಗಾಯತ ಸಮುದಾಯದ ಮೇಲೆ ಕಂಟ್ರೋಲ್ ಸಿಕ್ಕಂತಾಗಿತ್ತು, ಅದನ್ನು ವ್ಯವಸ್ಥಿತವಾಗಿ ಉಳಿಸಿ, ಬೆಳೆಸಿಕೊಂಡು ಹೋಗುವುದಕ್ಕಾಗಿ ಬಣಜಿಗರಿಗೇ ಪ್ರಾಶಸ್ತ್ಯ ನೀಡುತ್ತಾ ಬರಲಾಯಿತು. ಬಿಜೆಪಿಯ ಲಿಂಗಾಯತ ಕೋಟಾದಡಿಯಲ್ಲಿ ಅತೀ ಹೆಚ್ಚು ಟಿಕೆಟ್ ಪಡೆದವರು ಬಣಜಿಗರೆ. ಇದರ ಹಿಂದೆ ಜಗದೀಶ್ ಶೆಟ್ಟರ್‌ನ ಕೃಪೆ ಎಷ್ಟಿದೆಯೋ ಅದಕ್ಕಿಂತ ಹೆಚ್ಚಾಗಿ ಬಿಜೆಪಿಯ ಬ್ರಾಹ್ಮಣ್ಯದ ತಂತ್ರವಿದೆ.

ಕರ್ನಾಟಕದಲ್ಲಿ ಬಣಜಿಗ ಸಮುದಾಯದ ಜನಸಂಖ್ಯೆಯಿರುವುದು ಕೇವಲ 3 ಲಕ್ಷವಾದರೂ ಬಿಜೆಪಿಯಲ್ಲಿ ಈ ಸಮುದಾಯಕ್ಕೆ ಸೇರಿದ 10 ಶಾಸಕರಿದ್ದಾರೆ. ಆದರೆ ರಾಜ್ಯದಲ್ಲಿ ಪಂಚಮಸಾಲಿಗಳ ಜನಸಂಖ್ಯೆ ಸುಮಾರು 78 ಲಕ್ಷ ಇದ್ದರೂ ಬಿಜೆಪಿಯಲ್ಲಿನ ಈ ಸಮುದಾಯದ ಶಾಸಕರ ಸಂಖ್ಯೆ ಕೇವಲ 8. ಸುಮಾರು 36 ಲಕ್ಷದಷ್ಟು ಗಾಣಿಗ ಸಮುದಾಯದ ಜನಸಂಖ್ಯೆಯಿದ್ದರೂ ಬಿಜೆಪಿಯಲ್ಲಿರುವ ಈ ಸಮುದಾಯದ ಶಾಸಕರ ಸಂಖ್ಯೆ ಕೇವಲ 2.

ಮಠಮಾನ್ಯಗಳ ಆದಾಯ ನಿಂತಿರುವುದೂ ಪ್ರಧಾನವಾಗಿ ಪಂಚಮಸಾಲಿ ಸಮುದಾಯದ ಮೇಲೆಯೇ. ಹಣ ಕೊಡೋದಕ್ಕೆ, ಪಲ್ಲಕ್ಕಿ ಹೊರೋದಕ್ಕೆ, ಚಾಕರಿ ಮಾಡುವುದಕ್ಕೆ ಪಂಚಮಸಾಲಿಗಳು ಬೇಕು. ಆದರೆ ಅಧಿಕಾರಕ್ಕೆ ಮಾತ್ರ ಅವರು ಬೇಡ, ಆದೇನಿದ್ದರೂ ನೀಟಾಗಿ ಟೋಪಿ, ಶಾಲು ಹಾಕಿಕೊಂಡು ಮಿಂಚುವ ಬಣಜಿಗರ ಕೆಲಸ ಎಂಬ ಧೋರಣೆಯನ್ನು ಬಿಜೆಪಿಯು ಯಶಸ್ವಿಯಾಗಿ ಮುಂದುವರೆಸಿಕೊಂಡು ಬರುತ್ತಿದೆ.

ಈ ಪಂಚಮಸಾಲಿಗಳಿಗೆ ಒಂದು ನಾಯಕತ್ವದ ಕೊರತೆಯಂತೂ ಇದ್ದೆ ಇದೆ. ಈ ಕೊರತೆಯೇ ವಾಸ್ತವದಲ್ಲಿ ಅವರನ್ನು ಅನ್ಯಾಯದ ವಿರುದ್ಧ ಮೌನಿಗಳನ್ನಾಗಿ ಮಾಡಿದೆ. ಬಹಳ ದಿನಗಳ ನಂತರ ಶಿವಶಂಕ್ರಪ್ಪ ಕಾಶಪ್ಪನವರ್ ಎಂಬ ದಿಟ್ಟ ಹುಂಬ ನಾಯಕನಾಗಿ ಅವತರಿಸಿದ ನಂತರವೇ ಪಂಚಮಸಾಲಿಗಳಿಗೆ ರಾಜಕೀಯವಾಗಿ ಒಂದಿಷ್ಟು ಚಾಲನೆ ಸಿಕ್ಕಿದ್ದು. ಈಗ ಅವರೂ ಮರಣ ಹೊಂದಿದ್ದಾರೆ. ಕಾಶಪ್ಪನವರ್ ಪಂಚಮಸಾಲಿಗಳಿಗೆ ಆಗುತ್ತಿರುವ ಅನ್ಯಾಯಗಳ ವಿರುದ್ಧ ಪಂಚಮಸಾಲಿಗಳ ರಾಜ್ಯ ಸಂಘಟನೆಯನ್ನು ಕಟ್ಟಿದ್ದರು.

ಇದಕ್ಕೆ ಕಾರಣ ಚಿಡ್ಡಿಗಳು ಎಲ್ಲಾ ಲಿಂಗಾಯತ ಒಳಪಂಗಡಗಳನ್ನೂ ಸೇರಿಸಿ ರಾಜ್ಯ ಮಟ್ಟದಲ್ಲಿ ಒಂದು ಐಕ್ಯ ಲಿಂಗಾಯತ ಸಂಘಟನೆಯನ್ನು ಕಟ್ಟುವ ತಯಾರಿ ನಡೆಸಿದ್ದು. ಯಥಾಪ್ರಕಾರ ಈ ಲಿಂಗಾಯತ ಮಹಾಸಭಾಕ್ಕೆ ಅಧ್ಯಕ್ಷರಿಂದ ಹಿಡಿದು ಜಿಲ್ಲಾ ಮಟ್ಟದ ನಾಯಕತ್ವದ ತನಕ ಎಲ್ಲಾ ಕಡೆಯೂ ಬಣಜಿಗ ಲಿಂಗಾಯತರನ್ನು ತುಂಬುವ ತಂತ್ರಗಾರಿಕೆ ನಡೆದಿತ್ತು. ವೀರಶೈವ ಮಹಾಸಭಾದ ಹಾಲಿ ಅಧ್ಯಕ್ಷ ಭೀಮಣ್ಣ ಖಂಡ್ರೆ, ಹುಬ್ಬಳ್ಳಿ ಧಾರವಾಡ ಲೋಕಸಭಾ ಸದಸ್ಯ ವಿಜಯ್ ಸಂಕೇಶ್ವರ್, ಜಗದೀಶ್ ಶೆಟ್ಟರ್ ಹೀಗೆ ಎಲ್ಲರೂ ಬಣಜಿಗರೇ ಆಗಿದ್ದರು.


ವಿಜಯ ಸಂಕೇಶ್ವರ್

ಪಂಚಮಸಾಲಿಗರು ಬಣಜಿಗರ ಹತ್ತಾರು ಪಟ್ಟು ಜಾಸ್ತಿಯಿದ್ದರೂ ಅವರನ್ನು ಕಡೆಗಣಿಸುವ ಪಿತೂರಿ ನಡೆದಿರುವುದು ಕಾಶಪ್ಪನವರ ಪಿತ್ತವನ್ನು ನೆತ್ತಿಗೇರಿಸಿತ್ತು. ಸಭೆಯಿಂದ ಹೊರಬಂದ ಕಾಶಪ್ಪನವರ್ ತಾನೇ ಪಂಚಮಸಾಲಿಗಳ ಅಧ್ಯಕ್ಷನೆಂದು ಘೋಷಿಸಿಕೊಂಡರು. "ಕಿತ್ತೂರು ಚೆನ್ನಮ್ಮಳ ಸಂಸ್ಥಾನವನ್ನು ಹಾಳುಗೆಡವಿದ ಮಲ್ಲಪ್ಪ ಶೆಟ್ಟಿ ಕುಲದಿಂದ (ಬಣಜಿಗ) ದೂರ ಉಳಿಯಿರಿ, ಅವರೊಂದಿಗೆ ನೆಂಟಸ್ತಿಕೆ ಬೆಳಸಬೇಡಿ" ಎಂದು ಹೇಳುತ್ತಾ ರಾಜ್ಯಾದ್ಯಂತ ಪಂಚಮಸಾಲಿಗಳನ್ನು ಸಂಘಟಿಸಲು ಓಡಾಡಿದರು. ಪ್ರತೀ ಊರಿನಲ್ಲಿ ರಾಣಿ ಚೆನ್ನಮ್ಮಳ ಮಹಿಳಾ ಬ್ಯಾಂಕ್ ಸ್ಥಾಪಿಸುವ ಕೆಲಸಕ್ಕೂ ಕೈ ಹಾಕಿದರು.




ಹೀಗೆ ಪಂಚಮಸಾಲಿಗಳನ್ನು ಸಂಘಟಿಸುತ್ತಲೇ ಕಾಶಪ್ಪನವರ್ ಮರಣ ಹೊಂದಿದರು. ತದನಂತರದಲ್ಲಿ ಬಂದ ಜಮಖಂಡಿಯ ಸಿದ್ದು ಸವದಿ, ಬೀಳಗಿಯ ಮುರುಗೇಶ್ ನಿರಾಣಿ, ಬಿಜಾಪುರದ ಬಸವನಗೌಡ ಪಾಟೀಲ್ ಯತ್ನಾಳ್ ಮುಂತಾದ ಪಂಚಮಸಾಲಿಗರು ಕಾಶಪ್ಪನವರ ಕೆಲಸವನ್ನು ಮುಂದುವರೆಸದೇ ಬಿಜೆಪಿಯ ಕಮಲದ ಕೆಳಗೆ ಕೆಸರು ಮೆತ್ತಿಕೊಂಡು ಕುಳಿತುಬಿಟ್ಟರು. ಇವರ ನಿರ್ಲಕ್ಷ್ಯತನದ ಪರಿಣಾಮವಾಗಿ ಬಿಜೆಪಿಯಲ್ಲಿ ಬಣಜಿಗರ ಪ್ರಾಬಲ್ಯ ಹೆಚ್ಚಾಗಿದೆ. ಬಾದಾಮಿಯ ಪಟ್ಟಣಶೆಟ್ಟಿ, ಬಿಜಾಪುರದ ಅಪ್ಪು ಪಟ್ಟಣಶೆಟ್ಟಿ, ಸಿಂದಗಿಯ ಅಶೋಕ ಶಾಬಾದಿ, ರಾಯದುರ್ಗದ ಮಹಾದೇವ ಯಾದವಾಡ, ಬೈಲಹೊಂಗಲದ ಮೆಟಗುಡ್ಡ, ಕಿತ್ತೂರಿನ ಸುರೇಶ್ ಮಾರಿಹಾಳ, ಹಾನಗಲ್‌ನ ಸಿ.ಎಂ. ಉದಾಸಿ, ಶಿಗ್ಗಾಂವ್‌ನ ರಾಜಶೇಖರ್ ಸಿಂಧೂರ, ಬಾಲ್ಕಿಯ ಪ್ರಕಾಶ್ ಖಂಡ್ರೆ, ಹುಬ್ಬಳ್ಳಿಯ ಜಗದೀಶ್ ಶೆಟ್ಟರ್, ಅರಭಾವಿಯ ವಿ.ಎಸ್. ಕೌಜಲಗಿ, ಬೆಳಗಾಂವ್‌ನ ಸುರೇಶ್ ಅಂಗಡಿ - ಹೀಗೆ ಬಣಜಿಗ ಸಮುದಾಯದಿಂದ ಶಾಸಕ, ಸಂಸದರಾದವರ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಕೊನೆಗೊಂದು ಪ್ರಶ್ನೆಯಂತೂ ಹಾಗೇ ಉಳಿದೇ ಇದೆ. ಇಷ್ಟೆಲ್ಲಾ ಅನ್ಯಾಯಗಳನ್ನು ಅನುಭವಿಸಿಯೂ ಪಂಚಮಸಾಲಿಗಳಾಗಲೀ, ಜಂಗಮರಾಗಲೀ, ಮಠಮಾನ್ಯಗಳಾಗಲೀ ಇನ್ನೂ ಏಕೆ ಎಚ್ಚೆತ್ತುಕೊಂಡಿಲ್ಲ ಎಂಬುದು.

- ಮೇಘರಾಜ್


ಮನೆಗೆ ಹೋಗಿದ್ದಾನೆ. ಆ ಮನೆಯನ್ನು ಅಕ್ರಮ್ ಪಾಶ ಎಂಬುವನು ನಾಸಿರ್‌ಗೆ ಭೋಗ್ಯ ಹಾಕಿಕೊಟ್ಟು ಕೇವಲ ಆರೆಂಟು ತಿಂಗಳಾಗಿತ್ತು, ನಂತರ ಮನಸ್ಸು ಬದಲಾಯಿಸಿದ ಅಕ್ರಮ ಮನೆ ಖಾಲಿ ಮಾಡುವಂತೆ ನಾಸಿರ್‌ಗೆ ಒತ್ತಾಯ ಮಾಡಲಾರಂಭಿಸಿದ. ನಾಸಿರ್ ಅದಕ್ಕೆ ಒಪ್ಪದೇ ಹೋದಾಗ ಡೀಲ್ ಅಫ್ತಾಬ್‌ಗೆ ಹೋಯಿತು. ಮೊದಲೇ ಈ ಅಫ್ತಾಬ್ ರೌಡಿ, ಈಗ ಕಾರ್ಪೊರೇಟರ್ ಕೂಡ ಆಗಿದ್ದನಲ್ಲ ಇನ್ನು ನನಗಿನ್ಯಾರು ಅಡ್ಡಿ ಎಂದುಕೊಂಡು ನಾಸಿರ್‌ಗೆ ಧಮಕಿ ಹಾಕಲು ಶುರು ಮಾಡಿದ. ನಾಸಿರ್ ಬಗ್ಗದೇ ಹೋದಾಗ ಡಿಸೆಂಬರ್ 1 ರಂದು ನಾಸಿರ್‌ನನ್ನು ಹುಡುಕಿಕೊಂಡು ಅವರ ಅಕ್ಕನ ಮನೆಗೇ ಹೋಗಿದ್ದಾನೆ. ಅಲ್ಲಿ ನಾಸಿರ್ ಇದ್ದ, ಹಿಂದೆಮುಂದೆ ಯೋಚಿಸದೆ ಅಫ್ತಾಬ್ ರಿವಾಲ್ವರ್ ತೆಗೆದು ನಾಸಿರ್‌ನತ್ತ ಫೈರ್ ಮಾಡಿದ್ದಾನೆ. ಆದರೆ ನಾಸಿರ್ ಓಡಿಹೋಗಿ ರೂಂ ಬಾಗಿಲು ಹಾಕಿಕೊಂಡು ಬಚಾವಾಗಿಬಿಟ್ಟ, ಈ ಅಫ್ತಾಬ್ ಎಂಥ ಹೀನ ಕ್ರಿಮಿ ಎಂದರೆ ಗುಂಡು ಹಾರಿಸುವಾಗ


ನಾಸೀರ್

ನಾಸಿರ್ ಅಕ್ಕನ ಮೊಮ್ಮಗಳು ಮೂರು ವರ್ಷದ ಫರಾ ಎಂಬ ಬಾಲಕಿ ಅಡ್ಡ ಇದ್ದಾಗಲೂ ಲೆಕ್ಕಿಸದೆ ಫೈರ್ ಮಾಡಿದ್ದಾನೆ. ಬುಲೆಟ್ ಆ ಮಗುವಿನ ತಲೆ ಮೇಲಿನಿಂದಲೇ ಸಿಡಿಯುತ್ತಾ ಬಾಗಿಲಿಗೆ ಹೋಗಿ ಬಡಿದಿದೆ. ಹೀಗೆ ತನ್ನ ಪರಾಕ್ರಮ ತೋರಿದ ಅಫ್ತಾಬ್‌ಗೆ ಆಮೇಲೆ ಪೊಲೀಸು-ಅರೆಸ್ಟುಗಳ ಭಯವಾಗಿ ಓಡಿಹೋಗಿದ್ದಾನೆ.

ಮೈಸೂರಿನಲ್ಲೀಗ ಲ್ಯಾಂಡ್ ಮಾಫಿಯಾ ಕ್ರಿಮಿಗಳ ಅಟ್ಟಹಾಸಕ್ಕೆ ಲಂಗುಲಗಾಮೇ ಇಲ್ಲದಾಗಿದೆ. ಕಂಡವರ ಆಸ್ತಿಯನ್ನು ಬೆದರಿಸಿ ಕಿತ್ತುಕೊಳ್ಳುವುದು, ಅಮಾಯಕರ ಸೈಟ್‌ಗಳಿಗೆ ಬೇಲಿ ಹಾಕಿಕೊಂಡು ಹಿಂಸೆ ನೀಡಿ ಕಾಸು ಕೀಳುವುದೆಲ್ಲಾ ನಿರಂತರವಾಗಿ ನಡೆಯುತ್ತಿದೆ. ಪೊಲೀಸರು ಈಗಲಾದರೂ ಎಚ್ಚೆತ್ತುಕೊಂಡು ಈ ಲ್ಯಾಂಡ್ ಮಾಫಿಯಾವನ್ನು ಸದೆಬಡಿಯದಿದ್ದರೆ ಇನ್ನಷ್ಟು ರಕ್ತಪಾತ ನಡೆಯುವುದು ಖಚಿತ.

ಈ ಅಫ್ತಾಬ್ ಇಷ್ಟು ಬೆಳೆಯಲು ಶಾಸಕ ತನ್ವೀರ್ ಸೇಠ್ ಕೂಡಾ ಜವಾಬ್ದಾರರೇ. 53 ನೇ ವಾರ್ಡ್‌ನಿಂದ ಸ್ಪರ್ಧಿಸಲು ಅಫ್ತಾಬ್‌ಗೆ ಕಾಂಗ್ರೆಸ್ ಟಿಕೆಟ್ ಕೊಟ್ಟು ಬೆಂಬಲಿಸಿದ್ದೇ ತನ್ವೀರ್ ಸೇಠ್. ಎಲೆಕ್ಷನ್ ಘೋಷಣೆಯಾದಾಗ ಚೀನಾ ಟೂರ್ ಹೋಗಿದ್ದ ತನ್ವೀರ್ ಮೈಸೂರಿಗೆ ವಾಪಸ್ ಬಂದ ದಿನ ಅವರ ಸ್ವಾಗತಕ್ಕೆ ಬಂದಿದ್ದವರಲ್ಲಿ ಬಹುತೇಕರು ರೌಡಿಗಳೇ ಆಗಿದ್ದರು. ಪಾಲಿಕೆ ಎಲೆಕ್ಷನ್ ಟಿಕೆಟ್‌ಗಾಗಿ ಅವತ್ತೇ ಎರಡು ರೌಡಿ ಗ್ಯಾಂಗ್ ನಡುವೆ ಮಾರಾಮಾರಿಯೂ ಆಗಿತ್ತು. ಮಚ್ಚು-ಲಾಂಗ್‌ಗಳು ಹೊರಬಂದಿದ್ದವು. ಅವತ್ತಿನ ಟೆನ್ಷನ್ ಎಷ್ಟಿತ್ತೆಂದರೆ ಸ್ವತಃ ತನ್ವೀರ್ ಪೊಲೀಸ್ ರಕ್ಷಣೆಯಲ್ಲಿ ಪಾರಾಗಿ ಮನೆ ಸೇರಿಕೊಂಡಿದ್ದರು. ಅವತ್ತು ನಡೆದ ರೌಡಿಗಳ ಟಿಕೆಟ್ ಕಾಳಗದಲ್ಲಿ ಈ ಅಫ್ತಾಬ್‌ನೂ ಇದ್ದ. ಇವನ ಚರಿತ್ರೆ ತಿಳಿದೂ ಗೆಲ್ಲಿಸಿದ ಜನ ಮುಠ್ಠಾಳರೆಂಬುದು ನಿಜ. ಆದರೆ ಪೊಲೀಸರು ಇಷ್ಟು ದಿನ ಅಫ್ತಾಬ್‌ನ ಅರ್ಭಟ ನೋಡಿಕೊಂಡು ಸುಮ್ಮನಿದ್ದುದು ಏಕೆ?


ಶಾಸಕ ತನ್ವೀರ್ ಸೇಠ್


ಇನ್ಸ್‌ಪೆಕ್ಟರ್ ಧನರಾಜ್ ಈಗ ಅಫ್ತಾಬ್‌ನ ಹಿಂದೆ ಬಿದ್ದಿದ್ದಾರೆ. ಅವರು ಅಫ್ತಾಬ್‌ನನ್ನು ಹಿಡಿದು ಜೊತೆಗೆ ಅವನ ಕೈಗೆ ರಿವಾಲ್ವರ್ ಹೇಗೆ ಸಿಕ್ಕಿತು ಎಂಬುದನ್ನು ಶೋಧಿಸಬೇಕಿದೆ. ಈತನಿಗೆ ಬೆಂಗಳೂರಿನ ಅನೇಕ ಮುಸ್ಲಿಂ ರೌಡಿಗಳ ಕಾಂಟ್ಯಾಕ್ಟುಗಳಿವೆ. ಕೋಳಿ ಫಯಾಜ್, ಸರ್ದಾರ್, ಅಕ್ರಂ, ಇಕ್ಬಾಲ್, ಫರೂಕ್, ಜಂಪೀರ್ ಮುಂತಾದ ಬೆಂಗಳೂರಿನ ರೌಡಿಗಳು ಮೊದಲೆಲ್ಲಾ ಪೈಲ್ವಾನರಾಗಿದ್ದು ಕುಸ್ತಿ ಸ್ಪರ್ಧೆಗೆಂದು ಮೈಸೂರಿಗೆ ಬಂದು ಹೋಗಿ ಮಾಡುತ್ತಿದ್ದವರು. ಆಗ ಇವರಿಗೆ ಹಾರ ಹಾಕಿ ಜೈಕಾರ ಹಾಕುವ ಗುಂಪಿನಲ್ಲಿ ಅಫ್ತಾಬ್‌ನೂ ಇರುತ್ತಿದ್ದ. ಆಮೇಲೆ ಈ ಪೈಲ್ವಾನರೆಲ್ಲಾ ರೌಡಿಗಳಾದಾಗ ಅಫ್ತಾಬ್‌ನೂ ಮೈಸೂರಿನಲ್ಲಿ ಅದೇ ಕಾಯಕ ಶುರು ಮಾಡಿದ್ದ. ಈಗ ಅಫ್ತಾಬ್ ಬಹುತೇಕ ಕೋಳಿ ಫಯಾಜ್‌ನ ಮಗ ಪಪ್ಪು ಗ್ಯಾಂಗ್‌ನವರ ಮೂಲಕ ಬೆಂಗಳೂರಲ್ಲೇ ಎಲ್ಲೋ ಒಂದು ಕಡೆ ಮುಚ್ಚಿಟ್ಟುಕೊಂಡಿದ್ದಾನೆ.

ಕೊನೆಗೂ ಮೈಸೂರಿನ ಅಂಡರ್‌ವರ್ಲ್ಡ್‌ನಲ್ಲಿ ಗನ್ ಕಾಣಿಸಿಕೊಂಡಿದೆ. ಪೊಲೀಸರೇ ಎಚ್ಚರ!

ಒಬ್ಬರ ಕಾಲನ್ನು ಮತ್ತೊಬ್ಬರು ಎಳೆಯುವುದಕ್ಕೂ, ಈ ಬಿಜೆಪಿ ಸಮಾವೇಶದಲ್ಲಿ ಒಬ್ಬನ ಚೆಡ್ಡಿಯನ್ನು
ಇನ್ನೊಬ್ಬ ಎಳೆಯುತ್ತಿರುವ ರೀತಿಗೂ ಯಾವುದೇ ವ್ಯತ್ಯಾಸ ಕಾಣಲಿಲ್ಲ.
ಯಡ್ಡಿ-ಸದಾನಂದಗೌಡರ ಯಾತ್ರೆಯಲ್ಲಿ ಅಪ್ಪಿತಪ್ಪಿಯೂ ಸುಳಿಯದ ಈಶ್ವರಪ್ಪ, ಶೆಟ್ಟರ್,
ಶಂಕರಮೂರ್ತಿಗಳ ಸಿಟ್ಟು, ಶತಗತಾಯ ಬಿಜೆಪಿ ಅಧ್ಯಕ್ಷಗಾದಿಯಿಂದ ಸದಾನಂದಗೌಡರನ್ನು ಇಳಿಸುವ
ಅನಂತ್‌ಕುಮಾರ್ ಪಟ್ಟು, ಆ ಜಾಗಕ್ಕೆ ಗಣಿ ರೆಡ್ಡಿಯನ್ನು ತರಬೇಕೆಂಬ ಯಡ್ಡಿ ವಿರೋಧಿಗಳ
ಮಸಲತ್ತು ಮತ್ತು ಬರಲಿರುವ ಚುನಾವಣೆಯಲ್ಲಿ ಯಡ್ಡಿಯನ್ನು ಬದಿಗೊತ್ತಿ
ಅನಂತ್‌ಕುಮಾರ್‌ರನ್ನು ಮರೆಸಬೇಕೆಂಬ ಹುನ್ನಾರ ಆರೆಸ್ಸೆಸ್‌ಗೆ.

ಯಡ್ಡಿಯ ವಿರುದ್ಧ ಚೆಡ್ಡಿಗಳ ದಂಗೆ





ರಾ. ಸೋಮನಾಥ್

ಪಕ್ಷ ಕಟ್ಟೋದಕ್ಕೆ ಯಾರ ಅನುಮತಿ ಅಥವಾ ಅಪ್ಪಣೆ ಏಕೆ ಬೇಕು? ನಾನೇನಾದ್ರೂ ತಪ್ಪು ಮಾಡಿದ್ರೆ ನಾಲ್ಕು ಗೋಡೆ ಮಧ್ಯೆ ಬೇಕಾದ್ರೆ ಕೆನ್ನೆಗೆ ಹೊಡೆದು ಬುದ್ಧಿ ಹೇಳಿ. ಅದನ್ನ ಬಿಟ್ಟು ಬೀದಿರಂಪ ಮಾಡೋದಲ್ಲ. ಯಾರು ಬರಲಿ ಬಿಡಲಿ, ನಾನು ಮತ್ತು ಸದಾನಂದ ಗೌಡರು ಮಾತ್ರ ಬೀದಿಬೀದಿ ಸುತ್ತಿಕೊಂಡೇ ಇರ್ತೇವೆ. ಇನ್ನೂರಿಪ್ಪತ್ನಾಲ್ಕು ಕ್ಷೇತ್ರಗಳನ್ನ ಸುತ್ತು ಹೊಡೀತೇವೆ. ಚುನಾವಣೆ ಮುಗಿಯೋತನಕ ಖಂಡಿತಾ ಮನೆ ಸೇರೋಲ್ಲ....!

ಇದು ಡಿಸೆಂಬರ್ ಒಂದರಂದು ಬೆಂಗಳೂರಿನಲ್ಲಿ ನಡೆದ ಬಿಜೆಪಿಯ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಮುನ್ಸಿಪಾಲ್ಟಿ ಪ್ರತಿನಿಧಿಗಳ ಸಮಾವೇಶದಲ್ಲಿ ಮಾಜಿ ಮುಖ್ಯಮಂತ್ರಿ 'ಹೆದ್ದ'ಯೂರಪ್ಪನವರು ಬುಸುಗುಟ್ಟಿದ ರೀತಿಗೆ ಒಂದು ಸ್ಯಾಂಪಲ್ ಮಾತ್ರ. ಪಕ್ಕದಲ್ಲೇ ಆಸೀನರಾಗಿದ್ದ ಕೆ.ಎಸ್. ಈಶ್ವರಪ್ಪ ಜಗದೀಶ್ ಶೆಟ್ಟರ್ ಮತ್ತು ಡಿ.ಎಚ್. ಶಂಕರಮೂರ್ತಿ ತ್ರಿಮೂರ್ತಿಗಳು ಕಣ್ಣೊಳಗೇ ಅದೇನೋ ಸನ್ನೆ ಮಾಡಿಕೊಳ್ಳುತ್ತಿದ್ದರು. ಕಟ್ಟಾ, ರಾಮಚಂದ್ರಗೌಡರಂಥ ಯಡ್ಡಿ ನಿಷ್ಠರು ಆಗಾಗ ಬೆವರೊರೆಸಿಕೊಳ್ಳುತ್ತಿದ್ದದ್ದು, ಕಪಟನಾಟಕ ಸೂತ್ರಧಾರಿಯಂತೆ ರಾಷ್ಟ್ರನಾಯಕ ಅನಂತ್‌ಕುಮಾರ್ ಮುಗುಮ್ಮಾಗಿ ಕುಳಿತದ್ದು, ಸಾಕ್ಷಾತ್ ಜಯಲಲಿತಾಳಂತೆ ವಿಜೃಂಭಿಸುತ್ತಿದ್ದ ಶೋಭಾ ಕರಂದ್ಲಾಜೆಯನ್ನು ಕಂಡರೂ ವಿಷ್ ಮಾಡದ ಮಹಿಳಾ ನಾಯಕಿ ವಿಮಲಾಗೌಡ, ಯಾರೊಡನೆ ಹೆಚ್ಚು ಬೆರೆತರೆ ಇನ್ನಾರು ಕೋಪಿಸಿಕೊಂಡಾರೋ ಎಂದು ಅಳುಕುತ್ತಿದ್ದ ಆರ್. ಅಶೋಕ್ ಮತ್ತು ಕುದಿಯುತ್ತಿದ್ದ ಅತೃಪ್ತಿಯನ್ನು ಅದುಮಿಡುವುದಕ್ಕೇ ಹೆಣಗಾಡುತ್ತಿದ್ದ ಸದಾನಂದಗೌಡ-

ಒಬ್ಬರ ಕಾಲನ್ನು ಮತ್ತೊಬ್ಬರು ಎಳೆಯುವುದಕ್ಕೂ, ಈ ಬಿಜೆಪಿ ಸಮಾವೇಶದಲ್ಲಿ ಒಬ್ಬನ ಚೆಡ್ಡಿಯನ್ನು ಇನ್ನೊಬ್ಬ ಎಳೆಯುತ್ತಿರುವ ರೀತಿಗೂ ಯಾವುದೇ ವ್ಯತ್ಯಾಸ ಕಾಣಲಿಲ್ಲ. ಯಡ್ಡಿ-ಸದಾನಂದಗೌಡರ ಯಾತ್ರೆಯಲ್ಲಿ ಅಪ್ಪಿತಪ್ಪಿಯೂ ಸುಳಿಯದ ಈಶ್ವರಪ್ಪ, ಶೆಟ್ಟರ್, ಶಂಕರಮೂರ್ತಿಗಳ ಸಿಟ್ಟು, ಶತಗತಾಯ ಬಿಜೆಪಿ ಅಧ್ಯಕ್ಷಗಾದಿಯಿಂದ ಸದಾನಂದಗೌಡರನ್ನು ಇಳಿಸುವ ಅನಂತ್‌ಕುಮಾರ್ ಪಟ್ಟು, ಆ ಜಾಗಕ್ಕೆ ಗಣಿ ರೆಡ್ಡಿಯನ್ನು ತರಬೇಕೆಂಬ ಯಡ್ಡಿ ವಿರೋಧಿಗಳ ಮಸಲತ್ತು ಮತ್ತು ಬರಲಿರುವ ಚುನಾವಣೆಯಲ್ಲಿ ಯಡ್ಡಿಯನ್ನು ಬದಿಗೊತ್ತಿ ಅನಂತ್‌ಕುಮಾರ್‌ರನ್ನು ಮರೆಸಬೇಕೆಂಬ ಆರೆಸ್ಸೆಸ್ ಕಸರತ್ತು.

ಒಂದಂತೂ ಸತ್ಯ. ಜೆಡಿಎಸ್ ಒಡೆದ ಮಡಿಕೆಯಾದರೆ ಬಿಜೆಪಿ ಮಾತ್ರ ಇನ್ನೂ ಸಿಡಿಯದ ಪಟಾಕಿ!

ಅಲ್ಪಕಾಲದ ಅಧಿಕಾರವೆಂಬುದು ಬಿಜೆಪಿಯನ್ನು ಇಬ್ಭಾಗ ಮಾಡಿ ಹಾಕಿದೆ. ಸದ್ಯ ಉತ್ತರ ಕರ್ನಾಟಕದ ಲಿಂಗಾಯತ ಶಾಸಕರು ಮತ್ತು ಕಟ್ಟಾ, ರಾಮಚಂದ್ರಗೌಡ, ಸುರೇಶ್‌ಕುಮಾರ್ ಥರದವರ ಹೊರತಾಗಿ ಮಿಕ್ಕೆಲ್ಲರೂ ರಾಷ್ಟ್ರನಾಯಕ ಅನಂತ್‌ಕುಮಾರ್ ಬೆನ್ನಿಗೆ ನಿಂತಿದ್ದು ಕಂಡರೆ ಅದಕ್ಕೆ ಮೂಲಕಾರಣ ಬಿಜೆಪಿ ರಾಜ್ಯಾಧ್ಯಕ್ಷ ಡಿ.ವಿ. ಸದಾನಂದಗೌಡ.

ಅನಂತ್‌ಕುಮಾರ್ ಬಣಕ್ಕೆ ಅರ್ಜೆಂಟಾಗಿ ಸದಾನಂದಗೌಡರನ್ನು ರಾಜ್ಯ ಬಿಜೆಪಿ ಅಧ್ಯಕ್ಷಗಾದಿಯಿಂದ ಇಳಿಸಬೇಕಿದೆ. ಆ ಜಾಗಕ್ಕೆ ಬಳ್ಳಾರಿಯ ಗಣಿ ರೆಡ್ಡಿಯೇ ಸೂಕ್ತ ವ್ಯಕ್ತಿ. ದೇವೇಗೌಡರ ಮತ್ತವರ ಮಕ್ಕಳನ್ನು ತುಳಿಯುವ ತಾಕತ್ತು ಆತನಿಗಲ್ಲದೆ ಮತ್ತಾರಿಗಿದೆ? ಖರ್ಚಿಗೆ ದುಡ್ಡು ಕೊಡುತ್ತಾನೆ, ಬಡಿದಾಟಕ್ಕೆ ಶ್ರೀರಾಮುಲು ಥರದ ರೌಡಿ ಹಿಂಡನ್ನೇ ಸಾಕಿಕೊಂಡಿದ್ದಾನೆ. ಈಗಾಗಲೇ ಬಳ್ಳಾರಿ, ಕೊಪ್ಪಳ, ಗದಗ ಮತ್ತು ಬಾಗಲಕೋಟೆಯಂಥ ನಾಲ್ಕು ಜಿಲ್ಲೆಗಳಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್‌ಗಳಿಗೆ ಕಾರ್ಯಕರ್ತರೇ ಸಿಗದಂತೆ ಮಾಡಿಬಿಟ್ಟಿದ್ದಾನೆ. ಇಂಥವನನ್ನು ರಾಜ್ಯ ಬಿಜೆಪಿ ಅಧ್ಯಕ್ಷನನ್ನಾಗಿ ಮಾಡದೇ ಯಡ್ಡಿ ಹೇಳಿದ್ದಕ್ಕೆಲ್ಲ ತಲೆ ಅಲ್ಲಾಡಿಸುವ 'ಕೋಲೆ ಬಸವ' ಸದಾನಂದ ಗೌಡರನ್ನು ಇಟ್ಟು ಏನು ಪ್ರಯೋಜನ? ಬಿಜೆಪಿಗೆ ಯಾರು ಓಟು ಕೊಡ್ತಾರೆ?





ಇದು ಅನಂತ್ ಬಣ ಬಿಜೆಪಿ ಹೈಕಮಾಂಡಿಗೆ ಹಾಕುತ್ತಿರುವ ಪ್ರಮುಖ ಸವಾಲಷ್ಟೇ ಅಲ್ಲ, ವಾರದ ಹಿಂದಷ್ಟೇ ಈಶ್ವರಪ್ಪ, ಶೆಟ್ಟರ್, ಶಂಕರಮೂರ್ತಿ ತ್ರಿಮೂರ್ತಿಗಳು ರಾಷ್ಟ್ರಾಧ್ಯಕ್ಷ ರಾಜನಾಥ್‌ಸಿಂಗ್ ಮತ್ತು ಅಡ್ವಾಣಿಯವರನ್ನು ಕಂಡು ಮಾಡಿರುವ ಮುಖ್ಯ ಒತ್ತಾಯ.

ನಿಜಕ್ಕೂ ಗಣಿ ರೆಡ್ಡಿಯನ್ನು ರಾಜ್ಯ ಬಿಜೆಪಿ ಅಧ್ಯಕ್ಷನನ್ನಾಗಿ ಮಾಡುವುದಕ್ಕಾದರೂ ಅನಂತ್‌ಕುಮಾರ್ ಗ್ಯಾಂಗ್ ಪ್ರಾಮಾಣಿಕವಾಗಿದ್ದರೆ ಯಡ್ಡಿಗಾಗಲಿ ಕಟ್ಟಾ-ಕರಂದ್ಲಾಜೆಗಳಿಗಾಗಲಿ ಈ ಬಗ್ಗೆ ತಲೆ ಕೆಡುತ್ತಿರಲಿಲ್ಲ.

ಆದರೆ ಅನಂತ್ ಹುನ್ನಾರವೇ ಬೇರೆ. ಸದಾನಂದ ಗೌಡರ ವಿರುದ್ಧ ಮೇಲುನೋಟಕ್ಕೆ ಗಣಿ ರೆಡ್ಡಿಯನ್ನು ಎತ್ತಿಕಟ್ಟುವುದು. ನಂತರ ತಾನೇ ರಾಜ್ಯ ಬಿಜೆಪಿ ಅಧ್ಯಕ್ಷನಾಗುವುದು.

ಯಡ್ಡಿ ಉಪಮುಖ್ಯಮಂತ್ರಿಯಾಗಿದ್ದಷ್ಟೂ ಕಾಲ ಅವರ ನೆರಳಿನಂತೆ ತಲೆ ಕಾಯ್ದದ್ದು ಸದಾನಂದಗೌಡ. ಅದಕ್ಕೆ ತಕ್ಕಂತೆ ಲಿಂಗವಂತ ಮೈ.ಚ. ಜಯದೇವರು ಆರೆಸ್ಸೆಸ್‌ನ ದಕ್ಷಿಣ ಭಾರತ ಕ್ಷೇತ್ರೀಯ ಕಾರ್ಯವಾಹರಾಗಿದ್ದರು. ಆತನಕ ಇಡೀ ರಾಜ್ಯ ಬಿಜೆಪಿ ಯಡ್ಡಿ-ಕರಂದ್ಲಾಜೆ ಹಿಡಿತದಲ್ಲೇ ಇತ್ತು. ಸಚಿವ ಸಂಪುಟದಲ್ಲೂ ಆರ್. ಅಶೋಕ್ ಮತ್ತು ಬಳ್ಳಾರಿಯ

ಅವಳಿ ನಗರಗಳಲ್ಲೂ ಗರಿಗೆದರಿದ ಬಿಜೆಪಿ ಭಿನ್ನಮತ

ಅವಳಿ ನಗರಗಳಲ್ಲಿ ಯಡ್ಡಿ ಗುಂಪಿನೊಂದಿಗೆ ಕಾಲು ಕೆದರಿ ಜಗಳ ತೆಗೆಯಲು ಅನಂತೂ ಬಣ ತಯಾರಿ ನಡೆಸಿದೆ. ಅನಂತೂ ಬಣದ ಕೆ.ಎಸ್. ಈಶ್ವರಪ್ಪ, ಜಗದೀಶ್ ಶೆಟ್ಟರ್ ಹಾಗೂ ಡಿ.ಎಚ್. ಶಂಕರಮೂರ್ತಿ ದಿಢೀರನೇ ದಿಲ್ಲಿಗೆ ಹಾರಿ ಯಡ್ಡಿ ವಿರುದ್ಧ ಕಿವಿ ಕಡಿಯಲು ಪ್ರಯತ್ನಿಸಿದ ಬೆನ್ನಲ್ಲೇ ಅವಳಿ ನಗರಗಳಲ್ಲಿ ಮಾಜಿ ಸಿ.ಎಂನ ಬೆಂಬಲಿಗರಾದ ಅಶೋಕ ಕಾಟವೆ, ಚಂದ್ರಕಾಂತ್ ಬೆಲ್ಲದ್, ಶಿರಿಯಣ್ಣನವರ್, ರಾಜೇಂದ್ರ ಗೋಖಲೆ, ಸಿ.ಎಂ. ನಿಂಬಣ್ಣನವರ್ ವಿರುದ್ಧ ಮೊನ್ನೆ ನವೆಂಬರ್ 27ರಂದು ರಾಯಾಪುರ ಗೆಸ್ಟ್‌ಹೌಸ್‌ನಲ್ಲಿ ಅನಂತೂ ಬಣ ಗುಪ್ತ ಸಭೆಯೊಂದನ್ನು ನಡೆಸಿದೆ. ಇದರಲ್ಲಿ ಅನಂತು ಗುಂಪಿನ ದತ್ತು ಡೋರ್ಲೆ, ಲಿಂಗರಾಜ ಪಾಟೀಲ್, ಮಹೇಶ್ ಟೆಂಗಿನಕಾಯಿ, ವಿಜಯಾನಂದ ಶೆಟ್ಟಿ, ನಾಗೇಶ್ ಕಲಬುರ್ಗಿ, ವೀರೇಶ್ ಅಂಚಟಗೇರಿ, ಶಿವಣ್ಣ ಹಳ್ಯಾಳ, ನಾರಾಯಣ ಜರತಾರಘರ್ ರಂಗಾಬುದ್ದಿ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಜನ ಭಾಗವಹಿಸಿದ್ದಾರೆ.

ಕೆಲ ದಿನಗಳ ಹಿಂದೆ ಬಿಜೆಪಿಯ ಜಿಲ್ಲಾಧ್ಯಕ್ಷ ದತ್ತಾ ಡೋರ್ಲೆ ಮೇಲೆ ಹಲ್ಲೆಯಾದಾಗ ಸತ್ಯಾಂಶ ಗೊತ್ತಿದ್ದರೂ ಅದಕ್ಕೆ ಕಾರಣನಾದ ಅಶೋಕ ಕಾಟವೆ ಮೇಲೆ ಯಡ್ಡಿ ಕ್ರಮ ಕೈಗೊಂಡಿರಲಿಲ್ಲ. ಈಗ ಇದನ್ನೇ ಯಡ್ಡಿ ವಿರುದ್ಧ ಕತ್ತಿ ಮಸೆಯುವುದಕ್ಕೆ ಬಳಸಿಕೊಳ್ಳಲಾಗುತ್ತಿದೆ. ಸ್ಥಳೀಯ ಚುನಾವಣೆಯಲ್ಲಿ ಜಯಗಳಿಸಿದವರ ಸಮಾವೇಶ ಬೆಂಗಳೂರಿನಲ್ಲಿ ನಡೆದಿದ್ದು ಅದಕ್ಕೆ ಅನಂತೂ ಕಡೆಯ ಚುನಾಯಿತರು ಗೈರುಹಾಜರಾಗಿದ್ದರು.

ಈ ಹಿಂದೆ ಬಿಜೆಪಿಯೊಳಗಿನ ಭಿನ್ನಮತದಿಂದಾಗಿಯೇ ಅವಳಿ ನಗರದಲ್ಲಿ ಧರ್ಮಯಾತ್ರೆ ರದ್ದಾಗಿತ್ತು. ಮುಂಬರಲಿರುವ ಮೇಯರ್ ಚುನಾವಣೆಯಲ್ಲಿ ಈ ಭಿನ್ನಮತ ಭಾರಿ ಪರಿಣಾಮ ಬೀರಲಿದೆ. ಹಾಗೇ ನೋಡಿದರೆ ಅವಳಿ ನಗರದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಯಡ್ಡಿಗೇ ಜಾಸ್ತಿ ಮನ್ನಣೆ ಸಿಕ್ಕಿದೆ. ಧಾರವಾಡದಲ್ಲಿ ಗೆದ್ದ 12 ಜನ ಹಾಗೂ ಹುಬ್ಬಳ್ಳಿಯಲ್ಲಿ ಗೆದ್ದ 7 ಜನರು ಯಡ್ಡಿ ಕಡೆಯವರಾಗಿದ್ದರೆ ಅನಂತು ಗುಂಪಿಗೆ ಸಿಕ್ಕಿದ್ದು ಒಟ್ಟು 11 ಸೀಟು ಮಾತ್ರ.

ತಮ್ಮ ಬುಡವೇ ಗಟ್ಟಿಯಿಲ್ಲದಿದ್ದರೂ ಬಿಜೆಪಿಗೆ ಅನ್ನ ನೀರು ಕೊಟ್ಟು ಬೆಳೆಸುತ್ತಿರುವ ಪಟ್ಟೇಗಾರ ಸಮಾಜವನ್ನೇ ಒಡೆಯಲು ಅನಂತು ಬಣ ಪ್ರಯತ್ನಿಸುತ್ತಿರುವುದು ಚಂದ್ರಕಾಂತ ಬೆಲ್ಲದ್ ಮತ್ತು ಅಶೋಕ್ ಕಾಟವೆ ಅವರನ್ನು ಕೆರಳಿಸಿದೆ. ಹುಬ್ಬಳ್ಳಿಯ ಲಿಂಗಾಯತರಿಗೆ ಸಿಟ್ಟು ತರಿಸಿದೆ.

ಇನ್ನೊಂದೆಡೆಗೆ ವಿಜಯ್ ಸಂಕೇಶ್ವರ್‌ಗೆ ಹುಬ್ಬಳ್ಳಿ ಶಹರ ಕ್ಷೇತ್ರವನ್ನು ಬಿಟ್ಟುಕೊಟ್ಟು, ಎಂಪಿ ಕ್ಷೇತ್ರವನ್ನು ಪ್ರಹ್ಲಾದ ಜೋಶಿ ಉಳಿಸಿಕೊಳ್ಳುವುದು, ಈ ಮೂಲಕ ತನ್ನ ಹಿಂಬಾಲಕ ಪಡೆಯನ್ನು ವಿಸ್ತರಿಸಿಕೊಳ್ಳುವುದು ಅನಂತೂ ಬಣದ ಪ್ಲಾನ್. ಯಡ್ಡಿಯ ಭಂಟನಾದ ಅಶೋಕ ಕಾಟವೆಗೆ ಟಿಕೆಟ್ ತಪ್ಪಿಸುವುದಕ್ಕಾಗಿ ದತ್ತಾ ಡೋರ್ಲೆ ಮೇಲೆ ಹಲ್ಲೆಯ ನಾಟಕ ಮಾಡಿಸಿದ್ದೇ ಅನಂತಕುಮಾರ್.

ಅನಂತಕುಮಾರ್ ಬಣ ನಡೆಸಿದ ಗುಪ್ತ ಸಭೆಗೆ ಪರ್ಯಾಯವಾಗಿ ಚಂದ್ರಕಾಂತ ಬೆಲ್ಲದ ಮತ್ತು ಅಶೋಕ ಕಾಟವೆ ನೇತೃತ್ವದಲ್ಲಿ ಯಡ್ಡಿ ಬಣವೂ ಕೂಡ ಒಂದು ಗುಪ್ತಸಭೆಯನ್ನು ನಡೆಸಿದೆ. ಇದರಲ್ಲಿ ರಾಜೇಂದ್ರ ಗೋಖಲೆ, ಶಿರಿಯಣ್ಣನವರ್, ನಿಂಬಣ್ಣನವರ್, ಹಾಲಿ ಕಾರ್ಪೋರೇಟರ್ ಡಿ.ಕೆ. ಚವ್ಹಾಣ್, ವೆಂಕಟೇಶ್ ಮೇಸ್ತ್ರಿ ವಿ.ಎಂ. ಪವಾರ್ ಮುಂತಾದವರು ಪಾಲ್ಗೊಂಡಿದ್ದರು.

ಬಿಜೆಪಿಯೊಳಗಿನ ಭಿನ್ನಮತ ಬೀದಿ ಜಗಳವಾಗುವ ದಿನ ಹತ್ತಿರವಾಗುತ್ತಿರುವುದರ ಮುನ್ಸೂಚನೆಯಿದು.

ಇದು ಸ್ಟ್ರೀಟ್ ಫೈಟಿಂಗ್ ಮುನ್ಸೂಚನೆಯೆ?





ಯಡ್ಡಿ-ಈಶ್ವರಪ್ಪರ ಸ್ಟ್ರೀಟ್ ಫೈಟಿಂಗ್‌ಗೆ ಡಿಸೆಂಬರ್ 1ರ ಬಿಜೆಪಿ ಚುನಾಯಿತ ಪ್ರತಿನಿಧಿಗಳ ಸಭೆಗಿಂತಲೂ ಮತ್ತೊಂದು ಉದಾಹರಣೆಯೇ ಬೇಕಿರಲಿಲ್ಲ. ಅನಂತ್ ಶಿಷ್ಯರ ವಿರುದ್ಧ ಕೆಂಡಾಮಂಡಲರಾಗಿದ್ದ ಯಡ್ಡಿ ಪತ್ರಕರ್ತರಿದ್ದಾರೆ ಎಂಬುದನ್ನೇ ಮರೆತು 'ಯಾರೇನೇ ಹೇಳ್ಲಿ ನಮ್ಮ ಬಿಜೆಪಿಯ ಶಾಸಕರೆಲ್ಲ ಅದ್ಭುತವಾಗಿ ಕೆಲಸ ಮಾಡಿದ್ದಾರೆ. ಯಾರೋ ಐದಾರು ಮಂದಿ ಮಾದರ್‌ಚೋದ್ ಕೆಲ್ಸ ಮಾಡಿದ್ದಾರೆ ಎಂದ ಮಾತ್ರಕ್ಕೆ ಎಲ್ಲಾ ಶಾಸಕರೂ ಕೆಟ್ಟವರಲ್ಲ...!" ಎಂದುಬಿಟ್ಟರು.

ಅಲ್ಲಿಗೆ ಯಡ್ಡಿ ದೃಷ್ಟಿಯಲ್ಲಿ ಈ ಐದಾರು ಮಂದಿ ಮಾದರ್‌ಚೋದ್‌ಗಳೆಂದರೆ ಯಾರೆಂಬುದು ನೆರೆದ ಬಿಜೆಪಿ ನಾಯಕರಿಗೆಲ್ಲ ಗೊತ್ತಾಗಿ ಹೋಗಿತ್ತು. ತನ್ನ ವಿರುದ್ಧ ದೆಹಲಿಗೆ ಹೋಗಿ ದೂರು ಕೊಟ್ಟ ಈಶ್ವರಪ್ಪ, ಶೆಟ್ಟರ್, ಶಂಕರ್‌ಮೂರ್ತಿ, ರಮೇಶ್ ಜಿಗಜಿಣಗಿ, ಯತ್ನಾಳ್ ಮತ್ತು ಕೆ.ಬಿ. ಶಾಣಪ್ಪನವರನ್ನು ಕುರಿತೇ ಯಡ್ಡಿ ಈ ಪದಪ್ರಯೋಗಿಸಿದ್ದಾರೆಂಬುದಕ್ಕೆ ಯಾವ ವಿವರಣೆ ತಾನೇ ಬೇಕಿತ್ತು?

ಇನ್ನು ಅನಂತ್ ಗ್ಯಾಂಗ್ ಸುಮ್ಮನಿರುತ್ತಾ? ಮರುದಿನ ಬೆಳಿಗ್ಗೆ ಅಂದರೆ ಡಿಸೆಂಬರ್ 2ರ ಮುಂಜಾನೆಯೇ ಜಗದೀಶ್ ಶೆಟ್ಟರ್ ಮನೆಯಲ್ಲಿ ಸಭೆ ಸೇರಿದ ಈಶ್ವರಪ್ಪ, ರಮೇಶ್ ಜಿಗಜಿಣಗಿ, ಶಂಕರ್‌ಮೂರ್ತಿ, ಯತ್ನಾಳ್, ಶಾಣಪ್ಪ ಇತ್ಯಾದಿಗಳು ಯಡ್ಡಿ ತಮ್ಮ ವಿರುದ್ಧ ಕಿಡಿಕಾರಿದ ಬೈಗುಳದ ಟೇಪ್ ಸಮೇತ ರಾಷ್ಟ್ರನಾಯಕ ಯಶವಂತ ಸಿನ್ಹಾರಿಗೆ ದೂರು ಕೊಟ್ಟಿದ್ದಾರೆ. ಯಡ್ಡಿಯ ವಿರುದ್ಧದ ದೂರನ್ನು ಗಂಭೀರವಾಗೇ ಪರಿಗಣಿಸಿದ ಬಿಜೆಪಿ ಹೈಕಮಾಂಡ್ ಇದೇ ಡಿಸೆಂಬರ್ 8 ಮತ್ತು 9ರಂದು ದಾವಣಗೆರೆಯಲ್ಲಿ ನಡೆಯಲಿರುವ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಯಡ್ಡಿ ಕಾರ್ಯವೈಖರಿಯ ವಿರುದ್ಧ ಚರ್ಚೆಗೆ ಅವಕಾಶ ಕಲ್ಪಿಸುವ ಭರವಸೆಯನ್ನೂ ಕೊಟ್ಟಿದೆ.

ಇದು ಬಿಜೆಪಿಯ ಕೇಡುಗಾಲವೋ, ಯಡ್ಡಿಯ ಗ್ರಹಚಾರವೋ ಅಥವಾ ಸ್ಟ್ರೀಟ್ ಫೈಟಿಂಗ್ ಮುನ್ಸೂಚನೆಯೋ?

'ಕುಮಾರಣ್ಣ ನಿಮ್ದು Golden Hand' ಅಂದಿದ್ದ ಸಿ.ಟಿ. ರವಿ

ಅಪ್ರತಿಮ ದೇಶಭಕ್ತ, ಹಿಂದೂ ಯುವ ವೀರ ಶಾಸಕ ಸಿ.ಟಿ. ರವಿ ಇವತ್ತು ದೇವೇಗೌಡ-ಕುಮಾರಸ್ವಾಮಿಯನ್ನು ಎಷ್ಟೇ ಬೈಯ್ದುಕೊಂಡು ತಿರುಗಿದರೂ ಒಳಗೊಳಗೆ ಒಂದು ರೀತಿಯ ಭಯವೂ ಇದೆ.



ರವಿ ನಡೆಸಿರುವ ಭೂಗಳ್ಳತನ ಹಾಗೂ ಲ್ಯಾಂಡ್ ಡೀಲ್‌ಗಳೇ ಇದಕ್ಕೆ ಕಾರಣ. ಶಾಸಕನಾದ ಹೊಸತರಲ್ಲಿ ವಿಪರೀತ ಸಾಲ ಮಾಡಿಕೊಂಡು ಚಿಕ್ಕಮಗಳೂರಿನತ್ತ ಕಾಲಿಡಲೂ ಆಗದಂತ ಹಣಕಾಸಿನ ಮುಗ್ಗಟ್ಟಿನಲ್ಲಿದ್ದ ರವಿ ಒಮ್ಮೆ ಕುಮಾರಸ್ವಾಮಿ ಹತ್ತಿರ ಹೋಗಿ ಅಳುವ ಧ್ವನಿಯಲ್ಲಿ "ನನ್ ಮರ್ಯಾದೆ ಹೋಗೋ ಸ್ಥಿತಿ ಬಂದಿದೆ. ನಾನು ಚಿಕ್ಕಮಗಳೂರಿನಲ್ಲಿ ಮುಖ ತೋರಿಸುವುದಕ್ಕೂ ಆಗ್ತಿಲ್ಲ. ಒಂದ್ 15 ಲಕ್ಷ ಕೊಡಿ" ಅಂತ ಗೋಗರೆದಿದ್ದ.

ಸಮ್ಮಿಶ್ರ ಸರ್ಕಾರದ ಶಾಸಕನೇ ಬಂದು ಹೀಗೆ ಕೇಳುತ್ತಿದ್ದಾನಲ್ಲ, ಹಾಳಾಗಿ ಹೋಗಲಿ ಎಂದು ಅವತ್ತು ಕುಮಾರಸ್ವಾಮಿ ಹಣ ಕೊಟ್ಟು ಕಳಿಸಿದ್ದಾರೆ. ಆದರೆ ಕಿಲಾಡಿ ರವಿ ಆ ದುಡ್ಡನಷ್ಟೂ ಎತ್ತಿಕೊಂಡು ಹೋಗಿ ದೇವನಹಳ್ಳಿಯ ಬೊಮ್ಮವಾರದಲ್ಲಿ 14 ಎಕರೆ ಜಮೀನು ಖರೀದಿಸಿಬಿಟ್ಟ. ಅಷ್ಟೇ ಅಲ್ಲ, ಅದರ ಅಕ್ಕಪಕ್ಕದಲ್ಲಿದ್ದ 86 ಎಕರೆ ಸರ್ಕಾರಿ ಗೋಮಾಳವನ್ನು ಸೇರಿಸಿ ಬೇಲಿ ಹಾಕಿಕೊಂಡ. ಇದಕ್ಕೆ ದೇವನಹಳ್ಳಿ ಬಿಜೆಪಿ ಯುವ ಮೋರ್ಚಾದ ನಾಗೇಶ್‌ನ ಸಪೋರ್ಟು ಮಾಡಿದ್ದ. ಆಮೇಲೆ ರವಿಯ ಲಕ್ ಹೇಗೆ ಕುದುರಿತೆಂದರೆ ಕೆಲವೇ ದಿನಗಳಲ್ಲಿ ಜಮೀನಿನ ಬೆಲೆ ಡಬಲ್ ಆಗಿಹೋಯಿತು. ಹತ್ತಿರತ್ತಿರ 50 ಕೋಟಿಯ ಭೂಕಬಳಿಕೆ ಇದು.

ಇದರಿಂದ ಥ್ರಿಲ್ಲಾದ ರವಿ ಇನ್ನೊಂದು ದಿನ ಕುಮಾರಸ್ವಾಮಿ ಹತ್ತಿರ ಹೋಗಿ "ಸಾರ್ ನಿಮ್ದು golden hand ಸಾರ್, ದುಡ್ಡೂ ಲ್ಯಾಂಡು ಎಲ್ಲಾ ಮಾಡ್ಕೊಂಡೆ" ಅಂದು ಬಂದಿದ್ದ.

ಅದೇ ರವಿ ಈಗ ಕುಮಾರಣ್ಣನದು ಭಸ್ಮಾಸುರನ ಕೈ ಅಂತ ಬೊಂಬಡಾ ಬಜಾಯಿಸುತ್ತಿದ್ದಾನೆ.

ಸಿ.ಟಿ. ರವಿ ನಿಜಕ್ಕೂ ನ್ಯಾಯವಂತನೇ ಆಗಿದ್ದರೆ ತಾನು ಬೊಮ್ಮವಾರದಲ್ಲಿ ಸಾರ್ವಜನಿಕರ ಜಮೀನು ನುಂಗಿಲ್ಲ ಎಂದು ಸಾಬೀತು ಮಾಡಲಿ.

...ಗೌಡಿ ಶ್ರೀರಾಮುಲು ಹೊರತಾಗಿ ಮಿಕ್ಕೆಲ್ಲರೂ ಅನಂತ್ ...ರೋಧಿ ಯಡ್ಡಿ ಶಿಷ್ಯರೇ ಇದ್ದರು. ಹಿರಿತನದಲ್ಲಿ ...ಡ್ಡಿ-ರಾಮಚಂದ್ರಗೌಡರಿಗೆ ಸರಿಸಮಾನರಾಗಿದ್ದ ...ಮಲಾಗೌಡ, ಸಂಘಟನೆಯಲ್ಲಿ ಮಹಾನ್ ಚಾಣಾಕ್ಷ ...ರವಿಂದ ಲಿಂಬಾವಳಿ, ಅಷ್ಟೇ ಸಮರ್ಥ ...ಶ್ವೇಶ್ವರ ಹೆಗಡೆ ಕಾಗೇರಿಯಂಥವರಿಗೆ ...ಮಂತ್ರಿಗಿರಿ ತಪ್ಪಿಸಿದ ಬಗ್ಗೆ ಅನಂತ್ ಶಿಷ್ಯರಲ್ಲೇ ...ಸಹನೆ ಕುದಿಯುತ್ತಿತ್ತು.


ಹಾಗಂತ ಕೈಕಟ್ಟಿ ಕೂರುವುದು ...ನಂತ್‌ಕುಮಾರ್ ಜಾಯಮಾನವಲ್ಲ. ತಮ್ಮ ...ದ್ಯಾರ್ಥಿ ದೆಸೆಯ ಎಬಿವಿಪಿಯ ಸಾಥಿ ...ತ್ತಾತ್ರೇಯ ಹೊಸಬಾಳೆಯನ್ನೇ ಯಡ್ಡಿ ...ರುದ್ಧದ ಅಸ್ತ್ರವನ್ನಾಗಿ ಪ್ರಯೋಗಿಸಿದರು. ಈ ...ಹೊಸಬಾಳೆ ಆರೆಸ್ಸೆಸ್‌ನ ಅಖಿಲ ಭಾರತ ಬೌದ್ಧಿಕ ...ಮುಖ. ದೇಶದ ಆರೆಸ್ಸೆಸ್ ಮೇಲೆ ಈತನಿಗೆ ...ದೊಡ್ಡ ಹಿಡಿತವಿದೆ. ಈತನನ್ನು ವೈ.ಚ. ...ಜಯದೇವರ ವಿರುದ್ಧ ಛೂ ಬಿಟ್ಟ ಅನಂತ್, ...ವ್ಯವಸ್ಥಿತವಾಗಿ ದಕ್ಷಿಣ ಭಾರತ ಕ್ಷೇತ್ರೀಯ ಕಾರ್ಯ...ವಾಹ ಹುದ್ದೆಗೆ ತನ್ನ ಪರಮಾಪ್ತ ಮಂಗೇಶ್ ...ಭೇಂಡೆಯನ್ನು ತರುತ್ತಾರೆ. ಇದಕ್ಕೆ ತಕ್ಕಂತೆ ರಾಜ್ಯ ...ಬಿಜೆಪಿ ಅಧ್ಯಕ್ಷ ಸದಾನಂದಗೌಡರಿಗೆ ಪರ್ಯಾಯವಾಗಿ ...ರಾಜ್ಯ ಬಿಜೆಪಿ ಸಂಘಟನಾ ಕಾರ್ಯದರ್ಶಿಯನ್ನಾಗಿ ...ಆರೆಸ್ಸೆಸ್‌ನ ಶಿವಮೊಗ್ಗ ವಿಭಾಗದ ಕಾರ್ಯವಾಹನಾಗಿ ...ಸಂತೋಷ್‌ರನ್ನು ಮಂಗೇಶ್ ಭೇಂಡೆ ನೇಮಿಸುತ್ತಾನೆ.

ಇವರಿಬ್ಬರೂ ಸೇರಿ ಯಡ್ಡಿಯ ಮೇಲೆ ಎಂಥಾ ...ಒತ್ತಡ ತರುತ್ತಾರೆಂದರೆ, ಅನಂತ್ ಅದೇನೇ ಸರ್ಕಸ್ ...ಮಾಡಿದರೂ ಮಂತ್ರಿಯಾಗಲು ಸಾಧ್ಯವಾಗದಿದ್ದ ವಿಶ್ವೇಶ್ವರ ...ಹೆಗಡೆ ಕಾಗೇರಿಯನ್ನು ಆರೆಸ್ಸೆಸ್ ಒತ್ತಡಕ್ಕೆ ಮಣಿದ ...ಯಡ್ಡಿ ತನ್ನ ಸಂಸದೀಯ ವ್ಯವಹಾರದ ಕಾರ್ಯದರ್ಶಿ...ಯನ್ನಾಗಿ ನೇಮಿಸುತ್ತಾರೆ.


ಅಲ್ಲಿಗೆ ಲಿಂಗವಂತ ವೈ.ಚ. ಜಯದೇವರ ...ಧಿಪತ್ಯದ ಆರೆಸ್ಸೆಸ್ ಅನಂತ್ ಪರಮಾಪ್ತ ಮಂಗೇಶ್ ...ಭೇಂಡೆಯ ಅಳ್ವಿಕೆಗೊಳಪಟ್ಟು, ಪಕ್ಷದ ಆಯಕಟ್ಟಿನ ...ಹುದ್ದೆಗೆ ಚಡ್ಡಿ ಸಂತೋಷ್ ನೇಮಕಗೊಂಡು ಯಡ್ಡಿಗಿದ್ದ ...ಆರೆಸ್ಸೆಸ್ ಆಶ್ರಯವೇ ತಪ್ಪಿಹೋಗಿತ್ತು. ಇದು ಅನಂತ್ ...ಕುಮಾರ್ ತೆರೆಮರೆಯಲ್ಲೇ ಆಡಿದ ಆಟವಾಗಿತ್ತು. ...ಅಧಿಕಾರದ ಅಮಲಿನಲ್ಲಿದ್ದ ಯಡ್ಡಿಗೆ ಇದು ಅರ್ಥ ...ವಾಗುವ ಹೊತ್ತಿಗೆ ಕೋ-ಜಾ ಸರ್ಕಾರವೇ ಕುಸಿದು ...ಬಿದ್ದಿತ್ತು.

ಅಧಿಕಾರದಲ್ಲಿದ್ದಷ್ಟೂ ದಿನ ಯಡ್ಡಿ ಹೆದ್ದಗಂತೆ ಆರೆಸ್ಸೆಸ್ ...ಸಂಘಟನೆಗಳಿಗೆ ದುಡ್ಡು ಹೊಂದಿಸಿಕೊಟ್ಟರು. ಆರೆಸ್ಸೆಸ್ ...ಕಳಿದ ಬ್ರಾಹ್ಮಣ ಸ್ವಾಮಿಗಳಿಗೆಲ್ಲ ಸರ್ಕಾರಿ ಬೊಕ್ಕಸದ ...ದುಡ್ಡು ಕೊಟ್ಟರು. ಒಂದೆಡೆ ಕಟ್ಟಾ ಬೆಂಬಲಿಗರ ...ಕ್ಕಾಗಿ, ಮುಖ್ಯವಾಗಿ ಶೋಭಾ ಕರಂದ್ಲಾಜೆಯ

ಕಂಟ್ರಾಕ್ಟರ್‌ಗಳ ಹಿಂಡು, ಮಗದೊಂದೆಡೆ ಯಡ್ಡಿ ಮಕ್ಕಳ ಟ್ರಾನ್ಸ್‌ಫರ್ ಬ್ರೋಕರ್‌ಗಳ ಪಟಾಲಂ ಒಕ್ಕಡೆಯಿಂದ ದುಡ್ಡು ದೋಚುತ್ತಿದ್ದರೆ, ಇತ್ತ ಅನಂತ್ ಶಿಷ್ಯರು ಯಡ್ಡಿ ಬಣದ ದುರಾಡಳಿತದ ಮಾಹಿತಿ ಸಂಗ್ರಹಿಸಿ ಅದನ್ನು







ಹೈಕಮಾಂಡಿಗೆ ರವಾನಿಸುತ್ತಲೇ ಬಂದರು.

ಈ ಮಧ್ಯೆ ನೀರಾವರಿ ಮಂತ್ರಿ ಈಶ್ವರಪ್ಪ ಶೋಭಾ ಕರಂದ್ಲಾಜೆಯ ವಿರುದ್ಧ ಎಲ್ಲೆಂದರಲ್ಲಿ ಕಿಡಿಕಾರುತ್ತಿದ್ದದ್ದು ಯಡ್ಡಿಗೆ ದೊಡ್ಡ ತಲೆನೋವಾಗಿತ್ತು. ಪಕ್ಷದ ಒಂದೆರಡು ವೇದಿಕೆಗಳಲ್ಲಿ ಯಡ್ಡಿಗೂ ಈಶ್ವರಪ್ಪಂಗೂ ಜಗಳವೇ ನಡೆದುಹೋಯಿತು. ದೇವೇಗೌಡರ ದರಿದ್ರನಾರಾಯಣ ರ್‍ಯಾಲಿಯ ವಿರುದ್ಧ ಈಶ್ವರಪ್ಪ ಮತ್ತು ಮುಖ್ಯಮಂತ್ರಿ ಚಂದ್ರು ಸೇರಿ ದಲಿತ-ಹಿಂದುಳಿದವರ ರ್‍ಯಾಲಿ ಹಮ್ಮಿಕೊಂಡರೆ ಯಡ್ಡಿಯನ್ನು ಎತ್ತಿಕಟ್ಟಿದ ಕರಂದ್ಲಾಜೆ ಅದಕ್ಕೂ ಅಡ್ಡಗಾಲಿಟ್ಟದ್ದು, ಇದರ ಪ್ರತೀಕಾರವಾಗಿ ಈಶ್ವರಪ್ಪ ಯಡ್ಡಿ ಮಗ ಕಳಪೆ ಕಾಮಗಾರಿ ಮಾಡಿ ದುಡ್ಡು ದೋಚಲು ಹವಣಿಸಿದ್ದ ಮೂರು ಪ್ರಮುಖ ಟೆಂಡರ್‌ಗಳ ತನಿಖೆಗೆ ಆದೇಶಿಸಿದ್ದು, ಈಶ್ವರಪ್ಪ ಅದೆಷ್ಟೇ



ವಿರೋಧಿಸಿದ್ದಾಗ್ಯೂ ಯಡ್ಡಿ ಮತ್ತೆ ಆಯನೂರು ಮಂಜುನಾಥ್‌ರನ್ನು ಬಿಜೆಪಿಗೆ ಕರೆತಂದಿದ್ದು, ಶಿವಮೊಗ್ಗದ ಬಿಜೆಪಿಯಲ್ಲಿ ಈಶ್ವರಪ್ಪ ವಿರುದ್ಧ ಆಯನೂರು ಮಂಜುನಾಥ್‌ಗೆ ಕುಮ್ಮಕ್ಕು ಕೊಟ್ಟು ಬೆಳೆಸಿದ್ದು, ಜೆಡಿಎಸ್ ವಂಚನೆಯ ವಿರುದ್ಧದ ಧರ್ಮ ಯಾತ್ರೆಯಿಂದ ಈಶ್ವರಪ್ಪನವರನ್ನು ಹೊರಗಿಟ್ಟು ಅವರ ಬದಲಿಗೆ ಮತ್ತೊಬ್ಬ ಕುರುಬರ ನಾಯಕ ಮೈಸೂರಿನ ಸಂಸದ ವಿಜಯಶಂಕರ್‌ರನ್ನು ಮೆರೆಸಿದ್ದು, ತಾನು ಮುಖ್ಯಮಂತ್ರಿಯಾದ ಮೊದಲ ಕಂತಿನ ಸಚಿವರ ಪೈಕಿ ಈಶ್ವರಪ್ಪನವರನ್ನು ಕೈಬಿಟ್ಟದ್ದು, ಇದರಿಂದ ಕುಪಿತರಾದ ಈಶ್ವರಪ್ಪ ಯಡ್ಡಿ ಪ್ರಮಾಣವಚನಕ್ಕೆಂದು ಬೆಂಗಳೂರಿಗೆ ಬಂದಿದ್ದ ಪಕ್ಷದ ವರಿಷ್ಠರ ಎದುರೇ ಯಡ್ಡಿ ವಿರುದ್ಧ ಗೋಳಾಡಿದ್ದು, ಅಷ್ಟಕ್ಕೇ ಸುಮ್ಮನಾಗದೇ ಯಡ್ಡಿ ಮಾಜಿಯಾದ ನಂತರವೂ ಶೆಟ್ಟರ್, ಶಂಕರಮೂರ್ತಿಯವರ ಜೊತೆಗೂಡಿ ದೆಹಲಿಯಾತ್ರೆ ಕೈಗೊಂಡು ಯಡ್ಡಿ ವಿರುದ್ಧ ಬಹಿರಂಗವಾಗಿ ಯುದ್ಧ ಘೋಷಿಸಿರುವುದು- ಇತ್ಯಾದಿಗಳೆಲ್ಲ ಯಾವ ಜೆಡಿಎಸ್ ಕಚ್ಚಾಟಕ್ಕಿಂತಲೂ ಕಮ್ಮಿಯಿತ್ತೇನು?

ಮೇಲುನೋಟಕ್ಕಿದು ಯಡ್ಡಿ-ಈಶ್ವರಪ್ಪ ನಡುವಿನ ಜಿದ್ದಾಜಿದ್ದಿಯಾಗಿ ಕಂಡರೂ ಅಂತರ್ಯದಲ್ಲಿ ಅದು ಯಡ್ಡಿಯ ವಿರುದ್ಧ ಅನಂತ್‌ಕುಮಾರ್ ಮಾಡುತ್ತಿರುವ ಚಿತಾವಣೆಯೆ!

ಇದೆಲ್ಲದರ ನಿರ್ಣಾಯಕ ಘಟ್ಟವೇ ಯಡ್ಡಿಯ ಹಿಡಿತದಿಂದ ಪಕ್ಷವನ್ನು ಅನಂತ್ ವಶಕ್ಕೆ ಪಡೆಯುವುದು. ಅದಕ್ಕೆ ರಾಜ್ಯ ಅಧ್ಯಕ್ಷ ಸದಾನಂದಗೌಡರನ್ನು ಇಳಿಸಿ ಆ ಜಾಗಕ್ಕೆ ಗಣಿ ರೆಡ್ಡಿಯನ್ನು ತರುವಂತೆ ಅನಂತ್‌ಕುಮಾರ್ ಬಣ ಪಟ್ಟು ಹಾಕಿದೆಯಾದರೂ ಅದೇ ಪರಮಸತ್ಯವಲ್ಲ. ಸದ್ಯಕ್ಕೆ ಸದಾನಂದಗೌಡರನ್ನು ಇಳಿಸಲು ಅನಂತ್‌ಗೆ ಒಬ್ಬ ಒಂದು ದಾಳ ಬೇಕಷ್ಟೆ. ಆ ಪಾತ್ರವನ್ನು ಈಗ ಜನಾರ್ದನ್ ರೆಡ್ಡಿ ನಿರ್ವಹಿಸುತ್ತಿದ್ದಾನೆ. ಸದಾನಂದಗೌಡರನ್ನು ಇನ್ನೇನು ಹೈಕಮಾಂಡ್ ಇಳಿಸುತ್ತದೆ ಎಂಬುದು ಖಾತ್ರಿಯಾಗುತ್ತಿದ್ದಂತೆ ಆರೆಸ್ಸೆಸ್ ತಲೆಹಾಕಿ ಆ ಜಾಗಕ್ಕೆ ಅನಂತ್‌ಕುಮಾರ್‌ರೇ ಸೂಕ್ತ ವ್ಯಕ್ತಿ ಎನ್ನುತ್ತದೆ. ಅಲ್ಲಿಗೆ ಬರುವ ಚುನಾವಣೆ ವೇಳೆಗೆ ಅನಂತ್‌ಕುಮಾರ್‌ರನ್ನು ಬಿಜೆಪಿ ಅಧ್ಯಕ್ಷರನ್ನಾಗಿ ಮಾಡುವುದು, ಯಡ್ಡಿಯನ್ನು ನಾಮಕಾವಸ್ಥೆಯ ಪ್ರಚಾರ ಸಮಿತಿ ಅಧ್ಯಕ್ಷನನ್ನಾಗಿ ಮಾಡುವುದು ಆರೆಸ್ಸೆಸ್ ತಂತ್ರ.

ಇನ್ನೂ ತಮಾಷೆಯೆಂದರೆ ಬರುವ ಚುನಾವಣೆಯಲ್ಲಿ ಒಂದಷ್ಟು ಮಂದಿ ಯಡ್ಡಿ ನಿಷ್ಠರನ್ನು ಸೋಲಿಸಿ ಅನಂತ್ ಬಣದ ಶಾಸಕರೇ ಬಹುಸಂಖ್ಯೆಯಲ್ಲಿರುವಂತೆ ನೋಡಿಕೊಳ್ಳುವ ಹುನ್ನಾರವನ್ನೂ ಅನಂತ್ ಹೆಣೆದಿದ್ದಾರೆ. ಹೇಗೂ ಚುನಾವಣೆಯ ನಂತರ ಪಕ್ಷದ ಅಧ್ಯಕ್ಷನೇ ಶಾಸಕಾಂಗ ಪಕ್ಷಕ್ಕೂ ಅಧ್ಯಕ್ಷನಾಗಬೇಕು. ಹಾಗೊಮ್ಮೆ ಬಿಜೆಪಿಗೆ ಬಹುಮತ ಬಂದಿದ್ದೇ ಆದರೆ ಬಹುಸಂಖ್ಯೆಯ ಶಾಸಕರೆಲ್ಲ ಯಡ್ಡಿ ಈಗಾಗಲೇ ಮುಖ್ಯಮಂತ್ರಿಯಾಗಿದ್ದಾಯಿತಲ್ಲ, ಇನ್ನು ಅನಂತ್‌ಕುಮಾರ್ ಸೀಯೆಮ್ಮಾಗಲಿ ಎಂಬ ರಾಗ ತೆಗೆಯುತ್ತಾರೆ. ಅಲ್ಲಿಗೆ ಯಡ್ಡಿ ಕತೆ ಮುಗಿದಂತೆಯೇ ತಾನೆ?

ಇಂಥದೊಂದು ಮಾಸ್ಟರ್ ಪ್ಲಾನ್ ರೂಪಿಸದೇ ಆರೆಸ್ಸೆಸ್ ಅಧಿಪತಿಗಳಾದ ದತ್ತಾತ್ರೇಯ ಹೊಸಬಾಳೆ ಮತ್ತು ಮಂಗೇಶ್ ಭೇಂಡೆ ಸದಾನಂದಗೌಡರನ್ನು ಇಳಿಸಿ ಆ ಜಾಗಕ್ಕೆ ಅನಂತ್‌ಕುಮಾರ್ ಪ್ರಾಯೋಜಿತ ... [illegible]?

[illegible] ತಾನೇ?


ನಾಲಾಯಕ್ ರಾಜಕಾರಣಿಗಳಿಂದ ಕುಲಗೆಟ್ಟಿರುವ ಬೀದರ್

ಕ[illegible]ಟಕದ ಮುಕುಟಮಣಿ ಎಂದು ಕರೆಯ[illegible]ವ ಬೀದರ ನಾಲಾಯಕ್ ರಾಜಕಾರಣಿಗಳಿಂದ [illegible]ಟ್ಟು ಹೋಗುತ್ತಿದೆ. ಇಲ್ಲಿನ ಹಳೆಯ [illegible]ತಾರಿಗಳಾದ ಭೀಮಣ್ಣ ಖಂಡ್ರೆ, ಗುರುಪಾದಪ್ಪ ನಾಗಮಾರಪಳ್ಳಿ, ಬಸವರಾಜ ಪಾಟೀಲ ಹುಮನಾಬಾದ್ [illegible]ತಾನವರ [illegible]ಟದಿಂದ ಜಿಲ್ಲೆಯ ತುಂಬೆಲ್ಲ [illegible] ತುಂಬಿ ತುಳುಕಾಡುತ್ತಿವೆ.



ಭೀಮಣ್ಣ ಖಂಡ್ರೆ

ಹದಗೆಟ್ಟು ಹೋಗಿರುವ ರಸ್ತೆಗಳು, ಕೇಳುವವರಿಲ್ಲದೆ ಬರ್ಬಾದ ಆಗುತ್ತಿರುವ ಸರಕಾರಿ ಕಚೇರಿಗಳನ್ನು ಸ್ವತಃ ದೇವರೇ ಬಂದರೂ ಸುಧಾರಿಸಲು ಸಾಧ್ಯವಿಲ್ಲ ಎನ್ನುವಂತಾಗಿದೆ. ಜಿಲ್ಲೆಯ ನಾಲ್ಕಾರು ಕಡೆ ಇರುವ ಸಕ್ಕರೆ ಕಾರ್ಖಾನೆಗಳು ಸಹ ಜಿಲ್ಲೆಯ ರೈತರ ಬದುಕನ್ನು ಸಿಹಿಯಾಗಿ ಸುವಲ್ಲಿ ವಿಫಲವಾಗಿವೆ. ಈ ಕಾರ್ಖಾನೆಗಳಾದರೋ ಇಂದಿಗೂ ಶಾಸಕರು, ಮಂತ್ರಿಗಳವರ ಕುಟುಂಬದ ಸದಸ್ಯರ ಕಪಿಮುಷ್ಠಿಯಲ್ಲಿ ಸಿಕ್ಕು ಬದ್ದಿವೆ.



ಬಸವರಾಜ ಪಾಟೀಲ್

1972 ರಲ್ಲಿ ಪ್ರಾರಂಭವಾದ ಕಾರಂಜಾ ಯೋಜನಾ ಕಾಮಗಾರಿ ಇಂದಿಗೆ ಮೂವತ್ತೈದು ವರ್ಷಗಳಾದರೂ ಇನ್ನೂ ಕುಂಟುತ್ತಲೇ ಸಾಗಿದೆ. 30 ಸಾವಿರ ಎಕರೆಗೆ ನೀರು ಹಾಯಿಸುವ ಸಾಮರ್ಥ್ಯ ಹೊಂದಿರುವ 6 ಗೇಟುಗಳುಳ್ಳ ಕಾರಂಜಾ ಯೋಜನೆಗೆ ಈಗಾಗಲೇ 500 ಕೋಟಿ ಖರ್ಚಾಗಿದೆ. ಇದಕ್ಕೆ ಬಹುಮುಖ್ಯ ಕಾರಣ ಇಲ್ಲಿನ ಪುಢಾರಿಗಳ ದುರಾಸೆಯೆಂದು ಹೇಳದೆ ವಿಧಿಯಿಲ್ಲವಾಗಿದೆ. ಈ ಯೋಜನೆಯ ಕಾಮಗಾರಿಗೆ ಹರಿಯಬೇಕಾದ ಹಣ ಸ್ಥಳೀಯ ರಾಜಕಾರಣಿಗಳ ಜೇಬುಗಳಿಗೆ ಹರಿದಿದೆ.

ಇದರಿಂದ ಸಹಜವಾಗಿ ಇಲ್ಲಿನ ಬಹುತೇಕ ರಾಜಕಾರಣಿಗಳು, ಇಂಜನಿಯರ್‌ಗಳು ಕುಬೇರನ ಮಕ್ಕಳೇ ಆಗಿದ್ದಾರೆ.

ಹಾಡುಹಗಲೇ ಕೋಟ್ಯಂತರ ರೂಪಾಯಿ ನುಂಗಿ ನೀರು ಕುಡಿದದ್ದು ಸಾಲದೆಂಬಂತೆ ಈಗ ಮತ್ತೆ 100 ಕೋಟಿ ರೂಪಾಯಿ ಕಾರಂಜ ಯೋಜನೆಗೆ ಬೇಕೆಂಬ ಪ್ರಸ್ತಾವ ಸರಕಾರದ ಮುಂದೆ ಇಟ್ಟಿದ್ದಾರೆ. ಬಹುಶಃ ಈ ಹಣ ಕೊಟ್ಟರೂ ಅದು ಇವರ ತಿಜೋರಿಗೆ ಹರಿದುಹೋಗುವ ಸಾಧ್ಯತೆ ಹೆಚ್ಚಾಗಿವೆ.



30 ವರ್ಷಗಳಿಂದ ಕುಂಟುತ್ತಾ ಸಾಗಿರುವ ಕಾರಂಜಾ ಯೋಜನೆ

ರೈತರ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟದ ಮೂಲಕವೇ ಶಾಸಕ, ಮಂತ್ರಿ ಆದ ಬಂಡೆಪ್ಪ ಕಾಶಂಪುರ ಎಂಬ ಎಬಡ ಕೂಡ ಕಾರಂಜ ಯೋಜನೆಯತ್ತ ಮುಖ ಮಾಡಿ ನೋಡುತ್ತಿಲ್ಲ. ಈತ ಕೃಷಿ ಮಂತ್ರಿ ಆದ ಅವಧಿಯಲ್ಲೇ 50 ಜನ ರೈತರು ವಿಷಸೇವಿಸಿಯೋ, ನೇಣು ಹಾಕಿಕೊಂಡೋ ಸತ್ತರು. ಈ ಬಗ್ಗೆ ಕಾಶಂಪುರ ಕ್ಯಾರೆ ಅನ್ನಲಿಲ್ಲ, ಬದಲಾಗಿ



ನಾಗಮಾರಪಳ್ಳಿ

ಕೇಂದ್ರ ಸರಕಾರ ರೈತರು ಹುಲ್ಲು ಬೆಳೆಸಲು ನೀಡುವ ಪ್ರೋತ್ಸಾಹ ಧನದಲ್ಲಿ ಕಾಶಂಪುರ ಅಕ್ಷರಶಃ ದನವಾಗಿಯೇ ಮೇಯ್ದು, ರೈತರಿಗೆ ಬೇಕಿಲ್ಲದಿದ್ದರೂ ಕೃಷಿ ಇಲಾಖೆಯಿಂದ ಬಂಡಿಗಳನ್ನು ಕೊಡುವ ಸ್ಕೀಮ್ ಜಾರಿಗೆ ತಂದು ಜನರಿಂದ ತೀವ್ರ ಮುಖಭಂಗಕ್ಕೆ ಒಳಗಾದ.

ಔರಾದ ಮಾಜಿ ಶಾಸಕ, ಮಾಜಿ ಮಂತ್ರಿ ಗುರುಪಾದಪ್ಪ ನಾಗಮಾರಪಳ್ಳಿ ಬೀದರ್ ಡಿ.ಸಿ.ಸಿ.ಬ್ಯಾಂಕ್‌ನ ಅಧ್ಯಕ್ಷ. ರೈತರ ಸಾಲಮನ್ನಾ ಯೋಜನೆಯ ಸಂಪೂರ್ಣ ಫಲವನ್ನು ಈ ಖದೀಮ ನೇರವಾಗಿ ತಾನೇ ಹೊಡಕೊಂಡಿದ್ದಾನೆ. ತನ್ನ ಚೇಲಾಗಳು, ಕುಟುಂಬ ವರ್ಗದವರು, ಪುಢಾರಿಗಳು ರೈತರೆಂದು ಬೋಗಸ್ ಸಾಲ ಪಡೆದು ಅವನ್ನು ಈಗ ಮನ್ನಾ ಮಾಡಿಸಿ ಆಗಿದೆ.

ಭಾಲ್ಕಿಯ ಮಾಜಿ ಶಾಸಕ ಪ್ರಕಾಶಖಂಡ್ರೆ, ಮಾಜಿ ಮಂತ್ರಿ ಭೀಮಣ್ಣ ಖಂಡ್ರೆಯನ್ನು ಹದ್ದುಬಸ್ತಿನಲ್ಲಿ ಇಟ್ಟಿದ್ದನ್ನೇ ಬಹುದೊಡ್ಡ ಸಾಧನೆ ಎಂಬಂತೆ ತೋರಿಸಿಕೊಳ್ಳುತ್ತಿದ್ದಾನೆ. ಎರಡನೇ ಅವಧಿಗೆ ಶಾಸಕರಾಗಿ ಆಯ್ಕೆಯಾಗಿದ್ದರೂ ಕಂಟ್ರಾಕ್ಟರ್‌ಗಿರಿಯಿಂದ ಹೊರಬಂದಿಲ್ಲ. ಸ್ಥಳೀಯ ಹಿರೇಮಠ ಸಂಸ್ಥಾನದ ಬಸವಲಿಂಗಪಟ್ಟದ್ದೇವರನ್ನು ತನ್ನ ಬುಟ್ಟಿಯಲ್ಲಿ ಹಾಕಿಕೊಂಡು ಅವರಿಗ[illegible] ಚಡ್ಡಿ ತೊಡಿಸಲು ಹೊರಟಿರುವುದು ಎಲ್ಲರ ಕಳವಳಕ್ಕೆ ಕಾರಣವಾಗಿದೆ. ಕಂಟ್ರಾಕ್ಟರ್ ದಂಧೆ ಮಾಡಿಕೊಂಡು ಎಲ್ಲರ ನಡುವೆ ಓಡಾಡಿಕೊಂಡಿ[illegible] ಪ್ರಕಾಶ ಎಲ್ಲರೂ ನೋಡನೋಡುತ್ತಿದ್ದಂತೆ ಶ್ರೀಮಂತಿಕೆಯ ಉಪ್ಪರಿಗೆ ಏರಿದ್ದು ಹುಬ್ಬೇರಿಸುವಂತಾಗಿದೆ. ಶಾಸಕತ್ವ ಎನ್ನುವುದು ರೊ[illegible] ಖಮಾಯಿಸುವ ದಂಧೆ ಆಗಿರಬಹುದೆ? ಎಂಬ ಪ್ರಶ್ನೆ ಸಹಜವಾಗಿ ಇಲ್ಲಿನ ಜನರಲ್ಲಿ ಮೂಡಿದೆ.

ಹುಮ್ನಾಬಾದನ ಮಲ್ಲಿಕಾರ್ಜುನ ಖೂಬಾ ಎಂ[illegible] ಮಾಜಿ ಶಾಸಕ ತಾಲೂಕಿನ ಎಲ್ಲಾ ಕಚೇರಿಗಳಲ್ಲಿ ಹಫ್ತಾ ಫಿಕ್ಸ್ ಮಾಡಿಕೊಂಡು ಹಣ ಕಮಾಯಿಸು[illegible] ದಂಧೆಗೆ ಇಳಿದಿದ್ದಾನೆ.

ದಿನೇದಿನೇ ಬರ್ಬಾದ್ ಆಗುತ್ತಿರುವ ಬೀದ[illegible] ಜಿಲ್ಲೆಯನ್ನು ಯಾರು ಸುಧಾರಿಸಬೇಕು? ಎಂಬು[illegible] ಸದ್ಯದ ಪ್ರಶ್ನೆಯಾಗಿದೆ.

-ವಿಶ್ವಾರಾಧ್ಯ ಸತ್ಯಂಪೇ[illegible]

ಇದು ಬೆನ್ನು ಬಿದ್ದವರ ಕಥೆ:
ಬಿಜೆಪಿಗೆ ಗೌಡಪ್ಪ-ಕಾಲೇಜ್‌ಗೆ ರಾಯರೆಡ್ಡಿ!

ಕೊನೆಗೂ ವಿಧಾನಸಭೆ ವಿಸರ್ಜನೆಯಾಗಿದೆ. ರಾಜ್ಯದ ಜೆಡಿಎಸ್‌ನಲ್ಲಿ ನಡೆಯುತ್ತಿರುವ ತೊಲಗುವಿಕೆ ಕೊಪ್ಪಳ ಜಿಲ್ಲೆಯ ಜೆಡಿಎಸ್‌ನವರಿಗೂ ಬಡಿದಿದೆ.

ನ. 29 ರ ಜೆಡಿಎಸ್‌ನ ಕಾರ್ಯಕ್ರಮದಲ್ಲಿ ಪಾಲ್ಗೊಂಡರೂ, ಇಷ್ಟು ದಿನ ಸೆಕ್ಯುಲರ್ ಮಂತ್ರ ಹೇಳಿ, ಈಗ ಲಿಂಗಾಯತ ಹೆಸರಲ್ಲಿ ಜಾತಿ ರಾಜಕಾರಣಕ್ಕೆ ಇಳಿದವರಲ್ಲಿ ಸಂಗಣ್ಣ ಕರಡಿ ಮತ್ತು ಶಿವಶರಣಪ್ಪಗೌಡ ಪ್ರಮುಖರು. ಹೆಚ್ಚುಕಮ್ಮಿ ಸಂಗಣ್ಣ ಕರಡಿ ಮತ್ತು ಜೆಡಿಎಸ್ ತೊರೆಯುವ ಹಂತದಲ್ಲಿದ್ದರೆ ಯಲಬುರ್ಗಾ ಮಾಜಿ ಶಾಸಕ, ಜೆಡಿಎಸ್‌ನ ಶಿವಶರಣಪ್ಪಗೌಡ ಆಗಲೇ ಬಿಜೆಪಿಯ ಬಾಗಿಲಲ್ಲಿ ನಿಂತು 'ಕಮಲ ಕಮಲ... ಓ ನನ್ನ ಮುದ್ದಿನ ಕಮಲ' ಹಾಡು ಹಾಡಲಾರಂಭಿಸಿದ್ದಾನೆ. ಬಿಜೆಪಿಗಳು 'ಸದಾ ನಮಸ್ತೆ....' ಅಂದು ಒಳಗೆ ಬಾ ಅನ್ನುವುದೊಂದು ಬಾಕಿಯಿದೆ.



ರಾಯರೆಡ್ಡಿ

ಅತ್ತ ರಾಯರೆಡ್ಡಿಯೇ ಸುತ್ತೂರು ಸ್ವಾಮಿ ಥ್ರೂ ಬಿಜೆಪಿಗೆ ನುಗ್ಗುವ ಯತ್ನದಲ್ಲಿದ್ದಾಗ ಯಲಬುರ್ಗಾ ಬಿಜೆಪಿಯವರು ರಾಯರೆಡ್ಡಿಯನ್ನು ತಡೆದದ್ದಾಯಿತು. ಈಗ ನೋಡಿದರೆ ಈ ಗೌಡಪ್ಪನ ಆಗಮನ ಕೇಳಿಯೇ ಬಿಜೆಪಿ ಹೌಹಾರಿ ಬಿಟ್ಟಿದೆ.

ಅತ್ತ ಪೇಜಾವರ ಸ್ವಾಮಿ ಮುಖಾಂತರ ಮತ್ತು ಇತ್ತ ಯಡ್ಡಿ ಜೊತೆ ಮಾತನಾಡಿ ಚಡ್ಡಿ ತೊಡಲು ರೆಡಿಯಾಗಿರುವ ಶಿವಶರಣಪ್ಪಗೌಡ, ಬತ್ತಿ ಇಡುವುದರಲ್ಲಿ ಎತ್ತಿದ ಕೈ. ಹಿಂದೊಮ್ಮೆ 1999 ರಲ್ಲಿ ಯಲಬುರ್ಗಾ ಕಾಂಗ್ರೆಸ್ ಅಧ್ಯಕ್ಷ ಬಿ.ಎಂ. ಶಿರೂರು ವಕೀಲರಿಗಿದ್ದ ಟಿಕೆಟ್‌ನ್ನು ತಪ್ಪಿಸಿ ತಾನು ಪಡಕೊಂಡು ಬಂದು ಪಕ್ಷದ ಹೆಸರಲ್ಲಿ ಗೆದ್ದೂ ಬಿಟ್ಟಿದ್ದ. ಗೆದ್ದ ಮೇಲೆ ಪೂರಾ ನಾಲ್ಕೂವರೆ ವರ್ಷ ಇಡೀ ಕ್ಷೇತ್ರದ ತುಂಬ ಅಡ್ಡಾಡಿ ಚೆನ್ನಾಗಿ ಮೇಯ್ದು. ಹಾಸ್ಟೆಲ್‌ಗೆ ಆಹಾರ-ಧಾನ್ಯ ಪೂರೈಸುವ ಟೆಂಡರ್ ಪಡೆದು ರೂಪಾಯಿಗೆ ಕೆಜಿ ಜೀರಿಗೆ, ಸಾಸಿವೆ ಅಂತ ಬೋಗಸ್ ಬಿಲ್ ಹಾಕಿ ದುಡ್ಡು ಎತ್ತಿದ್ದ, ಹಾಗೆ ಬಾಚಿಕೊಂಡ ದುಡ್ಡಿನಲ್ಲಿಯೇ ಯಲಬುರ್ಗಾ ಮತ್ತು ಧಾರವಾಡದಲ್ಲಿ ಕೋಟಿಗಟ್ಟಲೆ ಆಸ್ತಿ ಮಾಡಿದ.

ಎಸ್.ಎಂ. ಕೃಷ್ಣ ಮುಖ್ಯಮಂತ್ರಿಗಿರಿಯ ಅವಧಿ[illegible] ಸಂಬಂಧ ಸುದುಗಾಡು ಇಲ್ಲದ ಡಜನ್ ಗಟ್ಟಲೆ ಸಚಿವರನ್ನು ಕ್ಷೇತ್ರಕ್ಕೆ ಕರೆಸಿ ಮುಂದಿನ ಟಿಕೆಟ್ ಗಟ್ಟಿ ಮಾಡಿಕೊಂಡಿದ್ದ. ಮತ್ತೊಂದೆಡೆ ಸದ್ದಿಲ್ಲದೆ ಗುಲ್ಬರ್ಗಾ ಶರಣಬಸವೇಶ್ವರ ಸಂಸ್ಥಾನದ ಪೀಠಾಧಿಪತಿ ಡಾ. ಶರಣಬಸಪ್ಪ ಅಪ್ಪರನ್ನು ಕರೆದು ಸನ್ಮಾನ ಮಾಡಿ 'ಟಿಕೆಟ್ ನನಗೆ ಪಕ್ಕಾ' ಎಂದು ಹೇಳಿಕೊಂಡು ತಿರುಗಿದ್ದ.

ಕೊನೆಗೆ ಜನತಾ ಪರಿವಾರದಿಂದ ಕಾಂಗ್ರೆಸ್ಸಿಗೆ ಬಂದ ರಾಯರೆಡ್ಡಿ 2004 ರ ಚುನಾವಣೆಯಲ್ಲಿ ಟಿಕೆಟ್ ಪಡೆದು ಗೆದ್ದು ಬಿಟ್ಟ. ಮಾಜಿಯಾಗಿದ್ದಾಗ ಆಗಿಷ್ಟು-ಈಗಿಷ್ಟು ರಾಯರೆಡ್ಡಿಯನ್ನು ಬೈಯ್ದುಗೊಳ್ಳುತ್ತ ಟೈಂಪಾಸ್ ಮಾಡುತ್ತಿದ್ದ. ಆದರೆ ಮುಖ್ಯಮಂತ್ರಿಯಾಗಿದ್ದ ಧರಂಸಿಂಗ್ ಯಲಬುರ್ಗಾಕ್ಕೆ ಬಂದಾಗ ಊಟ ಮಾಡಲು ಈತನ ಮನೆಗೆ ಬರಲಿಲ್ಲ ಅಂತ ಬೆಂಬಲಿಗರು ಚಪ್ಪಲಿ ಒಗೆದ ಕೇಸು ನಡೆದು, ಶಿವಶರಣಪ್ಪಗೌಡ ಊರೇ ಬಿಟ್ಟುಬಿಟ್ಟ. ವಾಪಸ್ಸು ಹೀಗೇ ಹೋದರೆ ಬಡಿದಾರು ಅಂತ ಜೆಡಿಎಸ್ ಸೇರುವ ಮಾತಾಡಿಯೇ ಯಲಬುರ್ಗಾ ಸೇರಿದ. ಜೆಡಿಎಸ್‌ಗೆ ಈತನಿಂದ ನಯಾಪೈಸೆಯೂ ಲಾಭ ಆಗಲಿಲ್ಲ, ತನ್ನ ರಸಿಕತನದ ಆ ದಿನಗಳನ್ನು ನೆನೆದು ದಿನ ತಳ್ಳುತ್ತಿದ್ದ ಗೌಡಪ್ಪನಿಗೆ ಈ ವಿಧಾನಸಭೆ ವಿಸರ್ಜನೆಯಾಗಿದ್ದೇ ತಡ ಸರಳವಾಗಿ ಮಲವಿಸರ್ಜನೆ ಆದ ತೃಪ್ತಿಯಲ್ಲಿದ್ದಾನೆ. ಬಿಜೆಪಿ ರಾಜ್ಯದಲ್ಲಿ ಹುಟ್ಟಿಸಲು ಯತ್ನಿಸುತ್ತಿರುವ ಸುಳ್ಳು ಅಲೆಯ ಮೋಡಿಗೆ ಒಳಗಾಗಿ ಚಡ್ಡಿ ತೊಡಲು ರೆಡಿಯಾಗಿ, ಯಡ್ಡಿಗೆ ತನ್ನ ಕ್ಷೇತ್ರದಲ್ಲಿ ತನ್ನ ಗಾಣಿಗ ಕುಲಬಾಂಧವರು ನಿರ್ಣಾಯಕರು ಮತ್ತು ಅವರೆಲ್ಲ ತನ್ನ ಬೆನ್ನಿಗಿದ್ದಾರೆ ಎಂದು ರೈಲು ಹತ್ತಿಸಿದ್ದಾನೆ. ಆದರೆ ಈತನ ಕುಲಬಾಂಧವನೇ ಆದ ಶಿವಶಂಕರ ದೇಸಾಯಿ ಸಮಾಜವಾದಿ ಪಕ್ಷದಿಂದ ಈತನ ಗೆಲುವಿಗೆ ಅಡ್ಡಗಾಲಾಗುತ್ತಾನೆ. ಗೌಡಪ್ಪನನ್ನು ಬಿಜೆಪಿಗೆ ಬಿಟ್ಟುಕೊಂಡಿದ್ದೇಯಾದರೆ ಅಲ್ಲಿರುವ ಈಶಣ್ಣ ಗುಳಗಣ್ಣವರ ಗತಿ ಅಧೋಗತಿಯಾಗುವುದು ಖಚಿತ. ಸುಮ್ಮನೆ ಈಶಣ್ಣ ಕಾಂಗ್ರೆಸ್ ಸೇರುವುದು ಒಳ್ಳೆಯದು. ಕಾಂಗ್ರೆಸ್‌ನಲ್ಲಾದರೆ ಸಿದ್ಧರಾಮಯ್ಯ ರಾಯರೆಡ್ಡಿಯ ಟಿಕೆಟ್‌ಗೆ ಅಡ್ಡಾಗುವುದು ಖಚಿತ. ಈಶಣ್ಣನೇ ಎರಡು ಬಾರಿ ಸೋತ ಅನುಕಂಪ ಮತ್ತು ಕಾಂಗ್ರೆಸ್ ಓಟುಗಳಿಂದ ಒಮ್ಮೆ ಕೈ ನೋಡಬಾರದೇಕೆ?

ಎಲ್ಲ ಅಂದುಕೊಂಡಂತೆಯಾದರೆ ಕೊನೆಗೆ ಯಲಬುರ್ಗಾ ಜೆಡಿಎಸ್‌ಗೆ ಜಿ.ಪಂ. ಸದಸ್ಯ ಸಿ.ಎಚ್. ಪಾಟೀಲೇ ಗತಿ. 2004 ರ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ 15 ಸಾವಿರ ಮತ ಪಡೆದು ಪಕ್ಷದ ಮರ್ಯಾದೆ ಉಳಿಸಿದ್ದ ಪಾಟೀಲ್‌ಗೆ ಮತ್ತೆ ಜೆಡಿಎಸ್ ಟಿಕೆಟ್ ಗಟ್ಟಿಯಾದಂತಾಗುತ್ತದೆ.



ಶಿವಶರಣಪ್ಪಗೌಡ

ಕೊಪ್ಪಳ

ಜೆಡಿಎಸ್‌ನದು ಈ ರಗಳೆಯಾದರೆ ಕಾಂಗ್ರೆಸ್‌ನ ರಾಯರೆಡ್ಡಿ ಕಳೆದ 3 ತಿಂಗಳಿಂದ ಇನ್ನಿಲ್ಲದ ಕಿರಿಕ್ಕು ಆರಂಭಿಸಿದ್ದಾನೆ. ಮೊದಲು ಕುಕನೂರಿನಲ್ಲಿ ಬಿಜೆಪಿ ಕಾರ್ಯಕರ್ತರಿಂದ ಉಗಿಸಿಕೊಂಡು, ಕಲ್ಲೇಟು ತಿಂದು ಸೀದಾ ಆದ ಎನ್ನುವ ಹೊತ್ತಿನಲ್ಲಿ, ಎಂಎಸ್‌ಪಿಎಲ್ ಕೊಟ್ಟಿದ್ದ 47 ಟನ್ ಕಬ್ಬಿಣ ಎತ್ತಂಗಡಿ ವಿಷಯದಲ್ಲಿ ರಾದ್ಧಾಂತ ಮಾಡಿಕೊಂಡು ನೀರಿಳಿಸಿಕೊಂಡ. ಈಗ ನೋಡಿದರೆ ಯಲಬುರ್ಗಾದ ಹುಡುಗಿಯರ ಐಟಿಐ ಕಾಲೇಜಿಗೆ ಗಂಟುಬದ್ದಿದ್ದಾನೆ.

ಕೆಲ ತಿಂಗಳ ಹಿಂದೆ ಕುಮಾರಸ್ವಾಮಿಯೇ ಯಲಬುರ್ಗಾಕ್ಕೆ ಐಟಿಐ ಕಾಲೇಜ್ ಮಂಜೂರು ಮಾಡಿದ್ದ[illegible] ಪ್ರವೇಶ ಪಡೆದು 70 ವಿದ್ಯಾರ್ಥಿಗಳು ತರಗತಿಗೆ ಹಾಜರಾಗಿ ತಿಂಗಳುಗಳೇ ಕಳೆದಿವೆ. ಆದರೆ ಅಕ್ಟೋಬರ್ ರ ನಂತರ ಉದ್ಭವಿಸಿದ ರಾಜಕೀಯ ಬಿಕ್ಕಟ್ಟಿನಿಂದ ಬಂ[illegible] ರಾಷ್ಟ್ರಪತಿ ಆಡಳಿತ ಸಮಯದಲ್ಲಿ ದಿಢೀರನೆ ಯಲಬುರ್ಗಾ ಕಾಲೇಜನ್ನು ಗುನ್ನಾಳಗೆ ವರ್ಗಾಯಿಸಲಾಗಿದೆ. ಇಂಥವೆಲ್ಲ ಮಾಡೋಕೆ ರಾಯರೆಡ್ಡಿ ಎಕ್ಸ್‌ಪರ್ಟ್. ಹೀಗಾಗಿ ಇಲ್ಲಿಯೂ ರಾಯರೆಡ್ಡಿಯದೇ ಕೈವಾಡ ಇ[illegible] ಅನ್ನೋ ಮಾತು.


ಆದರೆ ಇನ್ನೊಂದು ಮಾತು ಅಂದರೆ ಈಗಾಗ[illegible] ಯಲಬುರ್ಗಾದಲ್ಲಿ ಪ್ರತಿಷ್ಠಿತರ ಎರಡು ಖಾಸಗಿ ಐಟ[illegible] ಕಾಲೇಜ್‌ಗಳಿವೆ. ಅಲ್ಲಿಯೇ ಮತ್ತೊಂದು ಸರ್ಕಾ[illegible] ಐಟಿಐ ಬಂದರೆ ಪಾಪ ಖಾಸಗಿ ಕಾಲೇಜಿನವ[illegible] ಡೊನೇಷನ್ ಇಲ್ಲದೆ ಮಣ್ಣು ತಿನ್ನಬೇಕಾ? ಅವರಿಗಾಗಿ[illegible] ಸರ್ಕಾರಿ ಕಾಲೇಜ್ ಎತ್ತಂಗಡಿಯಾಗಿದೆ. ಸರಿಯಾ[illegible] ಬಸ್ಸಿನ ಸೌಕರ್ಯವಿಲ್ಲದ ಗುನ್ನಾಳಗೆ ಬೇಡ, ಕಾಲೇ[illegible] ಯಲಬುರ್ಗಾದಲ್ಲಿಯೇ ಇರಲಿ ಎಂದು SFI ಆರಂ[illegible]ರುವ ಸತತ ಧರಣಿ ರಾಯರೆಡ್ಡಿಗೆ ಕಾಣುತ್ತಿಲ್ಲ.

ಇನ್ನು ಯಾವ ಮುಖ ಇಟ್ಕೊಂಡು [illegible] ಕೇಳೋಕೆ ಬರ್ತಾರೋ ನೋಡಬೇಕು.

-ವರದಿಗಾ[illegible]

ಭಾವಿ ಎಮ್ಮೆಲ್ಲೆಯಾಗಲು ಭಾರಿ ಪೈಪೋಟಿ

ರಾಜ್ಯ ರಾಜಕೀಯದ ಹಗ್ಗ ಜಗ್ಗಾಟ ರಾಷ್ಟ್ರಪತಿ [ಆಡ]ಳಿತದಿಂದ ಕೊನೆಗಾಣುತ್ತಿರುವಂತೆ ರಾಜ್ಯದ ತುಂಬೆಲ್ಲ [ರಾಜಕ]ಾರಣಿಗಳು ಗರಿ ಗರಿ ಬಟ್ಟೆ ತೊಲಿಸಿ ಚುನಾವಣೆಗೆ [ಅಣಿಯ]ಾಗುತ್ತಿದ್ದಾರೆ. ಏನ ಕೇನ ಪ್ರಕಾರೇಣ ದೇವೇಗೌಡ[ರ ಮತ್ತು] ಅವರ ಕುಟುಂಬವನ್ನು ತುಳಿಯಲೇಬೇಕೆಂದು ಪಣ [ತೊ]ಟ್ಟಿರುವ ಬಳ್ಳಾರಿಯ ಗಣಿ ದೊರೆ ಜನಾರ್ದನ [ರೆಡ್ಡಿ] ಹಾಗೂ ನೈಸ್ ಸಂಸ್ಥೆಯ ಅಶೋಕ ಖೇಣಿ [ಹಾ]ಸನದಲ್ಲಿ ಹಣದ ಹೊಳೆ ಹರಿಸಲು [ಮುಂದಾ]ಗಿದ್ದಾರೆ.




[ವ]ಚನಭ್ರಷ್ಟ- ತಂದೆ ಮಕ್ಕಳ ಪಕ್ಷ [ವಾದ] ದೇವೇಗೌಡರ ಕಪಿಮುಷ್ಠಿಯಲ್ಲಿ [ಸಿಲು]ಕುತ್ತಿರುವ ಜೆ.ಡಿ.ಎಸ್ - [ಬಿಜೆಪಿ ಕೈ ಕೊ]ಟ್ಟಾದ ಹಣೆಪಟ್ಟಿ [ಕಟ್ಟಿಕೊಂಡ]ು ತೊಡಿರುವ [ಜೆಡಿ]ಎಸ್ ಪಾಳೆಯದಲ್ಲಿ [ಚು]ನಾವಣೆ ನೆನಪಾಗುತ್ತಲೆ [ನಡು]ಕ ಶುರುವಾಗಿದೆ. ಜಿಲ್ಲೆಗೆ [ಅಭಿ]ವೃದ್ಧಿಯ ನೆವದಲ್ಲಿ ರೇವಣ್ಣ [ನೂ]ರಾರು ಕೋಟಿ ರೂ. ತಂದಿದ್ದರೂ ಅದು [ಸಾ]ರ್ಥಕವಾಗಿ ಬಳಕೆಯಾಗಿಲ್ಲ. ಅಭಿವೃದ್ಧಿ ಹೆಸರಿನಲ್ಲಿ [ರೇವ]ಣ್ಣ ಮಾಡಿದ್ದು ಬರೀ ಜನವಿರೋಧಿ ಕಾರ್ಯ. [ಜಿಲ್ಲೆ]ಯ ಎಲ್ಲ ರಸ್ತೆಗಳು ತಿಪ್ಪೆಗುಂಡಿಗಳಾಗಿವೆ. ಹೀಗಾಗಿ [ಜಿಲ್ಲೆ]ಯ ತುಂಬೆಲ್ಲ ಜೆಡಿಎಸ್ ಕ್ಯಾಂಡಿಡೇಟುಗಳಾಗಲು [ಭಯ]ು ಕಾಡುತ್ತಿದೆ.

ಆದರೆ ಜೆಡಿಎಸ್‌ನ ಈ ಭಯವನ್ನು ಎನ್‌ಕ್ಯಾಶ್ [ಮಾ]ಡಿಕೊಳ್ಳಲು ಮುಂದಾಗಿರುವ ಬಿಜೆಪಿ, ಕಾಂಗ್ರೆ[ಸ್, ಸಮ]ಾಜವಾದಿ ಪಕ್ಷ ಹಾಗೂ ಬಿಎಸ್‌ಪಿ ಕ್ಯಾಂಡಿಡೇಟು[ಗಳು] ತುದಿಗಾಲ ಮೇಲೆ ನಿಂತು ಎಂಎಲ್‌ಎಗಳಾಗುವ [ಕನಸ]ು ಕಾಣುತ್ತಿದ್ದಾರೆ.

ಕಾಂಗ್ರೆಸ್ ಪಕ್ಷದಿಂದ ಮಾಜಿ ನಗರಸಭೆ ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು, ಯುವ ಕಾಂಗ್ರೆಸ್ ಅಧ್ಯಕ್ಷರು ಮತ್ತು ಎಂಎಲ್‌ಎಗಳು ಪುತ್ತೆ ಹೇಗಾದರೂ ಸೈ ಈ ಸಲ ಟಿಕೆಟು ಗಿಟ್ಟಿಸಿಯೇ ತೀರಬೇಕು ಎಂದು ಈಗಲೇ ತಿಪ್ಪರಲಾಗಹಾಕಲಾರಂಭಿಸಿದ್ದಾರೆ. ಕೆಲವರು ಕಾಂಗ್ರೆಸ್‌ನಿಂದ ಟಿಕೆಟ್ ದೊರೆಯದಿದ್ದರೆ ಸಂದರ್ಭಕ್ಕೆ ಇರಲಿ ಎಂದು ಬಿಎಸ್‌ಪಿ, ಬಿಜೆಪಿ ಮುಂತಾದ ಪಕ್ಷಗಳ ವತಿಯಿಂದಲಾದರೂ ಸ್ಪರ್ಧಿಸಬೇಕೆಂದು ಕಸರತ್ತು ಆರಂಭಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ನಿಂತು ಪರಾಭವಗೊಂಡಿದ್ದ ಕೆ.ಎಂ. ರಾಜೇಗೌಡ, ಹಾಲಿ ಎಂಎಲ್‌ಸಿ ಆನಂದ, ಮಾಜಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಕೆ. ಮಂಜುನಾಥ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಹೆಚ್.ಕೆ. ಮಹೇಶ್, ಮಾಜಿ ನಗರಸಭೆ ಅಧ್ಯಕ್ಷರುಗಳಾದ ಚೆನ್ನವೀರಪ್ಪ, ಜೆ.ಟಿ. ಕುಮಾರ ಮುಂತಾದವರು ಇಂತಹ ಸರ್ಕಸ್‌ಗಳನ್ನು ಈಗಾಗಲೇ ಆರಂಭಿಸಿದ್ದಾರೆ.

ಹಾಸನ

ಒಂದುವೇಳೆ ಕಾಂಗ್ರೆಸ್‌ನಿಂದ ಟಿಕೆಟ್ ದೊರೆಯದಿದ್ದರೆ ಬಿಜೆಪಿಯಿಂದಲಾದರೂ ಸ್ಪರ್ಧಿಸಿ ಗೆದ್ದೇ ಗೆಲ್ಲುತ್ತೇನೆ ಎಂಬ ಉಮೇದಿನಲ್ಲಿರುವ ಚೆನ್ನವೀರಪ್ಪ ಆಗಲೇ ಚೆಡ್ಡಿ ತೊಟ್ಟುಕೊಳ್ಳುವ ಹವಣಿಕೆಯಲ್ಲಿರುವುದು ಗೊತ್ತಾಗಿದೆ. ಬಿಜೆಪಿ ಟಿಕೆಟು ಕೊಡಿಸಿದರೆ ಹತ್ತು ಲಕ್ಷ ಭಕ್ಷೀಸು ಕೊಡುತ್ತೇನೆ ಎಂಬ ಮಾತುಗಳನ್ನೂ ಈಗಾಗಲೇ ತೇಲಿಬಿಟ್ಟಿದ್ದಾರೆ.



ನಮ್ಮದು ಜಾತ್ಯತೀತ ಪಕ್ಷ ಎಂದು ಹೇಳುತ್ತಲೇ ಕೋಮುವಾದಿ ಜನಗಳೊಂದಿಗೆ ಕೈಜೋಡಿಸಿ ತನ್ನ ಇಭ್ರತಿಯನ್ನು ಹೊರಗೆಡಹಿಕೊಂಡ ಜೆಡಿಎಸ್ ದೇವೇಗೌಡರ ಕುಟುಂಬ ರಾಜಕೀಯದಿಂದ ಕುತ್ತುಸಿರು ಬಿಡುತ್ತಿದೆ. ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷದ ಪ್ರಾಬಲ್ಯ ಕುಗ್ಗಲು ರೇವಣ್ಣ ಎಂಬ ಎಡಬಿಡಂಗಿಯ ಪಾತ್ರ ಬಹು ಮುಖ್ಯವಾಗಿದೆ. ಅಧಿಕಾರದ ಅಮಲನ್ನು ನೆತ್ತಿಗೇರಿಸಿಕೊಂಡ ರೇವಣ್ಣ ಅಧಿಕಾರದಲ್ಲಿ ಇರುವವರೆಗೂ ಪಕ್ಷದ ಯಾವುದೇ ಸಾಮಾನ್ಯ ಕಾರ್ಯಕರ್ತನ ಕೈಗೆ ಸಿಗಲೇ ಇಲ್ಲ. ಹಾಗೂ ಜಿಲ್ಲೆಯಲ್ಲಿ ಈಗಾಗಲೇ ಸುಮಾರು ಆರು ವರ್ಷಗಳಿಂದ ಬೀಡುಬಿಟ್ಟಿರುವ ಅಧಿಕಾರಿಗಳ ವ್ಯಾಪಕ ಭ್ರಷ್ಟತೆಯನ್ನು ತನ್ನ ಮೌನ ನಡತೆಯ ಮೂಲಕ ಬೆಂಬಲಿಸಿದ ರೇವಣ್ಣನ ಬಗ್ಗೆ ಜಿಲ್ಲೆಯ ತುಂಬ ಜಿಗುಪ್ಸೆ ತುಂಬಿಕೊಂಡಿದೆ. ಹಾಸನ ತಾಲೂಕಿನ ಶಾಸಕ ಹೆಚ್.ಎಸ್. ಶಿವಪ್ರಕಾಶ ಸೇರಿದಂತೆ ಜಿಲ್ಲೆಯ ಎಲ್ಲಾ ಶಾಸಕರನ್ನು ನೆಪಮಾತ್ರಕ್ಕೆ ತಮ್ಮೊಂದಿಗೆ ಇಟ್ಟುಕೊಂಡಂತೆ ತೋರಿಸಿಕೊಳ್ಳುತ್ತಲೆ ಸರಕಾರಿ ಭೂಮಿಯನ್ನು ಕಬಳಿಸಿದ ಜೆಡಿಎಸ್‌ಗೆ ಇದ್ದ ಒಂದಿಷ್ಟು ಗೌರವವನ್ನು ನುಂಗಿಹಾಕಿದೆ. ಹೀಗಾಗಿ ಈಗ ಪಕ್ಷದಲ್ಲಿ ಉಳಿದಿರುವವರೆಂದರೆ ರಾಜ್ಯಸಭಾ ಸದಸ್ಯ ಹೆಚ್.ಕೆ. ಜವರೇಗೌಡ, ಅವರ ಬೆಂಬಲಿಗರಾದ ಪಟೇಲ ಶಿವರಾಂ ಮತ್ತು ಕ್ಷಣಕ್ಷಣಕ್ಕೂ ಪಕ್ಷ ಬದಲಾಯಿಸುವ ಬಿ.ಪಿ. ಕರೀಗೌಡ ಮಾತ್ರ.

ತಮಾಷೆ ಎಂತಹದ್ದೆಂದರೆ ಇಡೀ ರಾಜ್ಯದ ತುಂಬ ದಿನಬೆಳಗಾದರೆ ಬೊಬ್ಬಿರಿಯುತ್ತಿರುವ ಬಿಜೆಪಿಗೆ ಇಲ್ಲಿ ನೆಲೆಯೇ ಇಲ್ಲ. ಇರುವ ಒಂದಿಷ್ಟು ಅಭ್ಯರ್ಥಿಗಳು ಕೌನ್ಸಿಲರ್ ಚುನಾವಣೆಯಲ್ಲಿ ಸ್ಪರ್ಧಿಸಿ ಠೇವಣಿ ಕಳೆದುಕೊಂಡು ತೀವ್ರ ಮುಖಭಂಗ ಅನುಭವಿಸಿದ್ದಾರೆ. ಇದ್ದವರಲ್ಲಿಯೆ ಸ್ವಲ್ಪ ಕೈಬಾಯಿ ಶುದ್ಧವಿರಿಸಿಕೊಂಡಿರುವ ಸರಳ ವ್ಯಕ್ತಿತ್ವದ ಹನುಮೇಗೌಡ ಟಾಂಗ್ ಕೊಡಬಹುದೆಂಬ ನೆಮ್ಮದಿ ಬಿಜೆಪಿ ಪಾಳೆಯದಲ್ಲಿದೆ. ಜೊತೆಗೆ ಪಿಕ್ಚರ್ ಪ್ಯಾಲೇಸ್ ಮಾಲೀಕ ಗುರುಪ್ರಸಾದ ಉರುಫ್ ಗುರೂಜಿ ಹಾಗೂ ಮಾಜಿ ನಗರಸಭೆ ಮುಖಂಡರಾಗಿರುವ ಕೆ.ಟಿ.ಪ್ರಕಾಶ ದಾಸಪ್ಪ ಅವರುಗಳು ಸ್ಪರ್ಧೆಗಿಳಿಯುವ ಸಾಧ್ಯತೆಗಳಿವೆ.

-ವರದಿಗಾರ

ಭ್ರಷ್ಟಾಚಾರದ ಹೊಳೆಯಲ್ಲಿ ಈಜಾಡಿದ ಈಶ್ವರಪ್ಪ ನೀರಡಗಿ

ಏಷ್ಯಾ ಖಂಡದಲ್ಲೇ ಅನಕ್ಷರತೆಯಲ್ಲಿ ಅತ್ಯಂತ ಹಿಂದುಳಿದ ತಾಲೂಕು [ಎಂ]ಬ ಅಪಖ್ಯಾತಿ ಹೊಂದಿದ ರಾಯಚೂರು ಜಿಲ್ಲೆಯ ದೇವದುರ್ಗದ [ಹ]ಣೆಬರಹ ಚೆನ್ನಾಗಿಲ್ಲ ಎಂದು ಕಾಣುತ್ತದೆ. ಇಲ್ಲಿ ಯಾರೇ ಬಂದರೂ [ಅವ]ರೆಲ್ಲ ತಮ್ಮ ಐಸತ್ತಿಗೆ ಎಷ್ಟು ಸಾಧ್ಯವೋ ಅಷ್ಟು ದೋಚಿ ಹೋಗುತ್ತಾರೆ. [ಕೊಳ್ಳೆಹೊಡೆ]ದುಂಡು ಎದ್ದು ಹೋಗುವುದೇ ಈ ಕ್ಷೇತ್ರದ ವೈಶಿಷ್ಟ್ಯ[ವೆ]ನ್ನುವಂತಾಗಿದೆ.

ರಾಯಚೂರು

ಯಾಕೆಂದರೆ ಮೊದಲು ಈ ಕ್ಷೇತ್ರದಿಂದ ಆಯ್ಕೆಯಾಗಿ [ಪ್ರತಿನಿಧಿ]ಸುತಿಸಿಕೊಂಡ ಪುಷ್ಪಾವತಿ, ಬಿ.ಶಿವಣ್ಣ, ಯಲ್ಲಪ್ಪ ಅಕ್ಕರಕಿ, [ಬಿ].ಲಲಿತಾ ನಾಯಕ್, ಸದ್ಯದ ಮಾಜಿ ಮಂತ್ರಿ ಹನುಮಂತಪ್ಪ [ಆಲ್ಕ]ೋಡ ಮುಂತಾದವರು ನಡೆಸಿರುವುದು ದರೋಡೆ. ಯಲ್ಲಪ್ಪ ಅಕ್ಕರಕಿ [ಎಂ]ಬ ಹೆಬ್ಬೆಟ್ಟು ಒತ್ತುವ ಗಿರಾಕಿ ಶಾಸಕನಾಗಿದ್ದಾಗ ಆಲ್ಕೋಡ ತನ್ನ ವಿಭಿನ್ನ [ವಿಚ]ಾರಧಾರೆಯ ಮೂಲಕ ಜನಸಾಮಾನ್ಯರ ಗಮನ ಸೆಳೆದಿದ್ದ. ಸರಕಾರಿ [ಕಚ]ೇರಿಗಳಲ್ಲಿ ನಡೆಯುತ್ತಿದ್ದ ಅವ್ಯವಹಾರ, ಲಂಚಾವತಾರಗಳನ್ನು [ಬ]ಯಲಿಗೆಳೆದು ಮಾಧ್ಯಮದವರ ದೃಷ್ಟಿಯಲ್ಲಿ ಹೀರೋ[ವಾಗಿ]ದ್ದ.



ಈಶ್ವರಪ್ಪ ನೀರಡಗಿ

ಇದರಿಂದಾಗಿಯೇ ಆಲ್ಕೋಡ ಹನುಮಂತಪ್ಪ ಪರಸ್ಥಳದವ[ನಾ]ಗಿದ್ದರೂ ಗೆದ್ದು ಬಂದಿದ್ದ. ಎಡಪಂಥೀಯ ವಿಚಾರಧಾರೆಯ [ಚಂ]ದ್ರಶೇಖರ ಬಾಳೆ, ವಿಧಾನ ಪರಿಷತ್‌ನ ಮಾಜಿ ಸದಸ್ಯ [ಬಸ]ವರಾಜ ಪಾಟೀಲ ಇಟಗಿ ಮುಂತಾದವರ ಸ್ನೇಹ [ಮಾಡ]ುದೇ ಅಲ್ಲದೆ ಸಾಹಿತ್ಯ ಪರಿಷತ್ತಿನ ಮೂಲಕ ತಮ್ಮನ್ನು [ಗುರು]ತಿಸಿಕೊಂಡಿದ್ದ ರಂಗಣ್ಣ ಪಾಟೀಲ ಅಳ್ಳುಂಡಿ, ದಂಡಪ್ಪ [ಮಾನ್ವ]ಿಕರ್, ಬಸವಕೇಂದ್ರದ ಗೆಳೆಯರ ಸಖ್ಯ ಗಳಿಸಿಕೊಂಡಿದ್ದ.

[ಆದರೆ] ಹೋಳಿದಾಟದ ಪೋಲಿ ಅಂಬಿಗನ ಮಿಂಡ ಎಂಬಂತೆ [ಆಲ್ಕ]ೋಡ ಇವರೆಲ್ಲರ ಕೈಗೆ ಚೆಂಬುಕೊಟ್ಟು ಈಗ ಅಡ್ನಾಡಿಗಳ [ಜೊತೆ] ಓಡಿದು ಅಡ್ನಾಡಿಡ್ಡಿಯಾಗಿ ಓಡಾಡುತ್ತಿದ್ದಾನೆ. ಚಂದಪ್ಪ [ಅಕ್ಕರಕ]ಿ ಎಂಬ ಜೆ.ಡಿ.ಎಸ್. ಖಜಾಂಚಿ ಹಾಗೂ ತಾಲೂಕಾ ಸುಧಾರಣ [ಸಮಿತಿ] ಅಧ್ಯಕ್ಷನ ಕೈಗೆ ಕಾರುಬಾರುಗಳನ್ನು ಕೊಟ್ಟು ಆಲ್ಕೋಡ ಭಕ್ಷೀಸು [ಪಡೆ]ದುಕೊಂಡು ಗಪ್‌ಚುಪ್ ಆಗಿ ಕುಳಿತಿದ್ದಾನೆ.

[ಹೀ]ಗೆ ಕೈಗೆ ಕಚೇರಿ ಕೊಟ್ಟ, ಕಚೇರಿ ತುಂಬ ಹೊಲಸು ಮಾಡಿತ್ತು [ಎಂಬ]ಂತೆ ಚಂದಪ್ಪ ಅಕ್ಕರಕಿ ಇಡೀ ಕ್ಷೇತ್ರವನ್ನು ಗುಡಿಸಿ ಗುಂಡಾಂತರ [ಮಾ]ಡಿದ್ದಾನೆ. ಅಕ್ಕರಕಿಯ ಹಗಾಗಳಕೆಯ ಹಾದರದ ಕತೆ ಹೇಳುತ್ತ ಹೋದರೆ [ಅದರ] ಪುಟಗಳು ಸಾಕಾಗುವುದಿಲ್ಲ. ಹಾಗಾಗಿ ಸದ್ಯ ಈ ಅಕ್ಕರಕಿ [ಹಾಗೂ] ಆಲ್ಕೋಡರ ಕೃಪಾಶೀರ್ವಾದದಿಂದ ಶಿಕ್ಷಣ ಇಲಾಖೆಗೆ ಪ್ರಭಾರಿ [ಬಿ.ಇ.ಓ.] ಆಗಿ ಬಂದಿರುವ ಈಶ್ವರಪ್ಪ ನೀರಡಗಿಯ ಕತೆಗೆ ಸೀಮಿತವಾಗಿದ್ದೇವೆ. [illegible] ಇವನ ಕತೆ ಕೇಳಿ [illegible].

[ಈ] ನೀರಡಗಿ ಹೋಳಿಕೇಳಿ ಆಲ್ಕೋಡ ಹನುಮಂತಪ್ಪನೊಂದಿಗೆ ಒಪ್ಪಂದ [illegible]. ಹೀಗಾಗಿ ಇಡೀ ಶಿಕ್ಷಣ ಇಲಾಖೆಯ [illegible], ತನ್ನ ತಿಜೋರಿಗಾಗಿ [illegible] ಗಟ್ಟಿಸಿ ಬಿಟ್ಟಿದ್ದಾನೆ. [illegible] ಎಸ್.ಡಿ.ಸಿ. ಏಜೆಂಟ್ ಆಗಿರುವ ರೇಣುಕಾ ಎಂಬ [illegible]. ಈ ಕಾರಣಕ್ಕಾಗಿ ಈಶ್ವರಪ್ಪ ನೀರಡಗಿ ಇತ್ತೀಚೆಗೆ ಶಿಕ್ಷಣ ಇಲಾಖೆಗೆ ಸೇರ್ಪಡೆ ಆದ ಹೊಸ 130 ಜನ ಶಿಕ್ಷಕರಿಗೆ ಪಾಲಿಸಿ ಮಾಡಿಸಲೇಬೇಕೆಂದು ಕಡ್ಡಾಯ ಮಾಡಿದ್ದಾನೆ. ಇದರಿಂದ ಕೇವಲ ಒಂದೆರಡು ತಿಂಗಳಲ್ಲಿ 1 ಕೋಟಿ ಮೂವತ್ತು ಲಕ್ಷಗಳ ಪಾಲಿಸಿ ಮೊತ್ತ ಜಮಾಮಾಡಿಕೊಂಡಿದ್ದಾನೆ.

ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಯತ್ತ ಆಕರ್ಷಿಸುವುದಕ್ಕೆ ಚಿಣ್ಣರ ಅಂಗಳ ಎಂಬ ಯೋಜನೆ ಒಂದಿದೆ. ಇಡೀ ತಾಲುಕಿನ 38 ಸಾವಿರ ಮಕ್ಕಳನ್ನು ಶಾಲೆ ಕಲಿಕೆಗೆ ಹಚ್ಚಿದ್ದೇವೆ ಎಂಬ ಸುಳ್ಳು ವರದಿ ನೀಡಿ ಇದರಲ್ಲಿ 17,54,000 ರೂಪಾಯಿಗಳ ಖರ್ಚು ಹಾಕಿದ್ದಾನೆ. ಎಣ್ಣೆ, ಬೇಳೆ, ಉಪ್ಪು, ಸಿಲೆಂಡರ್ ಮುಂತಾದ ವಸ್ತುಗಳನ್ನು ಪೂರೈಸದೆ ನಾಲ್ಕು ಲಕ್ಷ ರೂಪಾಯಿಗಳನ್ನು ಅನಾಮತ್ತಾಗಿ ನುಂಗಿದ್ದಾನೆ.

ತಾಲೂಕಿನ 182 ಶಾಲೆಗಳಿಗೆ 50 ಸಾವಿರ ರೂಪಾಯಿಗಳ ಕಲಿಕಾ ಸಾಮಗ್ರಿಗಳನ್ನು ಪೂರೈಸಿದ್ದಾಗಿ ಹೇಳಿ 19,92,000 ಖರ್ಚು ತೋರಿಸಿದ್ದಾನೆ. ಆದರೆ ವಾಸ್ತವದಲ್ಲಿ ಪ್ರತಿ ಶಾಲೆಗೆ ಕೇವಲ 20 ಸಾವಿರ ರೂಪಾಯಿಗಳ ಕಳಪೆ ಸಾಮಗ್ರಿಗಳನ್ನು ತಂದು ಹಾಕಿದ್ದಾನೆ. ಈ ಬಾಬತ್ತಿನಲ್ಲಿ ನೀರಡಗಿ ತಿಂದು ನೀರು ಕುಡಿದ ಹಣದ ಮೊತ್ತ 54 ಲಕ್ಷ 60 ಸಾವಿರ ಮಾತ್ರ!

ಪ್ರತಿ ಶಾಲೆಗೆ ಪೂರೈಸುವ ಆಹಾರದ ವಿವರ ಮತ್ತು ಹಣದ ಮೊತ್ತ ವಿವರಿಸುವ 266 ಶಾಲೆಯ ಪ್ರತಿಯೊಂದು ಕಪ್ಪು ಹಲಗೆಗೆ ಒಂದು ಸಾವಿರ ರೂಪಾಯಿ ಖರ್ಚು ಹಾಕಿ, ಈ ಬೋರ್ಡಗಳನ್ನು ಕೇವಲ 200 ರೂ.ಗಳಿಂದ 300 ರೂ. ಬರೆಸಿ 1 ಲಕ್ಷ 99 ಸಾವಿರ 500 ರೂಪಾಯಿಗಳ ಅಮೇಧ್ಯ ತಿಂದಿದ್ದಾನೆ.

ಇದೆಲ್ಲ ಸಾಲದು ಎಂಬಂತೆ ಮಜಬೂತಾಗಿದ್ದ ಶಾಲಾ ಕಟ್ಟಡಗಳನ್ನು ಕೆಡವಿ ಅಲ್ಲಿನ ಎಸ್.ಡಿ.ಎಂ.ಸಿ. ಅಧ್ಯಕ್ಷರನ್ನು ಹಿಡಕೊಂಡು 126 ಕಳಪೆ ಕಾಮಗಾರಿಯ ಶಾಲೆಗಳನ್ನು ಕಟ್ಟಿಸಿ ಇದರಲ್ಲಿ 15 ಲಕ್ಷ ರೂಪಾಯಿಗಳನ್ನು ಗೆಬರಿಕೊಂಡಿದ್ದಾನೆ.

ಇದೆಲ್ಲ ಕೇವಲ 4 ತಿಂಗಳ ಅವಧಿಯಲ್ಲೇ ನಡೆದ ಚಮತ್ಕಾರ! ಭ್ರಷ್ಟಾಚಾರದ ಹೊಳೆಯಲ್ಲಿ ನೀರಡಗಿ ಕಂಠಮಟ್ಟ ಸಿಗಹಾಕಿ ಕೊಂಡಿದ್ದರೂ ಆಲ್ಕೋಡ ಏನೂ ಆಗಿಲ್ಲ ಎಂಬಂತೆ ನಿರುಮ್ಮಳವಾಗಿದ್ದಾನೆ ಎಂದರೆ ಏನರ್ಥ? ಹನುಮಂತಪ್ಪನೂ ಕೂಡ ನೀರಡಗಿ ಭ್ರಷ್ಟಾಚಾರದ ಹೊಳೆಯಲ್ಲಿ ಮಿಂದಿರುವುದು ಸ್ಪಷ್ಟವಿದೆಯಲ್ಲವೇ.

ಈ ಗೋಲ್‌ಮಾಲ್‌ಗಳನ್ನೆಲ್ಲ ಸರಿಯಾಗಿ ಗ್ರಹಿಸಿದ ಈಗೀನ ಬೀಇಓ ರಾಮಶೆಟ್ಟಿ ನೀರಡಗಿ ನಿರಿಳಿಸಲು ಹೊರಟರೆ ನಿಮ್ಮ ಮೈ ನೆಟ್ಟಗಿರೋಲ್ಲ ಎಂಬ ಧಮಕಿಯನ್ನೂ ಹಾಕುತ್ತಾರೆ. ಚಂದಪ್ಪ ಅಕ್ಕರಕಿ ಇದಕ್ಕೆ ತನ್ನ ಧ್ವನಿ ಕೂಡಿಸುತ್ತಾರೆ. ಶಿಕ್ಷಣ ಇಲಾಖೆಯ ಬಾರಾ ಬಾನಗಡಿಯನ್ನು ಸೂಕ್ಷ್ಮವಾಗಿ ಗಮನಿಸಿದ ಜನತೆ ಇದಕ್ಕೆಲ್ಲ ಸಪೋರ್ಟ್ ಮಾಡುತ್ತಿರುವ ಹನುಮಂತಪ್ಪ ಆಲ್ಕೋಡನನ್ನೂ ಈ ಬಾರಿ ಹಳ್ಳಕ್ಕೆ ದೂಡಬೇಕೆಂದು ಈಗಾಗಲೇ ನಿರ್ಧರಿಸಿದ್ದರೆ ಅಚ್ಚರಿ ಇಲ್ಲ.

-ವರದಿಗಾರ

ದಲ್ಲಾಳಿಗಳಿಂದ ಗಿಜಿಗುಡುತ್ತಿರುವ ಶಹಾಪುರ ಎಸ್.ಬಿ.ಎಚ್.ಬ್ಯಾಂಕ್

ಸರಕಾರದ ಬಹುತೇಕ ಯೋಜನೆಗಳು ದಲ್ಲಾಳಿಗಳಿಂದ ಹೇಗೆ ಹದಗೆಟ್ಟು ಹೋಗುತ್ತವೆ ಎಂಬುದನ್ನು ನೋಡಬೇಕಿದ್ದರೆ ನೀವು ನೇರ ಶಹಾಪುರದ ಎಸ್.ಬಿ.ಎಚ್. ಬ್ಯಾಂಕ್‌ಗೆ ಬಂದು ನೋಡಬೇಕು. ಇಲ್ಲಿನ ಮ್ಯಾನೇಜರ್ ಎಸ್.ಪಿ. ಬಿಜಾಪ್ಪುರ ಹಾಗೂ ಫೀಲ್ಡ್ ಆಫೀಸರ್ ಅಶೋಕ ಮುಶರೀಫ್ ಇಬ್ಬರ ಕಳ್ಳ ಒಪ್ಪಂದ ರೈತರಿಗೆ ಕಂಟಕಪ್ರಾಯವಾಗಿ ಪರಿಣಮಿಸಿದೆ. ರೈತರ ಬಗ್ಗೆ ಅಪಾರವಾದ ಸಹಾನುಭೂತಿ ಇರುವುದಾಗಿ ತೋರಿಸಿಕೊಳ್ಳುವ ಈ ಕೋಡಂಗಿಗಳು ಟ್ರ್ಯಾಕ್ಟರ್ ಸಾಲ ಮತ್ತು ಬೆಳೆ ಸಾಲ ಯೋಜನೆಯ ಅಡಿಯಲ್ಲಿ ಕೋಟ್ಯಂತರ ರೂಪಾಯಿ ದರೋಡೆ ನಡೆಸಿದ್ದಾರೆ. ಇವು ಎಂಥ ಚಾಲಾಕಿಗಳೆಂದರೆ ತಾವು ಎಷ್ಟೆಲ್ಲಾ ಸಗಣಿ ತಿಂದಿದ್ದರೂ ಅದರ ಒಂದೇ ಒಂದು ಕುರುಹನ್ನು ಬಿಟ್ಟು ಕೊಡದ ಜಾಬಾದಿಗಳು.

ಗುಲ್ಬರ್ಗಾ

ಕಲಬುರ್ಗಿ ಮೂಲದವನಾದರೂ ಬೆಂಗಳೂರು ನಿವಾಸಿಯೇ ಆಗಿರುವ ಫೀಲ್ಡ್ ಆಫೀಸರ್ ಅಶೋಕ ಮುಶರೀಫ್ ಅಪ್ಪಟ ಚೋರ. ಬಲವಾನ್, ಮಹೀಂದ್ರ, ಸ್ವರಾಜ್ ಹಾಗೂ ಸೋನಾಲಿಕಾ ಮುಂತಾದ ಟ್ರ್ಯಾಕ್ಟರ್ ಡೀಲರ್‌ಗಳಿಂದಲೇ ನೇರ ವ್ಯವಹಾರ ಕುದುರಿಸಿಕೊಂಡಿದ್ದಾನೆ. ಒಂದು ಟ್ರ್ಯಾಕ್ಟರ್‌ಗೆ ಬ್ಯಾಂಕ್ ಸಾಲ ಮಂಜೂರಿ ಮಾಡಿಕೊಟ್ಟರೆ 25 ರಿಂದ 30 ಸಾವಿರ ರೂಪಾಯಿಗಳ ಭಕ್ಷೀಸು ಪಡೆಯುತ್ತಾನೆ. ಈ ಹೆಚ್ಚುವರಿ ಹಣ ಯಾವ ಟ್ರ್ಯಾಕ್ಟರ್ ಡೀಲರ್ ಭರಿಸುವುದಿಲ್ಲ, ಅದೆಲ್ಲ ರೈತನ ತಲೆಗೆ ಕಟ್ಟಿ ಸಾಲವನ್ನು ಹೆಚ್ಚುವರಿ ಮಂಜೂರಿ ಮಾಡಲಾಗುತ್ತದೆ.

ಕೇವಲ ಮೂರು ತಿಂಗಳ ಅವಧಿಯೊಳಗೆ ಈ ಭ್ರಷ್ಟ ಮುಶರೀಫ್ 73 ಜನ ರೈತರಿಗೆ ಸಾಲ ಮಂಜೂರಿ ಮಾಡಿದ್ದಾನೆ. ಈ ಎಲ್ಲಾ ಫಲಾನುಭವಿಗಳಿಂದ (ಇನ್ ಡೈರೆಕ್ಟಾಗಿ) ಅಮೇಧ್ಯ ತಿಂದಿದ್ದಾನೆ. ಎಸ್.ಪಿ.ಬಿಜಾಪ್ಪುರ ಮತ್ತು ಮುಶರೀಫ್ ಈ ಇಬ್ಬರು ಶಹಾಪುರ ಬ್ರ್ಯಾಂಚ್‌ಗೆ ಬಂದು ಆರೇಳು ತಿಂಗಳುಗಳಲ್ಲೇ ಎಸ್.ಬಿ.ಎಚ್. ಬ್ಯಾಂಕನ್ನು ನುಂಗಿ ನೊಣೆದಿದ್ದಾರೆ. ಬೆಳೆ ಸಾಲ ಅಪೇಕ್ಷಿಸಿ ಬರುವ ರೈತರಿಗೆ ಏನೇನೋ ಸಬೂಬು ಹೇಳಿ ಹೊರಗೆ ಕಳಿಸುವ ಇವರು ದಲ್ಲಾಳಿ ಮೂಲಕ ಬರುವ ರೈತರಿಗೆ ಮಣೆಹಾಕಿ ಸ್ವಾಗತಿಸುತ್ತಾರೆ. ಹೀಗಾಗಿ ಎಸ್.ಬಿ.ಎಚ್.ಬ್ಯಾಂಕ್ ಈಗೀಗ ಬರೀ ದಲ್ಲಾಳಿಗಳಿಂದಲೇ ತುಂಬಿ ಗಿಜಿಗುಡುತ್ತಿರುತ್ತದೆ.

ಬ್ಯಾಂಕ್‌ನ ಇತರ ವ್ಯವಹಾರಗಳಿಂದ ತಮಗೇನು ಲಾಭ ಇಲ್ಲ ಎಂದು ತಿಳಿದಿರುವ ಮ್ಯಾನೇಜರ್ ಅವನ್ನು ಅಸಡ್ಡೆಯಿಂದ ನೋಡುತ್ತಾನೆ. ಹೀಗಾಗಿ ಎಸ್.ಬಿ.ಎಚ್. ಬ್ಯಾಂಕ್‌ನ ಗ್ರಾಹಕ ಪ್ರತಿಯೊಂದಕ್ಕೂ ಪರದಾಡಬೇಕಾದ ಪ್ರಸಂಗ ಉಂಟಾಗಿದೆ.

[illegible] ವ್ಯವಹಾರದ ಮೂಲಕ ರೈತರನ್ನು [illegible] ಇವನ್ನು, ಸಾಲಗಾರನನ್ನಾಗಿ ಮಾಡುವ ಈ [illegible] ಶಿಕ್ಷೆಗೆ ಗುರಿಪಡಿಸಬೇಕು.

-[illegible]

> ಎಲ್ಲಣ್ಣ ಕೂಡಾ ಹುಟ್ಟಿದ. ಎಲ್ಲರಂತೆಯೇ ಹುಟ್ಟಿದ. ತಾಯಿಯ ಕರುಳ... ಸೀಳಿಕೊಂಡು ಕಿಟಾರನೆ ಕಿರುಚಿಕೊಂಡೇ ಹುಟ್ಟಿದ. ಆ ಅರಚಿನ... 'ಸವರ್ಣೀಯರೇ! ಅಸ್ಪೃಶ್ಯನಾದ ನಾನು ನಿಮ್ಮ ಪವಿತ್ರವಾದ ರಾಜಬೀದಿಯ... ಬರ್ತಿದ್ದೇನೆ, ದಾರಿಬಿಡಿ, ದಾರಿಬಿಡಿ' ಅನ್ನೋ ಯಾವ ಎಚ್ಚರಿಕೆಯ ಕೂಗ... ಇರಲಿಲ್ಲ. ಎಲ್ಲರಂತೆಯೇ ತಾನೂ ಕಿರುಚಿದ, ತನ್ನ ಜನನವನ್ನ ಜಾಹೀ... ಮಾಡಿದ.

ರೂಥಳ ನೆನಪುಗಳಿಗೂ ಸಾಕಷ್ಟು ವಯಸ್ಸಾಗಿದೆ. ಅವುಗಳಲ್ಲಿ ಕೆಲವು ನೆನಪುಗಳನ್ನು ರೂಬೆನ್ ಜತೆ ಹಂಚಿಕೊಂಡಂಥವು. ಮತ್ತೆ ಕೆಲವು ತಾನು ರೂಬೆನ್ನನ್ನು ಭೇಟಿಯಾಗುವುದಕ್ಕೂ ಮುಂಚಿನವು. ರೂಬೆನ್ ತನಗೆ ಪರಿಚಯಿಸಿದ ಅವನ ಪೂರ್ವಿಕರವು. ರೂಥ್ ತನ್ನಷ್ಟಕ್ಕೆ ತಾನೇ ಮುದ್ದಾಗಿ ಕರೆದುಕೊಳ್ಳುತ್ತಿದ್ದ ಎನ್ನೆಲಹಕ್ಕಿಯದು. ಆ ಎನ್ನೆಲಹಕ್ಕಿಯ ಇರುಳ ಕೂಗು ತಟ್ಟಿ ಎಬ್ಬಿಸುತ್ತಿದ್ದ ಎನ್ನೆಲದಿನ್ನೆಯದ್ದು.

ಎನ್ನೆಲದಿನ್ನೆಯನ್ನ ನೆನಪಿಸಿಕೊಂಡಾಗ ಅಸ್ಪೃಶ್ಯನ ತುಟಿಗಳ ಸೋಕಿನಿಂದ ಜೀವ ತುಂಬಿಸಿಕೊಳ್ಳುವ ಕೊಳಲಿನ ನಾದ ಜ್ಞಾಪಕಕ್ಕೆ ಬರುತ್ತೆ ಅಂತಾನೆ ರೂಬೆನ್. ರೂಬೆನ್‌ನ ತಾತ ಎಲ್ಲಣ್ಣ ಹುಟ್ಟಿದ್ದು ಅಲ್ಲೇ. ಕುಣಿದದ್ದೂ, ಹಾಡಿದ್ದೂ ಎಲ್ಲಾ ಅಲ್ಲೇ.

ಎಲ್ಲಣ್ಣ ಹಾಡುಗಳನ್ನೇನೂ ಬರೆಯಲಿಲ್ಲ, ಅವನಿಗೆ ಓದು ಬರಹವೇ ಬರುತ್ತಿರಲಿಲ್ಲ, ಅವನ ಬಳಿ ಇದ್ದದ್ದಾದರೂ ಏನು? ಸ್ಪಂದಿಸುವ ಹೃದಯ, ಹಂಚಬಲ್ಲ ಅನುಭವ, ಒಸರುವ ಕಣ್ಣೀರು, ಉಬ್ಬುವ ನರಗಳು, ಅಲ್ಲೋಲಕಲ್ಲೋಲ

ಮಾದಿಗರ ಮನೆಗಳು. ಚಾತುರ್ವರ್ಣ್ಯದಲ್ಲಿ ಬರುವ ಜಾತಿಗಳು ವಾಸ ಮಾಡುವ ಭಾಗವೆಲ್ಲಾ ಊರು ಅಂತಾದರೆ ಹೊಲೆಯರು ಇರೋ ಜಾಗ ಹೊಲಗೇರಿ, ಮಾದಿಗರು ಇರೋದು ಮಾದಿಗರ ಕೇರಿ. ಆದರೆ ವಿಚಿತ್ರ ಅಂದರೆ, ಇಷ್ಟೂ ಸೇರಿದರೆ ಮಾತ್ರ ಎನ್ನೆಲದಿನ್ನೆ!

ಒಂದು ಗಾದೆ ಮಾತಿದೆ-ಊರಿದ್ದ ಮೇಲೆ ಹೊಲಗೇರಿ ಅಂತ. ಈ ಗಾದೆಯ ಬಗ್ಗೆ ರೂಥ್ ಆಗಾಗ ಯೋಚಿಸ್ತಿರ್ತಾಳೆ. ಹೀಗೆ ವಿಚಾರ ಮಾಡ್ತಾ ಹೋದರೆ ಈ ದೇಶದ ಜನಜೀವನವನ್ನು ದಾರುಣವಾಗಿ ವಿಭಜಿಸಿರುವ ಅಡ್ಡಗೀರೊಂದು ಸ್ಪಷ್ಟವಾಗಿ ಕಾಣುತ್ತದೆ.... ಆ ಅಡ್ಡಗೀರಿನ ಆ ಕಡೆ ಸ್ಪೃಶ್ಯರು ಈ ಕಡೆ ಅಸ್ಪೃಶ್ಯರು. ಆ ಭಾಗ ಯಾವಾಗಲೂ ಮೇಲಿನದೇ, ಈ ಭಾಗ ಯಾವಾಗಲೂ ಕೆಳಗಿನದೇ.... ಎನ್ನೆಲದಿನ್ನೆಯೂ ಇದಕ್ಕೆ ಹೊರತೇನಲ್ಲ. ಈ ಅಡ್ಡಗೀರಿಲ್ಲದಿದ್ದರೆ ಅದರ ನಕ್ಷೆಯೇ ಗೋಚರಿಸುವುದಿಲ್ಲ.

ಆ ಅಡ್ಡಗೀರಿನ ಈ ಭಾಗದಲ್ಲಿ ಎಲ್ಲಣ್ಣನ ಬದುಕು. ಅವನ ಪೂರ್ವಿಕರು ಯಾವಾಗ ಅಡ್ಡಗೀರಿನ ಈ ಭಾಗಕ್ಕೆ ದೂಡಲ್ಪಟ್ಟರೋ ತಿಳಿಯದು. ಈ ಭೂಮಿಯ ಮೇಲೆ ಕ್ಷಣಾರ್ಧದಲ್ಲಿ ನೂರಾರು ಮಂದಿ ಹುಟ್ಟಬಹುದು. ಸಾವಿರ ಮಂದಿಯೂ ಹುಟ್ಟಬಹುದು. ಇಲ್ಲ! ಅದಕ್ಕಿನ್ನ ಹೆಚ್ಚೇ ಹುಟ್ಟಬಹುದು. ಎಲ್ಲಣ್ಣ ಕೂಡಾ ಹಾಗೇ ಹುಟ್ಟಿದ. ಎಲ್ಲರಂತೆಯೇ ಹುಟ್ಟಿದ. ತಾಯಿಯ ಕರುಳನ್ನ

ಜಿ. ಕಲ್ಯಾಣರಾವ್‌ರವರ

ಅಸ್ಪೃಶ್ಯ ವಸಂತ

2

ಅನುವಾದ: ಪ್ರೊ. ನಗರಗೆರೆ ರಮೇಶ್

ವಾದ ನೆತ್ತರನದಿ.....ಇಷ್ಟು ಸಾಕು, ಹಾಡು ತನ್ನಂತೆ ತಾನೇ ಉಕ್ಕಿ ಹರಿಯಲು. ಎಲ್ಲಣ್ಣ ಹಾಡು ಕಟ್ಟುತ್ತಿದ್ದುದೇ ಹಾಗೆ. ಎಲ್ಲಣ್ಣ ಹಾಡುತ್ತಿದ್ದ. ಹಾಡುತ್ತಾ ಕುಣಿಯುತ್ತಿದ್ದ. ಜನ ಅವನನ್ನು ಪದ ಹಾಡುವ ಎಲ್ಲಣ್ಣ ಅಂದರು. ಪದಕ್ಕೆ ಪಾದ ಹಾಕುವ ಎಲ್ಲಣ್ಣ ಅಂದರು. ಆದರೆ ಅವನ ಸೋದರತ್ತೆ ಭೂದೇವಿ ಮಾತ್ರ 'ಎಲ್ಲನ್ನಾ' ಅಂತಲೇ ಕರೀತಾ ಇದ್ದಳು.

ಎಲ್ಲಣ್ಣನ ಹಾಡುಗಳನ್ನ, ಅವನ ಕುಣಿತಗಳನ್ನ ಜ್ಞಾಪಿಸಿಕೊಂಡು ರೂಬೆನ್ ತನ್ನಷ್ಟಕ್ಕೆ ತಾನೇ ಬೀಗುತ್ತಿದ್ದ. ಕೊನೆಕೊನೆ ದಿನಗಳಲ್ಲಂತೂ ಪದೇ ಪದೇ ಅವುಗಳ ಬಗ್ಗೆಯೇ ಹೇಳುತ್ತಿದ್ದ ಆಗ ಅವನೊಂದು ಪುಟ್ಟ ಮಗುವೇ ಆಗಿಬಿಡುತ್ತಿದ್ದ. ಎಲ್ಲಣ್ಣ ಹಿರಣ್ಯಕಶಿಪುವಿನ ವೇಷ ಹಾಕಿದರೆ ಬಸುರಿ ಹೆಂಗಸರು ನಾಟಕಕ್ಕೆ ಬರಬಾರದು ಎಂದು ಟಾಂಟಾಂ ಹಾಕಿ ಸಾರುತ್ತಿದ್ದರಂತೆ! ಹಾಗಂತ ಆ ಹಳ್ಳಿಯಲ್ಲಿ ಈಗಲೂ ಮಾತಾಡಿಕೊಳ್ಳುತ್ತಾರೆ. ಎಲ್ಲಣ್ಣ ಹಾಡಿದ ಹಾಡುಗಳನ್ನು ಹಾಡಿ ತೋರಿಸುತ್ತಾರೆ. ಆ ಹಾಡುಗಳ ತುಂಬಾ ಹಳ್ಳಿ ಜೀವನ ತುಂಬಿಕೊಂಡಿದೆ. ಹಸಿವು, ಅಸ್ಪೃಶ್ಯತೆ ಎರಡೂ ಸೇರಿಕೊಂಡು ಹೃದಯ ಹಿಂಡುವಂಥ ರಾಗ ಹೊರಬರುತ್ತದೆ. ಚೆಂಚುಲಕ್ಷ್ಮಿ ನಾಟಕದಲ್ಲಿ ಎಲ್ಲಣ್ಣ ಸಾಕ್ಷಾತ್ ನರಸಿಂಹಸ್ವಾಮಿಯೇ ಅನ್ನೋಥರ ವೇಷ ಕಟ್ಟುತ್ತಿದ್ದ ಅಂತ ಎನ್ನೆಲದಿನ್ನೆಯಲ್ಲಿನ ತಮ್ಮ ಹಿರಿಯರು ಹೇಳಿದ್ದ ವಿಷಯವನ್ನ ನೆನಪಿಸಿಕೊಳ್ಳುತ್ತಾರೆ. ಆ ಮಾತುಗಳನ್ನ ಕೇಳುವಾಗ ರೂಥಳ ಮನದ ಮೂಲೆಯೊಂದರಲ್ಲಿ ಬಚ್ಚಿಟ್ಟುಕೊಂಡಿದ್ದ ಆನಂದ ಬುಗ್ಗೆಯಾಗಿ ಚಿಮ್ಮಿ ಕಣ್ಣಿಂದ ಜಾರುತ್ತದೆ. ಎಲ್ಲಣ್ಣ ಮಹಾನ್ ಕಲಾವಿದ. ರೂಬೆನ್ ಅಂಥ ಒಬ್ಬ ಮಹಾನ್ ಕಲಾವಿದನ ವಂಶದವ. ಅಂಥಾ ಪರಂಪರೆಗೆ ಈಗ ತಾನೂ ವಾರಸುದಾರಳಾಗಿದ್ದಾಳೆ.

ಎನ್ನೆಲದಿನ್ನೆ ಎಲ್ಲಣ್ಣನ ಹಾಡುಗಳನ್ನ, ಕುಣಿತಗಳನ್ನ ಮಾತ್ರವೇ ಬಚ್ಚಿಟ್ಟುಕೊಳ್ಳುವುದಾಗಿದ್ರೆ ಎಷ್ಟು ಚೆನ್ನಾಗಿರ್ತಿತ್ತು! ಆಗ ತಾನೂ ಭದ್ರವಾಗಿ ಅವುಗಳನ್ನೆಲ್ಲಾ ಬಚ್ಚಿಟ್ಟುಕೊಳ್ಳುತ್ತಿದ್ದಳು! ಅವಳು ಅದೆಷ್ಟೋ ಸಲ ಆ ಹಾಡುಗಳಿಗೆ ಪಲ್ಲವಿಯಾಗುತ್ತಿದ್ದಳು, ಆ ಕುಣಿತಗಳಿಗೆ ತಾಳವಾಗುತ್ತಿದ್ದಳು! ಆದರೆ ಆ ಹಾಡುಗಳ ಹಿನ್ನೆಲೆ ಮಾತ್ರ ಆಗೆಲ್ಲಾ ಧುತ್ತನೆ ಬಂದು ಕಣ್ಮುಂದೆ ನಿಲ್ಲುತ್ತದೆ. ಆ ಕುಣಿತದ ಲಯದ ಜೊತೆಗೆ ತನ್ನ ಅಟ್ಟಹಾಸವನ್ನೂ ಸೇರಿಸಿದ ಪೈಶಾಚಿಕ ನೃತ್ಯ ಕಣ್ಣೆದುರು ಮುಂದೆ ನಿಲ್ಲುತ್ತೆ.

ಎನ್ನೆಲದಿನ್ನೆ ಅಂಥಾ ದೊಡ್ಡ ಊರೇನಲ್ಲ, ಹಾಗೆಂದು ಅತೀ ಚಿಕ್ಕ ಹಳ್ಳಿಯೇನೂ ಅಲ್ಲ, ಒಂದು ಮೂವತ್ತು ರೆಡ್ಡಿಗಳ ಮನೆಯಿರಬಹುದು, ಒಂದೇ ಒಂದು ಬ್ರಾಹ್ಮಣರ ಮನೆ. ಅವರೇ ಆ ಊರಿನ ಶ್ಯಾನುಭೋಗರು. ಅಗಸ, ಹಜಾಮ, ಬಣಜಿಗ, ಗೊಲ್ಲ, ಕುಂಬಾರ ಹೀಗೆ ಇತರರೆಲ್ಲಾ ಸೇರಿ ಮತ್ತೊಂದು ಮೂವತ್ತು ಮನೆಗಳು. ರೆಡ್ಡಿ ದಿಬ್ಬದ ಮೇಲೆ ಎರಡು. ಅಷ್ಟೋರ ಕೆರೆಕಟ್ಟೆಯ ಮೇಲೆ ಎರಡು ಕೊರಚರ ಮನೆಗಳು. ಅಲ್ಲಿಂದ ದೂರದಲ್ಲಿ ಇಪ್ಪತ್ತು ಹೊಲೆಯರ ಮನೆಗಳು. ಇನ್ನೂ ಸ್ವಲ್ಪ ದೂರದಲ್ಲಿ ಅಷ್ಟೇ ಸಂಖ್ಯೆಯ

ಸೀಳಿಕೊಂಡು ಕಿಟಾರನೆ ಕಿರುಚಿಕೊಂಡೇ ಹುಟ್ಟಿದ. ಆ ಅರಚಿನಲ್ಲಿ 'ಸವರ್ಣೀಯರೇ! ಅಸ್ಪೃಶ್ಯನಾದ ನಾನು ನಿಮ್ಮ ಪವಿತ್ರವಾದ ರಾಜಬೀದಿಯಲ್ಲಿ ಬರ್ತಿದ್ದೇನೆ, ದಾರಿಬಿಡಿ, ದಾರಿಬಿಡಿ' ಅನ್ನೋ ಯಾವ ಎಚ್ಚರಿಕೆಯ ಕೂಗೂ ಇರಲಿಲ್ಲ. ಎಲ್ಲರಂತೆಯೇ ತಾನೂ ಕಿರುಚಿದ, ತನ್ನ ಜನನವನ್ನ ಜಾಹೀರು ಮಾಡಿದ.

ಅವನ ಹುಟ್ಟು ಎಲ್ಲ ಅಪ್ಪಂದಿರನ್ನು ಕಲಕಿದಂತೆ ಅವನ ಅಪ್ಪನನ್ನೂ ಸಹ ಕಲಕಿತು. ಗಂಡುಮಗು ಎನ್ನುತ್ತಾ ಕುಲಸ್ತರನ್ನೆಲ್ಲಾ ಕಲೆಹಾಕಿದ. ಹಿರೀಕರಿಗೆಲ್ಲಾ ಹೊಟ್ಟೆ ತುಂಬಾ ಕಳ್ಳು ಕುಡಿಸಿ ಸಂಭ್ರಮಿಸಿದ. ಎಲ್ಲ ತಾಯಂದಿರ ಥರವೇ ಎಲ್ಲಣ್ಣನ ತಾಯಿಯೂ ಸಹ ಹೆರಿಗೆಯ ನೋವಿನಲ್ಲಿ ಅವನ ಅರೆಚಾಟವನ್ನ ಕೇಳಿಸಿಕೊಂಡಳೋ ಇಲ್ಲವೋ ತಿಳಿಯದು. ಆದರೆ ಆ ಮಗುವಿನ ಸೋದರತ್ತೆ ಭೂದೇವಿ ಮಾತ್ರ ಸುಸ್ತಾಗಿದ್ದ ತಾಯಿ ಲಿಂಗಾಲುವಿನ ಮುಖವನ್ನು, ಅರಚುತ್ತಿದ್ದ ಪುಟ್ಟ ಕೂಸನ್ನು ಪದೇ ಪದೇ ನೋಡುತ್ತಲೇ ಇದ್ದಳು. ಬಂದಿದ್ದ ಸೂಲಗಿತ್ತಿ ಆ ಮಗುವಿನ ಕೂಗು ಬಲು ಜೋರಾಗಿತ್ತು ಅಂದಳು. ಅಷ್ಟು ಮಾತ್ರವಲ್ಲ ಆ ಕೂಸಿನ ಮೂಗು ಅಚ್ಚು ಸೋದರತ್ತೆಯ ಹೋಲಿಕೆಯೇ ಎಂದು ಭೂದೇವಿಯನ್ನ ನೋಡುತ್ತಾ ಹೇಳಿದಳು. ಆಗ ಗಮನಿಸಿದಳು ಭೂದೇವಿ. ಆ ಕೂಸಿನ ಮುಖದಲ್ಲಿ ತನ್ನನ್ನು ನೋಡಿಕೊಂಡಳು. ಸೂಲಗಿತ್ತಿಯ ಮಾತನ್ನು ಮತ್ತೆ ಕೇಳಬೇಕೆಂದುಕೊಂಡಳು.

ಬಾಣಂತಿ, ಮಗುವಿಗೆ ನೀರು ಹಾಕಿದ ದಿನವೇ ಅವನಿಗೆ ಹೆಸರನ್ನೂ ಇಟ್ಟದ್ದಾಯಿತು. ಎರ್ರೆಂಕ ತನ್ನ ತಾತನ ಹೆಸರನ್ನೇ ಇಡಬೇಕೆಂದ. ಭೂದೇವಿ ಅಪ್ಪನ ಹೆಸರು ಅಂದಳು. ಆ ಮಾತಿಗೆ ಎರ್ರೆಂಕ ಎದುರಾಡಲಿಲ್ಲ, ಇವತ್ತೂ ಅಂತಲ್ಲ, ಎರ್ರೆಂಕ ಯಾವತ್ತೂ ತಂಗಿಯ ಮಾತಿಗೆ ಎದುರಾಡಿದವನಲ್ಲ, ಅದಕ್ಕೆ ಬಲವಾದ ಕಾರಣವೇ ಇತ್ತು. ಎರ್ರೆಂಕ ಹುಟ್ಟುವ ಮುಂಚೆ ಇಬ್ಬರು ಹುಟ್ಟಿದ್ದರು. ಭೂದೇವಿಯ ನಂತರ ಇಬ್ಬರು ಹುಟ್ಟಿದ್ದರು. ಆ ನಾಲ್ವರು ಒಡಹುಟ್ಟಿದವರೂ ಮಣ್ಣುಪಾಲಾಗಿದ್ದರು. ಉಳಿದದ್ದು ಇವರಿಬ್ಬರೇ. ಆ ಎನ್ನಲದಿನ್ನೆಯಲ್ಲಿ ನನಗೆ ನೀನು, ನಿನಗೆ ನಾನು ಅನ್ನೋ ಹಾಗೆ ಅವರಿಬ್ಬರೂ ಬೆಳೆದು ದೊಡ್ಡವರಾದರು. ಅವರಪ್ಪ ಭೂದೇವಿಯನ್ನ ಕೊಳ್ಳ ದಿನ್ನೆಗೆ ಕೊಡೋಣವೆಂದರೆ ಎರ್ರೆಂಕ ಒಪ್ಪಲಿಲ್ಲ, ತಮ್ಮ ಊರಿನಲ್ಲೇ ಒಬ್ಬರಿಗೆ ಅವಳನ್ನ ಕೊಡಬೇಕೆಂದ. ಇದ್ದ ಒಂದಿಷ್ಟು ಜಾಗ ಕೂಡ ತಂಗಿಯ ಮದುವೆಗೆ ಕೈಬಿಟ್ಟರೂ ಅವನು ದಿಗಿಲು ಪಡಲಿಲ್ಲ, ತಂಗಿ ತನ್ನ ಊರಿನಲ್ಲೇ, ತನ್ನ ಮನೆಯ ಪಕ್ಕದಲ್ಲೇ ಇದ್ದಾಳೆ, ಅಷ್ಟೇ ಸಾಕು ಅಂತ ಸಮಾಧಾನಪಟ್ಟುಕೊಂಡ.

ಎರ್ರೆಂಕನ ಭಾವಮೈದ ಎಂಕಟನರಸು ಅಂತ ಕೆಟ್ಟ ಮನುಷ್ಯನೇನಲ್ಲ. ಹಾಗೇ ನೋಡಿದರೆ ಅವನ ಸ್ವಂತ ಊರು ಎನ್ನೆಲದಿನ್ನೆಯೇನಲ್ಲ, ಎಂಕಟನರಸುವಿನ ಪೂರ್ವಿಕರು ಚಿರಾಲ-ಪೇರಾಲ ಪ್ರಾಂತ್ಯದವರು. ಎಂಕಟನರಸುವಿನ ತಾತ ಎನ್ನಲದಿನ್ನೆಗೆ ಬಂದು ನೆಲೆಸಿದರು. ಬರುವಾಗ ಆತ ತನ್ನ ಮಗ್ಗವನ್ನು ಜೊತೆಗೆ ತಂದಿದ್ದ. ಆತ ಮಗ್ಗ ನೇಯುತ್ತಾ ಇದ್ದರೆ ಊರವರೆಲ್ಲಾ ಆಶ್ಚರ್ಯದಿಂದ ನೋಡುತ್ತಿದ್ದರು! ಆ ಮುದುಕ ಸತ್ತ ನಂತರ ಎಂಕಟನರಸುವಿನ ಅಪ್ಪ ಸ್ವಲ್ಪ ಕಾಲ ನೇಯ್ಗೆ ನಡೆಸಿದ. ಅವನೂ ತೀರಿಹೋದ ಬಳಿಕ ಮಗ್ಗ ಮಗ್ಗುಹಿಡಿಯಿತು. ಎಂಕಟನರಸು ಮಗ್ಗ ನೇಯದಿದ್ದರೂ ಚಿರಾಲ ಪೇರಾಲಕ್ಕೆ ಹೋಗಿ ಅಲ್ಲಿ ನೇಯ್ದ ಅರಳಿ ಪಂಚೆ ಹೊದಿಕೆಗಳನ್ನು ಮೂಟೆಗಟ್ಟಿಕೊಂಡು ಊರೂರು ತಿರುಗಿ ಮಾರುವುದನ್ನೇನೂ ಬಿಡಲಿಲ್ಲ. ಆ ರೀತಿ ವರ್ಷಕ್ಕೆ ಎರಡು ಮೂರು ತಿಂಗಳಾದರೂ ಆತ ಊರೂರು ತಿರುಗುವುದರಲ್ಲೇ ಕಳೆದುಹೋಗುತ್ತಿತ್ತು.

ಒಂದೊಂದು ಬಾರಿ ಕಷ್ಟ ಅನಿಸಿದರೂ ಮನೆಯಲ್ಲಿ ಕಾಳಿಗೇನೂ ಅಷ್ಟು ಸಮಸ್ಯೆ ಎಂದೂ ಆಗಿರಲಿಲ್ಲ, ಕೊಪ್ಪರಿಗೆ ದುಡ್ಡಿಲ್ಲದಿದ್ದರೂ ಆಣೆಪಾವಲಿಗಳಿಗೇನೂ ತಾಪತ್ರಯವಿರಲಿಲ್ಲ, ಬೇರೆಯವರು ಕೇಳಿದಾಗ ಎಲೆಅಡಿಕೆ ಕೊಟ್ಟು ಗೊತ್ತಿತ್ತೇ ವಿನಃ ಬೇರೆಯವರು ಮೂಸಿದ ಅಡಿಕೆಯನ್ನು ಭೂದೇವಿ ಎಂದೂ ಬಾಯೊಳಗಿಟ್ಟವಳಲ್ಲ. ಅವಳಿಗೇನು ಬಿಡೇ! ಗಂಡ ಊರೂರು ತಿರುಗಿ ತಂದು ಹಾಕ್ತಾನೆ, ಇವಳು ಮಂಚದ ಮೇಲೆ ಕೂತುಕೊಂಡು ದೌಲು ಮಾಡುತ್ತಾಳೆ ಎಂದು ಅವಳಿಗಾಗದವರು ಹೊಟ್ಟೆ ಉರಿಯಿಂದಲೂ, ಅವಳಿಂದ ಉಪಕೃತರಾದವರು ಸಂತೋಷದಿಂದಲೂ ಮಾತಾಡಿಕೊಳ್ತಿದ್ದರು.

ಯಾರೇ ಏನೇ ಅಂದುಕೊಂಡರೂ ಎರ್ರೆಂಕ ಮಾತ್ರ ತಂಗಿ ಹೇಗೆ ಹೇಳಿದರೆ ಹಾಗೆ ಮಾಡೋನು ಅಷ್ಟೆ. ಅದರ ಮೇಲೆ ಬೇರೆ ಮಾತೇ ಇಲ್ಲ, ಲಿಂಗಾಲುವನ್ನ ಮದುವೆಯಾಗಬೇಕು ಎಂದುಕೊಂಡಾಗಲೂ ನೋಡಿ ಬರೋದಕ್ಕೆ ತಂಗಿಯನ್ನೇ ಕಳುಹಿಸಿದ್ದ. ಅದು ಹೇಗೋ ಆಗುತ್ತೆ? ಮದುವೆ ಆಗೋನು ನೀನೋ? ಅವಳೋ?

ಎಂದು ಎಂಕಟನರಸು ಕೇಳಿದರೆ, ತಂಗ್ಯಮ್ಮನಿಗೆ ಹಿಡಿ... ನನಗೂ ಹಿಡಿಸಿದ ಹಾಗೆ ಅಂತ ಹೇಳಿದ್ದ.


ಭೂದೇವಿ ಲಿಂಗಾಲುವನ್ನ ನೋಡಿಕೊಂಡು ಬ... ಇಡೀ ದಿನ ಕಥೆ ಹೇಳುತ್ತಲೇ ಇದ್ದಳು. 'ಹುಡು... ಚೆನ್ನಾಗಿದ್ದಾಳೋ ಅಣ್ಣ' ಅಂದಳು. 'ಐದು ಆಕಳ ಮ... ಒಂದೇ ಉಸಿರಿನಲ್ಲಿ ಹೊರುತ್ತಾಳೆ' ಅಂದಳು. 'ಗ... ಪ್ರಾಣಿ ಅನ್ನೋದೇ ಆ ಮನೇಲಿ ಇಲ್ಲ, ನಿ... ಸುಖವಾಗಿರ್ತೀ ಬಿಡು, ಹುಡುಗಿ ಮಾತ್ರ ಒ... ಪಸಂದಾಗಿದಾಳೆ' ಅಂದಳು. ಭೂದೇವಿ ಹೇ... ಸುಳ್ಳಾಗಿರಲಿಲ್ಲ, ಲಿಂಗಾಲು ಅಂತಿಂಥ ಹೆಣ್ಣಲ್ಲ, ... ನಿಂತರೆ ಮನೆ ತಾರಸಿ ಎಟುಕೋ ಅಷ್ಟು ಉದ್ದ ಇದ... 'ಬಾಗಿಲು ಮೇಲೆಬ್ಬಿಸ್ಬೇಕು ಅಲ್ವಾ ಅಣ್ಣಾ' ಅಂತ ಭೂದ... ತಮಾಷೆ ಮಾಡುತ್ತಿದ್ದಳು.

ಹಾಗೆ ಬಾಗಿಲು ಎತ್ತರ ಮಾಡಿಸಿದರೆ ಊರ ಗ... ಶ್ಯಾನುಭೋಗರ ಕಣ್ಣು ಉರಿದು ಹೋಗೋದಿಲ್ವ... ಅನ್ನೋದು ಎರ್ರೆಂಕನ ಪ್ರಶ್ನೆ. ಆ ವಿಷಯ ಭೂದೇ... ತಿಳಿಯದ್ದೇನಲ್ಲ. ಒಬ್ಬ ಹೊಲೆಯ ಮನೆಯ ಒಳಕ್ಕೆ ... ಬಗ್ಗಿಸದೆ ಹೋಗೋ ವಿಷಯ ಹೇಗೋ ಸಿ... ಹೋಗಿ ಊರಿನ ದೊಡ್ಡ ಮನುಷ್ಯರಿಗೆ ತಲುಪಿಬಿ... ಎಲ್ಲಾ ತರ್ಕನೂ ಶಾಸ್ತ್ರದ ಹತ್ತಿರ ಬಂದೇ ಬರಬೇ... ಊರ ಪಂಡಿತರು ಗಹನವಾಗಿ ಮಾತನಾಡಿಕೊಳ್ಳುತ್ತಿರು... ಹೊಲೆಯರ ಮಾತು ಕಿವಿಗೆ ಬೀಳಬಾರದು. ... ಬಿದ್ದರೆ ಕಾಲಾನುಕಾಲದವರೆಗೆ ಕಷ್ಟ ಅನುಭವಿಸು... ತಪ್ಪುವುದಿಲ್ಲ, ಮನೆಯ ಬಾಗಿಲು ಎತ್ತರವಾಗಲಿಲ್ಲವಾದ... ಲಿಂಗಾಲು ಮಾತ್ರ ಎನ್ನೆಲದಿನ್ನೆಗೆ ಸೊಸೆಯಾಗಿ ಬಂದ... ಅವಳು ಪೂರ ಬಗ್ಗಿ ಮನೆ ಒಳಕ್ಕೆ ಹೋಗುವಾಗ... ಭೂದೇವಿ ಮಾತ್ರ 'ಬಾಗಿಲು ಎತ್ತರ ಮಾಡಿ... ಚೆನ್ನಾಗಿರ್ತಿತ್ತೋ ಅಣ್ಣಾ' ಅಂತ ಅಂತಾನೆ ಇರ್ತಿದ್ದ...

(ಮುಂದುವರೆಯುತ್ತ...)

ಎಲ್ಲಣ್ಣನ ಜನನ ಭೂದೇವಿಯ ಜತನ





ಇಲ್ಲಿ ಮನೆಯಲ್ಲಿದ್ದೇನೆ ಎಂಬ ಭಾವನೆ

■ ತಸ್ಲೀಮಾ ನಸ್ರೀನ್

ನಾನು ಮಾಡಿರುವ ಅಪರಾಧವಾದರೂ ಏನು? ಇಸ್ಲಾಮ್ ಧರ್ಮ ಹೆಣ್ಣನ್ನು ಮನುಷ್ಯಳು ಎಂದು ಪರಿಗಣಿಸುವುದಿಲ್ಲ ಎಂಬ ಸತ್ಯವನ್ನು ಕಂಡುಕೊಂಡಿದ್ದೇ ನಾನು ಮಾಡಿದ ಅಪರಾಧ. ಮೂಲದಲ್ಲಿ ಗಂಡಸನ್ನು ಮಾತ್ರ ಸೃಷ್ಟಿಸಲಾಯಿತು. ನಂತರ ಅವನ ತೃಪ್ತಿಗೆ ಹೆಣ್ಣನ್ನು ಸೃಷ್ಟಿಸಲಾಯಿತು ಎಂದು ಇಸ್ಲಾಮ್ ಹೇಳುತ್ತದೆ. ಇಸ್ಲಾಮ್ ಧರ್ಮದ ಪ್ರಕಾರ ಹೆಣ್ಣು ಗಂಡಿನ ಸೊತ್ತು, ಅವನ ಲೈಂಗಿಕ ದಾಹವನ್ನು ತಣಿಸಲೆಂದೇ ಹುಟ್ಟಿದವಳು. ಅವಳೊಬ್ಬ ಮಗಂದಿರನ್ನು ಹೆರುವ ಯಂತ್ರ. ಹಾದಿತ್‌ನ ಪ್ರಕಾರ ದಾಸ್ಯದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವ ಗುಲಾಮ ಮತ್ತು ಗಂಡನನ್ನು ರಾತ್ರಿ ಹೊತ್ತು ತೃಪ್ತಿ ಪಡಿಸಲಾಗದ ಹೆಣ್ಣು, ಇವರಿಬ್ಬರ ಪ್ರಾರ್ಥನೆಗಳು ದೇವರನ್ನು ತಲುಪುವುದೇ ಇಲ್ಲ.

ಮನಶಾಸ್ತ್ರೀಯವಾಗಿ ಹೆಣ್ಣು ಗಂಡಿಗಿಂತ ಕೀಳು ಎಂದು ಇಸ್ಲಾಮ್ ಧರ್ಮ ಪ್ರತಿಬಿಂಬಿಸುತ್ತದೆ. ಇಸ್ಲಾಮಿಯ ಕಾನೂನಿನಲ್ಲಿ ಇಬ್ಬರು ಹೆಂಗಸರು ಕೊಡುವ ಸಾಕ್ಷ್ಯ ಒಬ್ಬ ಗಂಡಸಿನ ಸಾಕ್ಷ್ಯಕ್ಕೆ ಸಮ. ತನ್ನ ಹೆಂಡತಿಯ ಶೀಲವನ್ನು ಶಂಕಿಸುವ ಅಥವಾ ತನ್ನ ಮಕ್ಕಳ ಹಕ್ಕನ್ನು ಹೆಣ್ಣಿಗೆ ಕೊಡಲೊಪ್ಪದ ಗಂಡಸು ಹೇಳುವ ಸಾಕ್ಷ್ಯ ನಾಲ್ಕು ಸಾಕ್ಷ್ಯಗಳಿಗೆ ಸಮನಾಗಿರುತ್ತದೆ.

ಮನುಷ್ಯ ಜನಾಂಗದ ಗಂಡು ಜಾತಿಯೆನ್ನುವುದು ಪವಿತ್ರ ಖುರಾನನ್ನು ತನ್ನ ಅನುಕೂಲಕ್ಕೆ ತಕ್ಕಂತೆ, ತನ್ನ ಲಾಲಸೆಗೆ ತಕ್ಕಂತೆ ಅರ್ಥೈಸಿ ಬರೆದಿರುವ ಹುನ್ನಾರವಷ್ಟೇ. ನಂತರ ನಾನು ಇತರ ಧರ್ಮಗಳನ್ನೂ ಅಭ್ಯಸಿಸಿದಾಗ ಅವುಗಳೂ ಸಹ ಹೆಣ್ಣನ್ನು ದಮನಿಸಲು ನೋಡುತ್ತವೆ ಎಂಬುದನ್ನು ಅರ್ಥ ಮಾಡಿಕೊಂಡೆ. ವೇಶ್ಯಾವೃತ್ತಿಗೆ ನೂಕಲ್ಪಟ್ಟು ಗುಲಾಮರಾಗಿ ಎಷ್ಟೋ ಹೆಂಗಸರು ಬಕರಿಯಾಗಿದ್ದಾರೆ. ಗಂಡಸರು ಅವರ ಮುಖಕ್ಕೆ ಆಸಿಡ್ ಎರಚಿ, ಮುಖವನ್ನೂ, ದೇಹವನ್ನೂ ಸುಟ್ಟು, ಅವರ ಮೂಗುಗಳನ್ನು ಅಪ್ಪಚ್ಚಿಗೊಳಿಸಿ, ಕಣ್ಣುಗಳು ಕುರುಡಾಗಿಸಿದರೂ ಸಹ ಏನೋ ಆಗಿಲ್ಲವೇನೋ ಎಂಬ ಧಿಮಾಕಿನಲ್ಲಿ ಹೊರನಡೆದಿರುವುದನ್ನು ನಾನು ನೋಡಿದ್ದೇನೆ.

ಹೆಂಗಸರನ್ನು ಹೊಡೆದು, ಬಡಿದು, ಸಾಯಿಸಲಾಗುತ್ತದೆ. ಹೆಂಗಸಿನ ಮೇಲೆ ಅತ್ಯಾಚಾರ ನಡೆದು, ನಂತರ ಅತ್ಯಾಚಾರಕ್ಕೆ ಅವಳೇ ಅನುಮತಿ ಕೊಟ್ಟಳೆಂಬ ಆಪಾದನೆಗೂ ಒಳಗಾಗುತ್ತಾಳೆ. ಅತ್ಯಾಚಾರಿಗಳಿಗೆ ಏನೂ ಶಿಕ್ಷೆಯೇ ಆಗುವುದಿಲ್ಲ.

ಪ್ರತಿಭಟಿಸು ಎಂದು ನನಗೆ ಯಾರೂ ಬೋಧಿಸಲಿಲ್ಲ. ಚಿಕ್ಕಂದಿನಿಂದಲೂ ಅನ್ಯಾಯದ ವಿರುದ್ಧ ಪ್ರತಿಭಟಿಸುವ, ನನ್ನ ಹಕ್ಕುಗಳಿಗೆ ಹೋರಾಡುವುದರ ಬಗ್ಗೆ ನನಗೆ ನಂಬಿಕೆಯಿತ್ತು. ಈ ಅನ್ಯಾಯವನ್ನು ಸರಿಪಡಿಸಲೆಂದು ಪುಸ್ತಕಗಳನ್ನು ಬರೆಯುವ ಕನಸು ಹೊತ್ತಿದ್ದೆ. ಹೆಣ್ಣು ಎಂತಹ ದೌರ್ಜನ್ಯಕ್ಕೆ ಒಳಗಾಗಿದ್ದಾಳೆ, ಯಾಕೆ ಪ್ರತಿಭಟಿಸಬೇಕಾಗಿದೆ ಎಂಬ ಅಗತ್ಯದ ಬಗ್ಗೆ ಬರೆದೆ. ತಮ್ಮನ್ನು ಹಿಂಸಿಸುವವರ ವಿರುದ್ಧ ಸೊಲ್ಲೆತ್ತಬಾರದೆಂದು ಶತಮಾನಗಳಿಂದ ಹೆಣ್ಣಿನ ತಲೆಯಲ್ಲಿ ತುಂಬಲಾಗಿದೆ. ನನ್ನ ಬರವಣಿಗೆಯ ಮೂಲಕ ಹೆಣ್ಣಿನ ಗಮನವನ್ನು ಹಕ್ಕು ಮತ್ತು ಸ್ವಾತಂತ್ರ್ಯದ ಕಡೆಗೆ ತಿರುಗಿಸಲು ಪ್ರಯತ್ನಿಸಿದೆ. ನನ್ನ ಧ್ವನಿ ಅವರಿಗೆ ಭಿನ್ನವಾಗಿ ಯೋಚಿಸಲು ಪ್ರೇರೇಪಿಸಿದೆ.

ನಿರೀಕ್ಷಿಸಿದಂತೆಯೇ ಇದರಿಂದ ಧಾರ್ಮಿಕ ಮೂಲಭೂತವಾದಿಗಳು ಕುಪಿತರಾದರು. ಹೆಣ್ಣಿನ ಹಿತಾಸಕ್ತಿಗೆ ವಿರುದ್ಧವಾಗಿರುವ ಧಾರ್ಮಿಕ ಕಾಯಿದೆಯ ಬದಲಿಗೆ ಏಕರೂಪ ನಾಗರಿಕ ಸಂಹಿತೆಯಂತಹ ಸೆಕ್ಯುಲರ್ ಕಾಯಿದೆ ಜಾರಿಗೆ ಬರಬೇಕಾದ ಅಗತ್ಯವಿದೆ ಎಂದು ಬರೆದೆ. ಕೆಲವೇ ದಿನಗಳಲ್ಲಿ ಸಾವಿರಾರು ಮಂದಿ ಅತಿವಾದಿಗಳು ರಸ್ತೆಯಲ್ಲಿ ಜಮಾಯಿಸಿ, ಮೆರವಣಿಗೆ ತೆಗೆದು ನನ್ನನ್ನು ನೇಣಿಗೇರಿಸಬೇಕೆಂದು ಆಗ್ರಹಿಸಿದರು. ನನ್ನ ತಲೆಗೆ ಬೆಲೆಯನ್ನು ನಿಗದಿಪಡಿಸಿ ಫತ್ವಾ ಹೊರಡಿಸಲಾಯಿತು. ಸರ್ಕಾರ ಇಂತಹ ಮೂಲಭೂತವಾದಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ನನ್ನ ಮೇಲೆ ಕ್ರಮ ತೆಗೆದುಕೊಂಡಿತು. ನಾನು ಧರ್ಮಕ್ಕೆ ಅಪಚಾರ ಮಾಡಿದ್ದೇನೆ ಎಂದು ಬೊಬ್ಬೆ ಹೊಡೆಯಲಾಯಿತು. ನನ್ನನ್ನು ಬಂಧಿಸಲು ವಾರೆಂಟ್ ಹೊರಡಿಸಲಾಯಿತು. ನಾನು ಭೂಗತಳಾಗದೇ ವಿಧಿಯಿರಲಿಲ್ಲ, 1994 ರಲ್ಲಿ ದೇಶವನ್ನೇ ತೊರೆಯಬೇಕಾಯಿತು. ಅಂದಿನಿಂದಲೂ ಹಲವಾರು ಬಾರಿ ನನ್ನ ತಾಯ್ನೆಲಕ್ಕೆ ಮರಳಲು ಪ್ರಯತ್ನಿಸಿದ್ದೇನೆ. ಆದರೆ ಸಾಧ್ಯವಾಗಿಲ್ಲ, ನಾನು ಹುಟ್ಟಿ ಬೆಳೆದ ನೆಲದಲ್ಲಿ ಬದುಕುವ ಹಕ್ಕನ್ನು ಕಿತ್ತುಕೊಂಡದ್ದರಿಂದ ಪಶ್ಚಿಮ ಯುರೋಪಿಗೆ ಹೋಗಿ ಪರಕೀಯಳಂತೆ ಬದುಕಬೇಕಾಯಿತು. ತನ್ನ ನೆಲದಲ್ಲಿ ಪರಕೀಯಳಾಗಿ, ಪಶ್ಚಿಮದಲ್ಲಿಯೂ ಪರಕೀಯಳಾದ ಆ ಅಸಹಾಯಕ ಭಾವವನ್ನು ವರ್ಣಿಸುವುದು ಹೇಗೆ?

ನನಗಿರುವ ಒಂದೇ ಭರವಸೆಯೆಂದರೆ ಪಶ್ಚಿಮ ಬಂಗಾಲ. ಎರಡು ಬಂಗಾಲಗಳು ಭಿನ್ನವೆಂದು ನನಗನ್ನಿಸಿಲ್ಲ, ನಾನು ಹುಟ್ಟಿಗುಂತೂ ಅದು ಪ್ರತ್ಯೇಕವಲ್ಲ, ನನ್ನ ತಂದೆ ತಾಯಂದಿರು ಹುಟ್ಟಿದ್ದು ವಿಭಜನೆಯಾಗದ ಭಾರತದಲ್ಲಿ, ನಾನು ಹುಟ್ಟುವ ಹೊತ್ತಿಗೆ ವಿಭಜನೆಯಾಗಿದ್ದರೂ ಸಹ ವಿಭಜಿಸಿದ ನೋವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಸುಮಾರು ಒಂದು ದಶಕದ ಹಿಂದೆ ನಾನು

"ಪರದೆ ಹರಿದು ತುಂಡರಿಸಲು ಭಾರತವೇನು ಕಾಗದದ ಚೂರೆ? 1971 ರಲ್ಲಿ ಹೋರಾಡಿದವರಿಗೆಲ್ಲ ಮುಸ್ಲಿಮ್ ಏಕತೆಯೆನ್ನುವುದು ಒಂದು ಮಿಥ್ಯೆ, ಎರಡು-ರಾಷ್ಟ್ರಗಳ ಸಿದ್ಧಾಂತವೆನ್ನುವುದು ಒಂದು ಭ್ರಮೆ ಎನ್ನುವುದು ಹೊಳೆದಿತ್ತು" ಎಂದು ಬರೆದಿದ್ದೆ. ಅಷ್ಟೇ ಅಲ್ಲ, "ಸಹಾಯಕ್ಕಾಗಿ ಪರಸ್ಪರ ನಾವಿಬ್ಬರೂ ಕೈ ಚಾಚುತ್ತಲೇ ಇದ್ದೇವೆ. ನಮ್ಮ ನಡುವೆ ಪೆಡಂಭೂತವಾಗಿ ನಿಂತಿರುವುದು ಧಾರ್ಮಿಕ ಅಡ್ಡಗೋಡೆ" ಎಂದೂ ಬರೆದಿದ್ದೆ. ಇದನ್ನೋದಿದ ಜನ ನನ್ನನ್ನು ಬಾಂಗ್ಲಾದೇಶದ ದ್ರೋಹಿ ಎಂದು ಕರೆದರು.

ಮುಗ್ಧ ಜನರ ಹತ್ಯೆ ನನ್ನ ಮೊದಲ ಡಾಕ್ಯುಮೆಂಟರಿ ಕಾದಂಬರಿ ಲಜ್ಜಾವನ್ನು ಬರೆಯಲು ಪ್ರೇರೇಪಿಸಿತು. ಹಿಂದೂಗಳ ದಮನದ ಬಗ್ಗೆ ದನಿಯೆತ್ತಿದಾಗ ನಾನು ಹಿಂದೂ ಮೂಲಭೂತವಾದಿಗಳ ಕೈಗೊಂಬೆ ಎಂದು ಜರೆದರು. ಭಾರತದ ಪ್ರತಿಷ್ಠಿತ ಸಾಹಿತ್ಯಕ ಪ್ರಶಸ್ತಿಯೊಂದನ್ನು ನಾನು ಪಡೆದುಕೊಂಡಾಗ ಬಾಂಗ್ಲಾದೇಶದ ಸಾಹಿತ್ಯಕ ವಲಯಗಳು ನನಗೆ ಬಹಿಷ್ಕಾರವನ್ನು ಘೋಷಿಸಿದವು. ನಾನೊಬ್ಬ RAW ಏಜೆಂಟಳೆಂಬ ಪಟ್ಟವನ್ನೂ ಕಟ್ಟಿದರು. ನನಗೆ ಆಗ RAW ಎಂದರೇನು ಎಂದೂ ಸಹ ಗೊತ್ತಿರಲಿಲ್ಲ!

ಬರೆಯಲು ಪ್ರಾರಂಭ ಮಾಡಿದಾಗಿನಿಂದಲೂ ನನ್ನ ಚಾರಿತ್ರ್ಯ ವಧೆಯನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಹೆಣ್ಣಿನ ಸ್ವಾತಂತ್ರ್ಯದ ಹಾದಿಯಲ್ಲಿ ಇರುವ ಒಂದು ಮಹಾ ಅಡ್ಡಗಾಲೆಂದರೆ ಧರ್ಮವೇ. ಇದನ್ನು ಹೇಳಿದ ತಕ್ಷಣವೇ ಮೂಲಭೂತವಾದಿಗಳ ಮುಷ್ಟಿಯಲ್ಲಿ ನಾನು ಸಿಲುಕಿಕೊಂಡೆ. ಅತಿವಾದಿಗಳು ಮೊದಲಿನಿಂದಲೂ ನನ್ನ ವಿರುದ್ಧವಾಗಿದ್ದರು. ಆದರೆ ಬರಬರುತ್ತಾ ಸೌಮ್ಯವಾದಿಗಳೆಂದು ಕರೆಯಬಹುದಾದ ಮುಸ್ಲಿಮರು ಸಹ ನನ್ನ ಶತ್ರುಗಳಾಗಿದ್ದರು. ತಾಯ್ನೆಲವನ್ನು ತೊರೆಯಬೇಕಾಗಿ ಬಂದಾಗ ಒಂದಲ್ಲ ಒಂದು ದಿನ ಪರಿಸ್ಥಿತಿ ಸುಧಾರಿಸುತ್ತದೆ, ಒಂದಲ್ಲ ಒಂದು ದಿನ ನಾನು ನನ್ನ ನೆಲಕ್ಕೆ ಹಿಂತಿರುಗುತ್ತೇನೆ ಎಂಬ ಭರವಸೆ ನನ್ನಲ್ಲಿತ್ತು, ಆದರೆ ಅದಕ್ಕಿಂತ ಹೆಚ್ಚಿನ ತಪ್ಪುಕಲ್ಪನೆ ಇರಲು ಸಾಧ್ಯವಿಲ್ಲ ಎಂದು ನನಗೆ ಅರಿವಾಗಿದೆ.

ಕಳೆದ ಹನ್ನೆರಡು ವರ್ಷಗಳಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬಂದರೂ ನನ್ನ ಮಟ್ಟಿಗೆ ಪರಿಸ್ಥಿತಿ ಬದಲಾಯಿಸಿಲ್ಲ, ನನ್ನ ತಾಯ್ನೆಲಕ್ಕೆ ಹಿಂತಿರುಗಲು ನನಗೆ ಅನುಮತಿಯನ್ನು ನಿರಾಕರಿಸಲಾಗಿದೆ. ಎಲ್ಲ ರಾಜಕೀಯ ಪಕ್ಷಗಳಿಗೂ ಇದ್ದದ್ದು ಒಂದೇ ಕಾಳಜಿ. ನನ್ನನ್ನೇನಾದರೂ ಮರಳಿ ಬರಲು ಬಿಟ್ಟರೆ

ತಮಗೆ ಧರ್ಮ-ವಿರೋಧಿಗಳು ಎಂಬ ಪಟ್ಟ ಸಿಕ್ಕಿ ವೋಟುಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಪಶ್ಚಿಮ ಯುರೋಪ್ ನನಗೆ ಆಶ್ರಯ ಕೊಡಲೊಪ್ಪಿದೆ. ಅದು ನನಗೆ ಕೆಲಮಟ್ಟಿಗಿನ ಭದ್ರತೆ ಒದಗಿಸಿದರೂ ಸಹ ಅದು ನನ್ನ ತಾಯ್ನೆಲವಲ್ಲ. ಮತ್ತೆ ಮತ್ತೆ ಬಾಂಗ್ಲಾದೇಶಕ್ಕೆ ಮರಳಿ ಬರಲು ಪ್ರಯತ್ನಿಸಿದೆ. ಮತ್ತೆ ಮತ್ತೆ ನಿರಾಸೆಯ ಪ್ರಪಾತಕ್ಕೆ ಬಿದ್ದೆ. ಆಗ ನನಗೆ ಹೊಳೆದದ್ದು ಪರ್ಯಾಯ ಬಂಗಾಲ. ಪೂರ್ವ ಬಂಗಾಲ ನನ್ನ ಮಟ್ಟಿಗೆ ಮುಚ್ಚಿದರೆ, ಪಶ್ಚಿಮ ಬಂಗಾಲ, ಕೊಲ್ಕತ್ತಾ ಸಹ ಹೆಚ್ಚುಕಡಿಮೆ ನನ್ನ ಮನೆಯೇ ತಾನೆ? ಆದರೆ ಅದೂ ಸುಲಭವಾಗಿರಲಿಲ್ಲ, 1994 ರಿಂದ 1999 ರ ನಡುವಿನ ಆರು ವರ್ಷಗಳ ಕಾಲ ನನ್ನ ಮಟ್ಟಿಗೆ ಭಾರತದ ಬಾಗಿಲು ಮುಚ್ಚಿತ್ತು.

ಅದೇ ಪರಿಭಾಷೆಯಲ್ಲಿಯೇ ಹೇಳುವುದಾದರೆ, ಮುಚ್ಚಿದ ಬಾಗಿಲುಗಳು ತೆರೆದದ್ದು ನವಂಬರ್ 99 ರಲ್ಲಿ. ನನಗೆ ಪ್ರವಾಸಿ ವೀಸಾವನ್ನು ಮಾನ್ಯ ಮಾಡಲಾಯಿತು. ಯುರೋಪಿಯನ್ ಪಾಸ್‌ಪೋರ್ಟ್ ಇರುವ ಯಾವುದೇ ಪ್ರವಾಸಿ ಅಲ್ಲಿರುವ ಭಾರತೀಯ ಎಂಬೆಸ್ಸಿಯ ಮೂಲಕ ವೀಸಾವನ್ನು ಪಡೆಯಬಹುದು. ಆದರೆ ನನ್ನ ಪ್ರಕರಣ ವಿಶೇಷವಾದದ್ದಲ್ಲವೆ? ಹಾಗಾಗಿ ನನ್ನ ವೀಸಾದ ಕೋರಿಕೆ ದೆಹಲಿಗೆ ಹೋಗಿ ಕೊನೆಯಿಲ್ಲದ ಷರತ್ತುಗಳೊಂದಿಗೆ ಮಾನ್ಯವಾಗಿ ಬಂತು. ಮೂರು ತಿಂಗಳಿಗೆ ಕೋರಿದ್ದ ವೀಸಾವನ್ನು ಬಹುಶಃ ಮೂರು ದಿನಗಳ ಮಟ್ಟಿಗೆ ಇಳಿಸಲಾಗಿತ್ತು ಅಂತನ್ನಿಸುತ್ತದೆ. ಕೆಲವು ಸಲದ ಭೇಟಿಯ ನಂತರ ಇಲ್ಲಿ ಹೆಚ್ಚು ಕಾಲ ತಂಗಬಹುದಾದ ಸಾಧ್ಯತೆಯನ್ನು ಅರಸಿದೆ. ಪೌರತ್ವ ಇಲ್ಲದಿದ್ದರೆ ವಾಸಿಸಲು ಅನುಮತಿಯಾದರೂ ಸಿಗಬಹುದೆ ಎಂದು ಬಯಸಿದೆ.

ನಾನು ಕೇಳಿದ್ದು ಅಸಾಧುವೆ? ನಾನು ಯಾರ ಉದ್ಯೋಗವನ್ನೂ ಕಸಿದುಕೊಳ್ಳುತ್ತಿಲ್ಲ, ಬರಹಗಾರ್ತಿಯಾಗಿ ಬದುಕಲು ನನಗೆ ಅವಕಾಶವನ್ನು ಮಾತ್ರ ಕೇಳಿಕೊಳ್ಳುತ್ತಿದ್ದೇನೆ. ಒಬ್ಬ ಬರಹಗಾರ್ತಿಯಾಗಿ ನನ್ನ ಭಾಷೆ, ನನ್ನ ಸಂಸ್ಕೃತಿಯನ್ನು ಹಂಚಿಕೊಳ್ಳುವವರ ನಡುವೆ ನಾನು ಬದುಕಲಿಚ್ಛಿಸುತ್ತೇನೆ. ಅದೊಂದು ಅಪರಾಧವೆ? ಪಶ್ಚಿಮ ಯುರೋಪ್ ನನ್ನ ಜೀವವುಳಿಸಿದೆ. ಭಾರತ ನನ್ನ ಬರಹ ಜೀವನವನ್ನು ರಕ್ಷಿಸುತ್ತದೆ ಎಂಬ ಆಶಯ ನನ್ನದು. ಪರದೇಶದಲ್ಲೆಲ್ಲೋ ಇದ್ದುಕೊಂಡು ಬರೆಯುವವರು ಇದ್ದಾರೆ. ತಮ್ಮ ಭಾಷೆಯನ್ನೇ ಮಾತಾಡದವರ ನಡುವೆಯೂ ಬದುಕಿ ಬರೆಯುತ್ತಾರೆ. ಅದು ನನ್ನ ಕೈಲಿ ಸಾಧ್ಯವಿಲ್ಲ, ಸ್ವ-ಇಚ್ಛೆಯಿಂದಲೇ ತಮ್ಮ ದೇಶ ಬಿಟ್ಟವರಿದ್ದಾರೆ. ನಾನೆಂದೂ ಹಾಗೆ ಬಿಟ್ಟಿಲ್ಲ.

ಒಬ್ಬ ಬರಹಗಾರ್ತಿಯಾಗಿ ನನಗೆ ಭಾರತದ ಆಸರೆ ಹಲವು ಕಾರಣಗಳಿಗಾಗಿ ಬೇಕಾಗಿದೆ. ಯುರೋಪ್ ಮತ್ತು ಅಮೆರಿಕದಲ್ಲಿ ನನಗೆ ಆಶ್ರಯವೇನೋ ಸಿಗುತ್ತದೆ. ಆದರೆ ಭಾಷೆಯಿಂದ, ಸಂಸ್ಕೃತಿಯಿಂದ ನಾನೆಂದೂ ಅಲ್ಲಿ ಪರಕೀಯಳೇ

ಇಲ್ಲಿ ಭಾರತದಲ್ಲಿ ... ಭಾವನೆ ಕಾಡುವುದಿಲ್ಲ, ಇಲ್ಲಿಯ ಜನರೊಂದಿಗೆ ಸುಲಭವಾಗಿ ಬೆರೆತು ಹೋಗಬಲ್ಲೆ ... ಈ ರೀತಿಯ ಕರಗಿಹೋಗುವ ಗುಣ ಅತ್ಯಂತ ಅವಶ್ಯವಾಗಿರುತ್ತದೆ.

ಭಾರತ ದೊಡ್ಡ ದೇಶ. ಚರಿತ್ರೆಯ ಆದಿಯಿಂದಲೂ ಅಸಂಖ್ಯಾತ ಜನ ಇಲ್ಲಿ ಬಂದು ಈ ನಾಡನ್ನು ಹೊಕ್ಕಿದ್ದಾರೆ. ಕೆಲವರು ಬಂದು ತೆರಳಿದ್ದಾರೆ. ಉಳಿದವರು ಇಲ್ಲಿಯೇ ಬಲವಾಗಿ ಬೇರೂರಿದ್ದಾರೆ. ಭಾರತ ಹಲವಾರು ಭಾಷೆ, ಸಮುದಾಯ, ಧರ್ಮ, ಅಭಿಪ್ರಾಯ, ಸಂಸ್ಕೃತಿಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಅದರ ಬಾಗಿಲು ಹೊರಗಿನವರಿಗೆ ಸದಾ ತೆರೆದಿತ್ತು, ನೂರಾರು ಭಾಷೆ, ಸಂಸ್ಕೃತಿಗಳನ್ನು ಉದಾರತನದಿಂದ ತನ್ನೊಳಗೆ ಸೇರಿಸಿಕೊಂಡಿರುವ ಭಾರತದಲ್ಲಿ ನನಗೆ ಸ್ಥಳವಿಲ್ಲವೆ?

ನನಗೆ ರಾಜಕೀಯ ಆಶ್ರಯ ಕೊಡಿ ಎಂದು ನಾನು ಭಾರತವನ್ನು ಯಾವತ್ತೂ ಕೇಳಿಲ್ಲ, ನನಗಿಲ್ಲಿ ಬದುಕಲು ಅನುಮತಿ ಬೇಕು. ನಾನೆಲ್ಲೋ ಯಾವುದೋ ದೇಶದಲ್ಲಿ ಉಸಿರೆಳೆಯುತ್ತಾ ಬದುಕಿರಬಹುದು. ಆದರೆ ನನ್ನ ಮನಸ್ಸೆಲ್ಲವೂ ಬಂಗಾಲದಲ್ಲಿ, ಇಲ್ಲಿ ಬದುಕುವ ನನ್ನ ಇಚ್ಛೆಯನ್ನು ರಾಜಕೀಯದ ಪಾತಳಿಯಲ್ಲಿಟ್ಟು ನೋಡುವುದಾದರೂ ಯಾಕೆ? ಕೆಲವರು ಭಾರತ ನನಗೆ ವಾಸಿಸಲು ಅನುಮತಿಯೇನಾದರೂ ಇತ್ತರೆ ಬಾಂಗ್ಲಾದೇಶದ ಸಂಬಂಧಕ್ಕೆ ಧಕ್ಕೆ ಬರಬಹುದು ಎಂದು ವಾದಿಸಿದ್ದಾರೆ. ನಾನೇನೋ ಕ್ರಿಮಿನಲ್ ಎಂಬಂತೆ. ತಾಯ್ನೆಲದಲ್ಲಿ ನನಗೆ ಶಿಕ್ಷೆಯಾಗಬೇಕು ಎಂಬಂತೆ. ಭಾರತ ಆ ಕ್ರಿಮಿನಲ್‌ಗೆ ಆಶ್ರಯ ಕೊಡುವುದು ತಪ್ಪು ಎಂಬಂತೆ. ಸತ್ಯವೆಂದರೆ ಬಾಂಗ್ಲಾದೇಶಕ್ಕೆ ನಾನು ಬೇಕಾಗಿಯೇ ಇಲ್ಲ. ಭಾರತ ನನಗೆ ನೆಲೆಯಿತ್ತರೆ ಬಾಂಗ್ಲಾದೇಶಕ್ಕೆ ಅದರಿಂದ ಏನೂ ಆಗಬೇಕಿಲ್ಲ. ನಾನು ಯುರೋಪ್ ಅಥವಾ ಅಮೆರಿಕದಲ್ಲಿದ್ದರೆ ಬಾಂಗ್ಲಾದೇಶದೊಂದಿಗಿನ ಅವುಗಳ ಸಂಬಂಧಕ್ಕೆ ಧಕ್ಕೆ ಬರುತ್ತೇನು? ಭಾರತ ನನಗೆ ನೆಲೆಯಿತ್ತಲ್ಲಿ ಬಾಂಗ್ಲಾದೇಶ ಸಮಾಧಾನದ ನಿಟ್ಟುಸಿರು ಬಿಡುತ್ತದೆ ಎಂದೇ ನನ್ನ ಭಾವನೆ. ಅಮ್ಮನೊಂದಿಗೆ ಜಗಳವಾಡಿದಾಗ ದೊಡ್ಡಮ್ಮನ ಮನೆಗೆ ಹೋದಂತೆ.

ಆ ದಿನಗಳಲ್ಲಿ ಪಶ್ಚಿಮದ ಲೇಖಕರು ನನ್ನ ಜೀವವನ್ನು ಉಳಿಸಲು ಸಂಘಟಿತರಾದದ್ದನ್ನು ಹೇಗೆ ಮರೆಯಲಿ? ಅವರ ಸರ್ಕಾರಗಳ ಮೇಲೆ ಒತ್ತಡ ತರುವುದಷ್ಟೇ ಅಲ್ಲ, ಬರಹಗಾರ್ತಿಯೊಬ್ಬಳು ನಶಿಸಿ ಹೋಗುವುದನ್ನು ತಡೆಯುವಂತೆ ಯುರೋಪಿಯನ್ ಯೂನಿಯನ್‌ಗೂ ಸಹ ಮನವಿ ಮಾಡಿಕೊಂಡಿದ್ದರು. ನಾನು ನೇಣಿನಿಂದ ಪಾರಾಗಿದ್ದದ್ದು ಈ ಲೇಖಕರು ಪಶ್ಚಿಮದ ಸರ್ಕಾರಗಳ ಮೇಲೆ ತಂದ ಒತ್ತಡದ ಪರಿಣಾಮವಾಗಿಯೇ ಎಂಬುದನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ತದನಂತರ ನಾರ್ವೆ, ಸ್ವೀಡನ್, ಜರ್ಮನಿ ಎಲ್ಲೆಲ್ಲಿಂದಲೂ ನನಗೆ ಆಮಂತ್ರಣಗಳು ಬಂದವು. ನನಗೆ ವಾಸಿಸಲು ಅವಕಾಶ ಕಲ್ಪಿಸಿಕೊಟ್ಟರೆ ಅಥವಾ ಪೌರತ್ವವನ್ನು ನೀಡಿದರೆ ಅವರ ಪ್ರಸಿದ್ಧಿಯೂ ಏರುತ್ತಿತ್ತು, ಹಾಗಾಗಿಯೇ ಅದೊಂದು ಪ್ರತಿಷ್ಠೆಯ ವಿಷಯವೂ ಆಗಿಬಿಟ್ಟಿತು.

ನಾನು ಪಶ್ಚಿಮ ಬಂಗಾಲದಲ್ಲಿ ವಾಸಿಸಬಹುದೋ, ಇಲ್ಲವೋ ಎಂದು ಯಾರು ನಿರ್ಧರಿಸುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಮುಸ್ಲಿಮರನ್ನು ಓಲೈಸಲೆಂದೇ ಸರ್ಕಾರ ಹಾಗೆ ಮಾಡುತ್ತದೆ ಎಂದು ಕೆಲವರು ಹೇಳುತ್ತಾರೆ. ಭಯಕ್ಕೋ, ಅಸೂಯೆಗೋ ಇಲ್ಲಿಯ ಚಿಂತಕರೇ ಹಿಂದೇಟು ಹಾಕುತ್ತಿದ್ದಾರೆ ಎಂದು ಇನ್ನೂ ಕೆಲವರು ಹೇಳುತ್ತಾರೆ. ಬಾಂಗ್ಲಾದೇಶಕ್ಕೆ ನನ್ನ ಬಗ್ಗೆ ಪ್ರೀತಿಯಿದೆಯೆ? ಹೌದು, ಇತ್ತು, ಅನ್ನಾದಶಂಕರ್ ರಾಯ್ ಎಂಬ ಒಬ್ಬ ಪ್ರಖ್ಯಾತ ಸ್ವಾತಂತ್ರ್ಯ ಪ್ರೇಮಿ ಚಿಂತಕರೊಬ್ಬರು "ಬಾಂಗ್ಲಾದೇಶ ತಸ್ಲೀಮಾಳ ತಾಯಿ, ಪಶ್ಚಿಮ ಬಂಗಾಲ ಅವಳ ದೊಡ್ಡಮ್ಮ" ಎಂದು ಹೇಳಿದ್ದರು. ಹೆಣ್ಣಿನ ಹಕ್ಕುಗಳ ಬಗ್ಗೆ ಮಾತಾಡಿದಾಗ ಬಾಂಗ್ಲಾದೇಶದಿಂದ ನಾನು ಒದೆತವನ್ನು ತಿನ್ನಬೇಕಾಯಿತು. ಪಶ್ಚಿಮ ಬಂಗಾಲದಿಂದ ಸಾಂತ್ವನವನ್ನು ಪಡೆಯಬೇಕಾಯಿತು. ಒದೆಯುವುದು, ಸಂತೈಸುವುದು ದೇಶವಲ್ಲ, ... ಜನರು. ವೈಚಾರಿಕವಾಗಿ ಯೋಚಿಸುವ ಸೆಕ್ಯುಲರ್ ಮನೋಭಾವದ ಜನ ಖಂಡಿತವಾಗಿ ಬಾಂಗ್ಲಾದೇಶಕ್ಕಿಂತ ಇಲ್ಲಿ ಹೆಚ್ಚು.

ಮತ್ತೆ ಮತ್ತೆ ಹೊರಹಾಕಿದರೂ ನಾನು ಮರಳಿ ... [illegible]

■ ಕನ್ನಡಕ್ಕೆ : ಸುಕನ್ಯಾ ...

ದ್ಯಾವೇಗೌಡ ಇರಗಂಟ ದಳ ವಡಿತನೇ ಇರ್ತದೆ

ಕಟ್ಟೆಪುರಾಣ
ಬಿ. ಚಂದ್ರೇಗೌಡ

ಕಾಳಮಾವ ದನಗಳ ಜಾತ್ರೆ ಸುದ್ದಿ ಮಾತನಾಡುತ್ತ ಕುಳಿತಿದ್ದ. ಈಗ ಅವನಿಗೆ ಸಿಕ್ಕಿದ ಜಾತ್ರೆಯೆಂದರೆ ಚೊಟಗುನ್ನಿ ಜಾತ್ರೆ. ಆದಿಚುಂಚನಗಿರಿ ಹತ್ತಿರ ನಡೆಯುವ ಈ ಜಾತ್ರೆಯು ಆ ಪ್ರಾಂತ್ಯದ ಎಲ್ಲಾ ಜಾತ್ರೆಗಿಂತಲೂ ಮೊದಲೇ ನಡೆಯುವುದರಿಂದ ಇದೊಂದು ಕೊರೆ ಗಾಲದ ಜಾತ್ರೆ. ಈ ಬಾರಿಯ ಚಳಿ ಅವನನ್ನು ಹೆದರಿಸಿ ಓಡಿಸಿತ್ತು.

"ಇಂಥ ಸಳಿಯ ನಾನ್ಯಾವಾಗ್ಲು ನೋಡಿರಲಿಲ್ಲ ಬುಡು. ಯರಡೇ ದಿನಕೆ ಜಾತ್ರಿಂದ ಓಡಿಬರಂಗಾಯ್ತು" ಎಂದ.

"ನೀನ್ಯಾಕೆ ಜಾತ್ರಿಗೋಗಿದ್ಯೊ ಮಾವ?" ಎಂದಳು ಜುಮ್ಮಿ.

"ಏ ನನ್ನಿರಿ ಹುಡುಗುಂತ ಒಂದು ಗುಳ್ಳೆ ಕರಿತ್ತು ಕಂಡ್ಯ. ಅದರ ಜ್ವತಿಗೆ ಕರ ಹಾಕಬೇಕು ಅಂದ್ರೆ ಆರು ಸವುರುಪಾಯಿಬೇಕು. ಅದಕ್ಕಿಂತ ಇದ್ನೆ ಮಾರಿಬುಟ್ರೆಂಗೆ ಅಂತ ವಡಕಂಡೋಗಿದ್ನೊ. ಆ ಸಳಿಗೆ ಜಾತ್ರೆ ಯರಡೇ ದಿನಕೆ ಕಿತ್ಕೊಯ್ತು ಹೋಗತ್ತಗೆ."

"ಆಟೊಂತರ ಸಳಿಯಾಯ್ತು ಅನ್ನು?"

"ಸಳಿ ಅಂದ್ರೆ ಅಂಗಿಂಗಲ್ಲ. ಕೈಳಗಲ ಕಟಬಾಯಿ ವದಿರೋದ್ನು, ಜನಗಳ್ಕಲ್ಲ ತಬಲ ಬಡಿಯೋರಂಗೆ ವದರತಿದ್ರು. ಏಟು ಬೀಡಿ ಸೇದಿದ್ರೂ ಯಿಲ್ಲ ಏಟು ಕಾಫಿ ಕುಡುದ್ರು ಯಿಲ್ಲ, ಅದ್ಕೆ ಯರಡೇ ದಿನಕೆ ಜಾತ್ರಿಗೆ ಬಂದೋರ್ಕಲ್ಲ ಓಡುತಿದ್ರು."

"ಅಂಗರೆ ನೀನು ಕರಮಾರಲಿಲ್ಲ ಅನ್ನು?"

"ಮಾರಿದೆ ಕಂಡ್ಯ, ಜಾತ್ರೆ ನ್ಯಡದಿದ್ರೆ ಇನ್ನು ಒಂದುವರ ಸಾವುರ ಸಿಗದು. ಕರಿನ ಹುಟ್ಯಾಣ ಕೆನೆ ಅಂಗಿತ್ತು."

"ಮದ್ದಿನ ಜಾತ್ರೆ ಬರಾಬರಿ ಒಂದು ವಾರ ನ್ಯಡಿಯುದು" ಎಂದ ಉಗ್ರಿ.

"ಏ ಹದ್ನೈದ್ದಿನ ನ್ಯಡಿಯುದು ಕಂಡ್ಯ. ಆಗಿನ ಜಾತ್ರೆ ವೈಭೋಗ ಏನ್ಯೇಳೀ. ಮಿಲಿಟ್ರಿ ಹೋಟ್ಲು ಬರವು, ಸಿನುಮಾ ಟಾಕೀಸ್ ಬರವು, ಪಾತ್ರೆ ಅಂಗಡಿ ಸಾಲು ಮಿಠಾಯಿದಂಗಡಿ ಸಾಲು, ಈ ಸೀಮಿನಾಡಲ್ಲಿ ಏನೇನು ಮಾರ್ತರೊ ಅವುರ್ಕಲ್ಲ ಬರೋರು ಕಂಡ್ಯ."

"ನಾಟಗ ಆಡೋರು ಬರೋರಂತೆ?"

"ಏ ಹಾಸನದ ದನಿನ ಜಾತ್ರಿಗೆ ವರ್ಸ ವರ್ಸ ರಾಜಕುಮಾರ ಕಾಯಮ್ಮಾಗಿ ಬರೋನು. ಅವುನೂ ನರಸುಮ್ಮರಾಜ ಇವುರ್ಕಲ್ಲ ಬರೋರು. ಸಿನುಮುದ ಕಡಿಕೆ ಹೋದಮ್ಯಾಲೆ ಬರದು ಬುಟ್ರು."

"ಕಾಲ ಬದ್ಲಾಯ್ತಾಯಿರದ ನೋಡಿದ್ರೆ ದನಿನ ಜಾತ್ರೆನೆ ನಿಂತೋಗಬವುದೇನಪ್ಪ."

"ದೇಸದ ಮ್ಯಾಲೆ ದನ ಕಡಿಮಾಯ್ತ ಅವೆ. ಇನ್ನೆಲ್ಲಿ ಜಾತ್ರಿ ನ್ಯಡದತೂ?"

"ಅವುನ್ಯಾರೊ ರಾಮಚಂದ್ರಪುರದ ಸ್ವಾಮಿ ದನಿನ ಜಾತ್ರೆ ಮಾಡ್ತನಂತೆ?" ಎಂದ ಸೀರ.

"ಏ ಅವುನಿಗೂ ದನಿಗೂ ಯಾವ ಸಮಂದ ಇದ್ದತೊ ಮಾವ? ಅವನಿಗೆ ದನಿನ ಕುಲಗೊತ್ತಿಲ್ಲ ನಡವಳಕೆ ಗೊತ್ತಿಲ್ಲ, ಏನು ಬ್ಯಾಡ, ಪರಕಸುಳಿ ಎಲ್ಲದೆ ಅಂತ ಕೇಳವುನ್ನ, ಅಂಗಂದ್ರೇನು ಅಂತನೆ. ಅವುನ್ನಂಥೋ ನಪ್ಪ ಅಂದ್ರೆ ಈ ಹಕ್ಕಪಿಕ್ಕ ದನ ಸಾಕ್ಕವುರೆ ಯಾಕೇಳು?"

"ಹಕ್ಕಿ ಹಿಡಿಯಕ್ಕೆ."


"ಅಗೊ ಅಂಥೊನಿವುನು. ದನ ತೋರಿ ಕಾಸು ಮಾಡೋ ಅಂಥೋನು. ಅವುನತ್ರ ಇರವ್ಕಲ್ಲ ಕೋಡುಮುರುಕ ಮೋಟು ಬಗ್ರಿ, ನಾಯಿಬಣ್ಣದ ಹೀನ ಸುಳಿ ದನ."

"ಅಂಗಂತಿಯಾ?"

"ಊ ಕಣ ಮಾವ. ಅವುನ ದನಿನ ಪ್ರೀತಿಲಿ ಸಾಬರ ಮ್ಯಾಗಲ ಸಿಟ್ನು ಆದಂತೆ."

"ಸಾಬರು ನಾವು ಮಾರಿದ್ರುಲವೆ ತಗಳದು. ಅವುರೇನು ನಮ್ಮ ಕ್ವಟಗೆ ನುಗ್ಗಿ ದನ ಯಳಕಂಡೋದರೆ?"

"ನೀವು ದನಿನ ಕುಲ ನೋಡಬೇಕು ಅಂದ್ರೆ



ಯಾದುಗಿರಿ ಚುಂಚನಕಟ್ಟೆ ಜಾತ್ರಿಗೋಗಿ ನೋಡಬೇಕು ಕಣ್ಲ. ಇಲ್ಲಿಂದ ವಡಕಂಡೋದ ದನ ಯಾಮಾವತಿ ನದಿ ನೀರು ಕುಡಿತಿದ್ದಂಗೆ ರವೆ ಬಂದುಬುಡತವೆ. ನಾವೊಂದು ಸತಿಯ ಹದ್ದಿನಮರಿಯಂಗಿದ್ದ ಕರ ವಡಕಂಡೋಗಿದ್ನೊ. ಆಗ್ನೆ ಹಸಿಗೆ ಬುಡತಿದ್ನೊ. ಅದ ಇಡೀ ಜಾತ್ರಿಗೆ ಪಸ್ಟ ಪ್ರೈಜ್ ಬತ್ತು. ಅದಕೆ ದ್ಯಾವೇಗೌಡ ಬಂದು ಪ್ರೈಜು ಕೊಟ್ಟ ಪೋಟಾನ್ಕಲ್ಲ ವಡುದ್ರು ಕಂಡ್ಯ."

"ಓ ಅದೇ ಪೋಟಾ ಅನ್ನು ನಿನ್ನ ಮನೆಲಿರದು?" ಎಂದ ಉಗ್ರಿ.

"ಊ ನಮ್ಮುಡುಗ ಕಟ್ಟಾಕ್ಸಿ ಮಡಿಗ್ಯವುನೆ. ಅಂ... ಜಾತ್ರೆ ತಿರಗ ನ್ಯಡದವೆ? ಆ ಕಾಲ ತಿರಗ ಬಂದ... ಏನೊ ಆಯ್ತು ಬುಡು" ಎಂದು ಕಾಳಮಾವ ದ... ತಗ್ಗಿಸಿ ದನಗಳ ಗತ ವೈಭವದ ಜಾತ್ರೆ ನೆನೆಸಿಕೊಂ... ಮಂಕಾದ. ಆಗ ಕಾಣಿಸಿಕೊಂಡ ವಾಟಿಸ್ನೆ

"ಇದ್ಯಾಕ್ ದ್ವಡಪ್ಪ ದ್ಯಾವೇಗೌಡನಂಗೆ ದಲ... ಕುಳಿತಿದ್ದಿ?" ಎಂದ.

"ಅವುನ್ಯಾಕ್ ದಲ್ಲಾಗಿ ಕುಂತಿದ್ದನ್ನ?" ಎಂದ... ಜುಮ್ಮಿ.

"ಅವುನೊಬ್ನೆ ಕುಂತಿಲ್ಲ ಕಣಕ್ಕ. ಅವುನ ಜೊ... ಇದೇ ನಮ್ಮ ಉಗ್ರಿ ತರ ಕುಮಾರಣ್ಣ ಕುಂತವ್ನೆ... ಥೇಟ್ ನಮ್ಮ ಸೀರ ಚಿಗಪ್ಪನಂಗೆ ರೇವಣ್ಣ ಕುತಗಂ... ಕಂಕ್ಸು ಕ್ಯರಿಯದು, ಮೂಗಿಗೆ ಬೆಳ್ಳಾಕದು, ಕಿವಿ ಗು... ತಗಿಯದು ಮಾಡ್ತ ಅವುನೆ. ರಿಯಲಿ ಬ್ಯೂಟಿಪ್ಯು... ಸೀನದು."

"ಎಲ್ಲಿ ಕುಂತಿದ್ರೂ?"

ನಾಯಕರೇ ಇಲ್ಲ, ಖಳನಾಯಕರೇ ಎಲ್ಲ

ಸೆಖತ್ ಖುಷಿಯಾಗಿತ್ತು!

ರಾಜಕಾರಣಿಗಳ ರಂಗುರಂಗಿನ ಆಟದ ಮುಂದೆ ನವರಸನಾಯಕ ಜಗ್ಗೇಶ್ ಅನ್ನೂ ನೀವಳಿಸಿ ಬಿಸಾಕಬೇಕು. ಮಾತಿಗೆ ಪ್ರತಿಮಾತು; ಏಟಿಗೆ ಪ್ರತಿ ಏಟು; ಸುಳ್ಳಿಗೆ ಪ್ರತಿ ಸುಳ್ಳು! ಕೇಳೋಕೆ, ನೋಡೋಕೆ ಒಂದು ಚಂದ. ಪೈಪೋಟಿ ಮೇಲೆ ಮತದಾರ ಮಹಾಪ್ರಭುಗಳಿಗೆ ಬಿಟ್ಟಿ ಮನರಂಜನೆಯನ್ನು ಧುರೀಣರು ನೀಡುತ್ತಿರುವುದು ಸಿನಿಮಾ ಮಂದಿರಗಳ ಮಾಲೀಕರಿಗೆ ತಲೆನೋವು ತಂದು ಅವರೂ ಈ ನಾಟಕ ನೋಡಿ ಆನಂದಿಸುತ್ತಾ ತಮ್ಮ ನೋವನ್ನು ಮರೆಯುತ್ತಿರಬಹುದು!

ಹಿರಿಯ ನಟ ಯಶವಂತ ಸಿನ್ಹ ಅವರ ನಟನೆಯಂತೂ ಅದ್ಭುತವಾಗಿತ್ತು. ಭಾರತೀಯ ಜನತಾ ಪಕ್ಷ ಕಲ್ಲುಬಂಡೆಯಂತೆ ನಿಂತಿತ್ತು, ಜಾತ್ಯತೀತ ಜನತಾದಳವೇ ಬಂದು ನಮ್ಮನ್ನು ತಬ್ಬಿಕೊಂಡಿತು ಎಂದು ಸಾರಿದರು. ಇರಬೇಕು. ಶಾಪಗ್ರಸ್ತರಾಗಿ ಅಧಿಕಾರದಿಂದ ವಂಚಿತರಾಗಿದ್ದ ನಮ್ಮನ್ನು ಕುಮಾರಸ್ವಾಮಿ ವಿಮೋಚನೆ ಗೊಳಿಸಿದರು ಎಂದು ಹಿಂದೆಯೇ ರಾಮಚಂದ್ರ ಗೌಡರು ಕೃತಜ್ಞತೆ ಅರ್ಪಿಸಿದ್ದರು. ಇದನ್ನು ಒಪ್ಪಬಹುದಾದರೂ ತಾವೇ ವಯ್ಯಾರ ಮಾಡುತ್ತಾ ಅವರನ್ನು ಮರುಳು ಮಾಡಿದೆ ಎಂಬುದನ್ನು ಒಪ್ಪಲು ಕುಮಾರಸ್ವಾಮಿ ಸಿದ್ಧರಿರಲಿಲ್ಲ. ತಮ್ಮನ್ನು ತಬ್ಬಿಕೊಂಡದ್ದು ಅವರೇ ಹೊರತು ನಾವಲ್ಲ ಎಂದು ಜಗಜ್ಜಾಹೀರುಪಡಿಸಿದರು. ಅವರನ್ನು ಇವರು ತಬ್ಬಿಕೊಂಡರೋ, ಇವರೇ ಅವರನ್ನು ತಬ್ಬಿಕೊಂಡರೋ ಅನ್ನುವುದಕ್ಕಿಂತ ಕಚ್ಚಾಟದಿಂದ ದೊರೆತ ಆನಂದ ಈರ್ವರಿಗೂ ಮುದ ನೀಡಿತ್ತು! ಈ ತಬ್ಬಾಟದ ಉನ್ಮಾದದ ಕಾಮಕೇಳಿಯಲ್ಲಿ ಹೊರಬಂದ ಸಂತೋಷದ ಮುಲುಕಾಟ ಈಗ ನೋವಿನ ಮುಲುಕಾಟವಾಗಿ ಗೋಚರಿಸುತ್ತಿರುವುದು ಆ ವಿಧಿಯ ಆಟವೇ ಇರಬೇಕು!

ಈ ದುರಂತ ನಾಟಕದ ನಡುವೆಯೇ ವಿದೂಷಕ ನಂತಿರುವ ಹಲ್ಮುಖಿ ಗೌಡರಿಗೂ, ಯಾರೇ ಕೂಗಾಡಲಿ ಊರೇ ಹೋರಾಡಲಿ ಎಮ್ಮೆ ನಿನಗೆ ಸಾಟಿಯಿಲ್ಲ ಎಂಬ ಹಾಡನ್ನು ನೆನಪಿಸುವ ಧರ್ಮಸಿಂಗ್ ಅವರಿಗೂ ನಡೆದ ಸಾತಿನ ಜಟಾಪಟಿಯನ್ನು ಗಮನಿಸೋಣ. ಸನ್ಮಾನ್ಯ ಯಡಿಯೂರಪ್ಪನವರು ತಮ್ಮ ಹಿಂಬಾಲಕರಿಸುವುದಕ್ಕೆ, ಮುನ್ನ



ವಿಧಾನಸೌಧದಲ್ಲಿ ಯಜ್ಞಕುಂಡ ಸ್ಥಾಪಿಸಿದರಲ್ಲ, ಇಂತಹ ಕ್ರಿಯೆಗಳು ಸಂವಿಧಾನ ವಿರೋಧಿ ಎಂದರು ಧರ್ಮಸಿಂಗ್‌ಜಿ. ಅಧಿಕಾರ ನಮ್ಮ ಕೈಲೇ ಇದೆ, ನಾವ್ಯಾರಿಗೆ ಯಾಕೆ ಬೆಲೆ ಕೊಡಬೇಕು ಅನ್ನೋ ಅಹಂನಲ್ಲೇ ಇದ್ದ ಹಲ್ಮುಖಿ ಗೌಡರು 'ಯಜ್ಞ ಹೋಮ ಹವನಗಳಲ್ಲಿ ನಂಬಿಕೆಯಿಲ್ಲದವರು ದೇಶಬಿಟ್ಟು ಹೋಗಲಿ' ಎಂದು ಅಪ್ಪಣೆ ಕೊಡಿಸಿದರು! ತಮ್ಮ ತತ್ವ ಸಿದ್ಧಾಂತಗಳನ್ನು ವಿರೋಧಿಸುವವರನ್ನೆಲ್ಲ ದೇಶದಿಂದ ಹೊರಕ್ಕೆ ಹಾಕಿ ಇಡೀ ದೇಶವನ್ನೇ ವೈದಿಕ ಮಯ ಮಾಡುವ ಹುನ್ನಾರಕ್ಕೆ ಪೂರಕವಾಗಿಯೇ ಇದೆ ಇದೂನು! ಇದಕ್ಕೆ ಪ್ರತಿಕ್ರಿಯೆ ಏನು ಧರ್ಮ ಸಿಂಗ್‌ದು? 'ಅವ ಐವಾನ್ ಇದಾನ್ರಿ, ನಿಮ್ಹಾನ್ಸ್‌ಗೆ ಸೇರಿಸಿ' ಅಂದರು! ಇನ್ನೂ ಯಾರೂ ಇದಕ್ಕೆ ಕೈಹಾಕಿದ ಹಾಗೆ ಇಲ್ಲ, ಯಾಕೆಂದ್ರೆ ಜನಜಾಗೃತಿ ಮಾಡ್ತೀವಿ ಅಂತ ಊರೂರು ಅಲೀತಿದ್ದಾರೆ. ತಮ್ಮ ಮಾತಿಗೆ ಎದುರು ಆಡುವವರೇ ಇಲ್ಲ ಅಂತ ಮೆರೀತಿದ್ದ ಗೌಡರು ಈ ಚಾಟಿ ಏಟಿನಿಂದ ಯಾಕೋ ತಿಗಸುಟ್ಟುಕೊಂಡ ಬೆಕ್ಕಿನಂತಾಗಿದ್ದಾರೆ.

ಹೀಗೆ ಗಜಪತಿಯ ಗರ್ವಭಂಗ ನೋಡಿದ್ದಾಯಿತಲ್ಲ, ಇನ್ನು ಸಾತ್ ದಿನ್ ಕ ಸುಲ್ತಾನ್‌ರ ಕಡೆ ದೃಷ್ಟಿ ಹರಿಸೋಣ.

ಸಂಘ ಪರಿವಾರದ ಒಂದು ಪಡೆ ಇದೆ.

ಏನು ಅದರ ಘನಂದಾರಿ ಕೆಲಸ?

ಪ್ರತಿಭಟನೆ! ಪ್ರತಿಭಟನಾ ಪಡೆ ಇದು.

ಯಾವುದಕ್ಕೆ ಪ್ರತಿಭಟನೆ?

ಯಾವುದಕ್ಕಾದರೂ ಸರಿ! ದಿನದ ಕೂಲಿ ಸಿಕ್ಕಿದರೆ ಪ್ರತಿಭಟನೆಗೆ ರೆಡಿ! ಅಂತಹದ್ದರಲ್ಲಿ ಏಳೇ ದಿನಕ್ಕೆ ಯಡಿಯೂರಪ್ಪ ಎಗರಿ ಹೋದರಲ್ಲ, ಸುಮ್ಮನಿರಲಾದೀತೆ ಪರಿವಾರದ ಪಡೆ? ನಡೆಸಿತು ಪ್ರತಿಭಟನೆ.

ಪ್ರತಿಭಟನೆ ಎಂದರೇನು? ದೇವೇಗೌಡ ವಂಶ ಜಾಲಾಟ!

ಮನೆ ಬಣಗುಡುತ್ತಿದೆ. ಹಿಂಬಾಲಕರ ಸುಳಿವೇ ಇಲ್ಲ, ಏನು ಮಾಡುತ್ತಾರೆ ಯಡ್ಡಿ ಮನೆಯಲ್ಲಿ ಒಬ್ಬರೇ ಕುಳಿತು? ಚೈತ್ರೈಸಿತು ಅವರ ಪಾದ ಪ್ರತಿಭಟನಾ ಸ್ಥಳಕ್ಕೆ, ಯಾರಿಂದಲೂ ಕರೆಬರದೆ! ಭಾಷಣ ಮಾಡಲೆಂದೇ ತಡಕಿಕೊಂಡು ಬಂದವರಲ್ಲವೆ ಅವರು? ಬಿಗಿದರು ಭಾಷಣ. ಹರಿತವಾದ ಮಾತುಗಳಿಂದ ಬೀದಿಗೆಳೆದರು ದೇವೇಗೌಡರ ವಂಶದ ಮಾನ. ಎಂತಹ ಸಂಸ್ಕೃತಿ! ಉಬ್ಬಿದರು ಸಭಿಕರ ಚಪ್ಪಾಳೆ ಶಿಳ್ಳೆಗಳಿಂದ. ಆ ಅಮಲಿನಲ್ಲೇ 'ಕುಮಾರಸ್ವಾಮೀನ ಮುಖ್ಯಮಂತ್ರಿ ಮಾಡಿದ್ದು ಅವರಪ್ಪ ಅಲ್ಲ, ಈ ಯಡಿಯೂರಪ್ಪ' ಎಂದು ಆರ್ಭಟಿಸಿದರು!

ಅಪ್ಪ ಯಡಿಯೂರಪ್ಪ ಪ್ರಾಸ ಪಸಂದಾಗಿದೆ ಅಂತ ಹಾಗಂದಿರಬೇಕು. ಅಲ್ಲ ಆ ಹಲ್ಮುಖಿ ಗೌಡ ನೋಡಿದರೆ 'ಹೋಮ ಹವನದಲ್ಲಿ ನಂಬಿಕೆ ಇಲ್ಲದವರು ದೇಶ ಬಿಟ್ಟು ಹೋಗಿ' ಅಂತಾರೆ; ಈ ಯಡಿಯೂರಪ್ಪ ನೋಡಿದರೆ ಪ್ರಾಸ ಕೂಡಿ ಬಂತು ಅಂತ ಅಪದ್ಧ ನುಡೀತಾರೆ. ಇಂತಹ ಅಪ್ರಬುದ್ಧರ ಕೈಗೆ ಆಡಳಿತ ನೀಡಿದರೆ ಉಳಿದೀತೆ ದೇಶ? ಇರಲಿ. ಇಂತಹ ಅಸಂಗತ ಸಂಗತಿಗಳೇ ನಾಟಕಕ್ಕೆ ಕಳೆ ಕಟ್ಟೋದು. ಕುಮಾರಣ್ಣನವರ ಕಥೆ ಏನು? ಅವರು ಯಡಿಯೂರಪ್ಪನವರ ಮಗ ಆಗಲು ಸಿದ್ಧರಿದ್ದಾರಾ... ಯಾಕೆ ಅಂದರೆ ಅವರೇ ತಾನೇ ಮುಖ್ಯಮಂತ್ರಿ ಮಾಡಿದೋರು. ಬಬ್ರುವಾಹನ ಸಿನಿಮಾದಲ್ಲಿ ಅರ್ಜುನ 'ನೀನು ಜಾರಿಣಿಯ ಮ... ಎಂದು ಹೇಳಿದ ಮಾತುಗಳು ಕಾದ ಸೀಸದಂತೆ ಕಿ... ಬಿದ್ದಾಗ ಮಗ ಕೋಪಾಗ್ನಿ ಸುರಿಸುತ್ತಾನಲ್ಲ ಥೇಟ್ ಅ... ತರಹ ಸುರಿಸಿದರು. 'ತಾನರಿಯನೇ ಇವನ' ಎನ್ನು... ಧಾಟಿಯಲ್ಲೇ ಉತ್ತರಿಸಿದರು. ಅನಂತಕುಮಾ... ಹೇಗಿನಲ್ಲಿದ್ದೀನಿ, ಐದು ಕೋಟಿ ಕೊಡಿ ಬಿಡುಸ್ಕರು... ಬತ್ತೀನಿ ಅಂತ ಬಂದಿತ್ತು ಈ ಮೂದೇವಿ ಅನು... ಅರ್ಥದ ಮಾತನಾಡಿದರು. 'ಮುಖ್ಯಮಂತ್ರಿಯ... ಯಡಿಯೂರಪ್ಪ ನನ್ನನ್ನು ಮಾಡಲಿಲ್ಲ, ನಾನು ಅವರ... ಉಪಮುಖ್ಯಮಂತ್ರಿ ಮಾಡಿದೆ' ಗುಡುಗಿದರು ಕುಮಾರ... . ಇಲ್ಲಿಗೆ ಮುಗಿಯಿತೆ ಯಡ್ಡಿ ಮುಖಕ್ಕೆ ಎ...

ಎಚ್.ಎಲ್. ಕೇಶವಮೂ...

ಮಂಗಳಾರತಿ? ಬಟ್ಟಲ್ಲಿಂದ 'ಸೈಕಲ್‌ಗಳನ್ನು ವಿತರಿಸ... ತಮ್ಮ ಮಗನ ಅಂಗಡಿಗೆ ಪರವಾನಗಿ ಕೊಟ್ಟಿದ್ದಾರೆ. ಬಳಿ ರಶೀದಿ ಇದಾವೆ' ಎಂಬ ಬಾಣ ಬಿಟ್ಟರು. ಒಂದು ವ್ಯವಹಾರದಲ್ಲೇ ಅದೆಷ್ಟೋ ಕೋಟಿ ... ಪಡೆಯಲಾಗಿದೆ ಎಂದು ಸಾರಿದರು. ಯಾವ ಯ... ಬಾಬತ್ತಿನಲ್ಲಿ ಎಷ್ಟೆಷ್ಟು ಕಮಿಷನ್ ಬರ್ತದೆ ... ಅನುಭವದಿಂದ ಅರಿತಿರುವ ರೇವಣ್ಣನವರ ಮಾತ... ಸುಲಭವಾಗಿ ತೆಗೆದುಹಾಕುವ ಹಾಗಿಲ್ಲ!

ಇದಕ್ಕೆ ಯಡ್ಡಿ ಉತ್ತರ ಏನು?

'ಅವ್ಯವಹಾರ ನಡೆಸಿದ್ದರೆ ನನ್ನ ವಂಶ ನಿರ್ವಂಶ ಆಗ...

ನಮ್ಮ ವಂಶಾನೆ ಹಾಳು ಮಾಡಕ್ಕೆ ಸಿದ್ಧ ಇದಾ... ಈ ಮುದಿ ಗೂಬೆ ಅಂತ ಅವರ ಮಕ್ಕಳು ಮರಿ ... ಹಾಕುತ್ತಿರಬಹುದು! ಅವರಿಗೆ ನಮ್ಮ ಸಮಾಧಾನ ... ನಿಮ್ಮ ವಂಶದ ಹಿರೀಕ ಹೋದ ಹೋದ ಸಭೆಯಲ್ಲಿ... ನೀವು ಪೂಜೆ ಮಾಡುವಾಗ ಈ ದೇವೇಗೌಡನ ವ... ನಿರ್ವಂಶ ಆಗಲಿ ಅಂತ ಬೇಡಿಕೊಳ್ಳಿ ಅಂತಾರೆ. ಕೆಲ... ಹಾಗೆ ಮಾಡಿರಲೂಬಹುದು. ಹಾಗೆ ಆಗಿವೆಯೇ? ಇ... ಮಾತುಗಳು ಮಾಂತ್ರಿಕತೆ ಕಳೆದುಕೊಂಡಿದಾವೆ.

"ಇನ್ನೆಲ್ಲಿ ಕುಂತಗತ್ತರಪ್ಪ? ಪದ್ಮನಾಭನಗರದ ಮನೆಲಿ ಕುಂತವ್ರೆ."

"ಅದ್ಯಾಕಂಗೆ ಕುಂತಿದ್ರು. ಅವುರಿಗೇನಾಗಿತ್ತು?"

"ಹತ್ತೊಂಬತ್ತು ತಿಂಗಳು ಇರಬೇಕಾದ ಸರ್ಕಾರವ ದ್ಯಾವೇಗೌಡ ಕೆಡಿಗಿದೇಟಿಗೆ ಹತ್ತೊಂಬತ್ತು ಜನ ಜೆಡಿಎಸ್ ಎಮ್ಮೆಲ್ಲೆಗಳು ದ್ಯಾವೇಗೌಡನಿಗೆ ದೊಡ್ಡ ನಮಸ್ಕಾರ ಹಾಕಿ ಇಪ್ಪತ್ತನೇ ಎಂ.ಪಿ. ಪ್ರಕಾಶನ ಮನೆತಕ್ಕೋದರಂತೆ."

"ಅಂಗರೆ ಜಂತಾ ದಳ ತಿರಗ ವಡದೋಯ್ತೆ?"

"ದ್ಯಾವೇಗೌಡ ಇರಗಂಟ ವಡಿತನೇ ಇರತದೆ."

"ಈ ಅಪ್ಪಮಕ್ಕಳತ್ರ ಯಾವನಾರ ಇರಕ್ಯಾದತೆ ಯೇಳು?" ಎಂದ ಸೀರ ರೋಶಿದವನಂತೆ.

"ಅದ್ಕೆ ಚಿಗಪ್ಪ ಎಮ್ಮೆಲ್ಲೆಗಳ್ಕೆಲ್ಲ ಎಂ.ಪಿ. ಪ್ರಕಾಶ್ ಮನೆತಕ್ಕೋಗಿ ಜಾಮಾಗಿದ್ದರಂತೆ. ಇತ್ತಗಿ ಅಪ್ಪಮಕ್ಕಳು ದಲ್ಲಾಗಿ ಕುಂತಿದ್ದರಂತೆ."

"ಇನ್ನವುರ ಕತೆ ಮುಗಿತು ಬುಡು."

"ಅಂಗೇಳಂಗಿಲ್ಲ ಚಿಗಪ್ಪ, ಬೇಕಾದೋಟು ದುಡ್ಡದೆ, ಲೀಡ್ರುನೆ ಕೊಳ್ಳತರೆ, ಜನ ಕೊಳ್ಳತರೆ."

"ನೋಡೋ ಅವುನ್ಯಾರೊ ಇಜಯಮಲ್ಯ ಅಂತ ಬಂದಿದ್ದ. ಅವುಂತಾವುಲು ದುಡ್ಡಿತ್ತು. ಯತ್ತಗೋದ ಹೇಳು? ಅಮ್ಯಾಲೆ ವಿಜಯ ಸಂಕೇಶ್ವರ ಅಂತ ವಬ್ಬ ಕುಬೇರ ಬಂದಿದ್ದ. ಅವುನು ಕಾಯೋಳು ಕವುರಿಕೊಂಡು ಹೋದ. ಈ ಅಪ್ಪ ಮಕ್ಕಳತ್ರ ದುಡ್ಡದೆ ಅಂತ ಜನ ಹೋಗಿಬುಟ್ಟರೆ" ಎಂದ ಉಗ್ರಿ.

"ಅದೇನಾರ ಆಗ್ಲಿ, ಲೀಡ್ರುಗಳ ಹಿಂದಿರತಿದ್ದ ಎಂ.ಪಿ. ಪ್ರಕಾಶ್ ಕಡಿಗೂ ಲೀಡ್ರಾದರಲ್ಲ ಬುಡು."

"ಅಪ್ಪ ಮಕ್ಕಳು ಮನೆತಕ್ಕೋದ್ರು ಬಗ್ಗಿಲವಲ್ಲ ಹೇಳು?"

"ಅದೆಯಪ್ಪ ನನಿಗೂ ಆಶ್ಚರ್ಯ."

"ಆಶ್ಚರ್ಯ ಏನೂವಿಲ್ಲ, ಸಜ್ಜನನಿಗೆ ಸಿಟ್ಟು ಬಂದದೆ ಕಣೊ, ಅವುನಿಗೆ ಒಂದೇ ಸಾರಿಯಲವೆ ಸಿಟ್ಟು ಬರದು."

"ನಿಜ."

■

...ಮಾತೂ ಅಷ್ಟೆ. ನಿರ್ವಂಶ ಆಗಲಿ ಅಂದರೂ ಆಗಲ್ಲ!

ನಮ್ಮ ಆತಂಕ ಇಷ್ಟೆ: ರಾಜಕಾರಣಿಗಳ ಕೆಸರೆರಚಾಟದಲ್ಲಿ ಎಲ್ಲರ ಬಂಡವಾಳವೂ ಬಯಲಾಗಿ ಒಂದು ರೀತಿಯ ಮಜ ಕೊಡುತ್ತಿರುವುದು ನಿಜವಾದರೂ ಯುವ ಪೀಳಿಗೆಗೆ ಅವು ನೀಡುವ ಸಂದೇಶ ಏನು? ರಾಜಕಾರಣಿಗಳ ನಡವಳಿಕೆ ಮಾತ್ರ ಅಲ್ಲ, ನಮ್ಮ ಬದುಕಿನ ಹಲವರ ನಡವಳಿಕೆ ನೀಡುವ ಸಂದೇಶ ಏನು?

ಇವತ್ತಿನ ಪತ್ರಿಕೆಯಲ್ಲಿ ಮೂರು ಕಾಲಂ ಸುದ್ದಿ ಇದೆ.

ಏನು ಸುದ್ದಿ ಅದು?

ಮುತ್ತಪ್ಪ ರೈ ಕುರಿತದ್ದು.

ಯಾವುದೋ ನಿವೇಶನದ ವಿವಾದ. ಬಿಲ್ಡರ್ ಸುಬ್ಬರಾವು ಅವರ ಕೊಲೆಯಾಗಿತ್ತು. ಗಗನಕ್ಕೇರಿರುವ ನಿವೇಶನಗಳ ಬೆಲೆಯಲ್ಲಿ ಇಂತಹವು ಸಹಜ. ವಿವಾದಿತ ನಿವೇಶನ ಅಂದರೆ ಪಾತಕಿಗಳಿಗೆ ಹಾಲುತುಪ್ಪ. ಈ ವಿವಾದದಲ್ಲಿ ರೈ ಆರೋಪಿಯಾಗಿದ್ದರು. ಈಗ ಅವರು ನಿರ್ದೋಷಿ!

ಯಾಕೆ ಅವರು ಕೊಲೆಯಲ್ಲಿ ಭಾಗಿಯಾಗಿರಲಿಲ್ಲವೆ?

ಆಗಿರಬಹುದು. ಆದರೆ ಸೂಕ್ತ ಸಾಕ್ಷ್ಯಾಧಾರಗಳಿಲ್ಲ!

ಯಾಕೆ ಹೀಗಾಯಿತು?

ಪೊಲೀಸಿನವರಿಂದ. ಕೆಲವು ಠಾಣೆಗಳ ಸ್ಟೇಷನ್ ಹೌಸ್ ಅಧಿಕಾರಿಗಳಿಗೆ ಕನಿಷ್ಠ ಕಾನೂನಿನ ಜ್ಞಾನವೂ ಇಲ್ಲ. ಇನ್ನು ಕೆಲವು ಕಡೆ ಬೇಕಾಬಿಟ್ಟಿ ಆರೋಪಪಟ್ಟಿ ತಯಾರಿಸುತ್ತಾರೆ. ಹಲವೊಮ್ಮೆ ಆರೋಪಿಗಳನ್ನು ತಪ್ಪಿಸುವ ರೀತಿಯಲ್ಲೇ ಆರೋಪ ಪಟ್ಟಿ ತಯಾರಾಗುತ್ತದೆ ಎನ್ನುತ್ತದೆ ನ್ಯಾಯಾಲಯ!

ಮುತ್ತಪ್ಪ ರೈ ಮುಂದೇನು ಮಾಡಬಹುದು?

'ನನ್ನ ಜೀವನ ಶೈಲಿಯನ್ನು ಬದಲಾಯಿಸಿಕೊಂಡಿದ್ದೇನೆ. ಈಗ ನಾನು ಸಂಭಾವಿತ ವ್ಯಕ್ತಿ' ಎಂದು ಹೇಳಿಕೆ ನೀಡಬಹುದು.

ಆನಂತರ?

ಸೃಜನಾತ್ಮಕತೆ ಇದ್ದರೆ ಯಶಸ್ವಿ 'ಆತ್ಮಕಥೆ' ಬರೆಯಬಹುದು. ಹೇಗೆ ಕೊಲೆಗಳು ನಡೆದವು ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಬಹುದು. ಸತ್ಸಂಗ ಮಾಡಬಹುದು.

ಇದೆಲ್ಲದರಿಂದ ಯುವ ಜನತೆಗೆ ನೀಡುವ ಸಂದೇಶ ಏನು?

'ಕೊಲೆ ಸುಲಿಗೆ ಮಾಡು

ಸಾಕ್ಷಿ ಮುಚ್ಚಿ ಬಿಡು'!

■

ಮರೆಯುವ ಮುನ್ನ



ಪಿ. ಲಂಕೇಶ್ -ಜುಲೈ 16, 1989



ಛಂದಸ್ಸು, ಸ್ಫೂರ್ತಿ

ಲಾರಾ! ಈಕೆ ಒಂದು ಕಡೆ ಸ್ಫೂರ್ತಿ ನೀಡುವ, ಮೋಹಕ್ಕೆ ಹಚ್ಚುವ ಹೆಣ್ಣು; ಇನ್ನೊಂದು ಕಡೆ ನೈತಿಕ ಕಡಿವಾಣಕ್ಕೆ ಸಂಕೇತ.

ಹದಿನಾಲ್ಕನೆ ಶತಮಾನದಲ್ಲಿ ಇಟಾಲಿಯನ್ ಕವಿ ಪೆಟ್ರಾರ್ಕ್ ಒಮ್ಮೆ ಚರ್ಚ್‌ವೊಂದರಲ್ಲಿ ಲಾರಾಳನ್ನು ನೋಡಿದ. ಆಕೆ ಎಂತಹ ರೂಪಸಿಯಾಗಿದ್ದಳೆಂದರೆ ಆಕೆಯ ನೋಟ, ಮಾಟ ಕವಿ ಪೆಟ್ರಾರ್ಕ್‌ನಲ್ಲಿ ನೆಲೆಸಿದವು. ಆಕೆ ವಿವಾಹಿತೆ ಎಂಬುದು, ಒಂದು ಮಗುವಿನ ತಾಯಿಯಾಗಿದ್ದಳೆಂಬುದು ಪೆಟ್ರಾರ್ಕನಿಗೆ ಗೌಣವಾಯಿತು. ಪ್ರಚಂಡ ಪಂಡಿತ, ರಾಜಕಾರಣಿ ಮತ್ತು ಕವಿಯಾಗಿದ್ದ ಪೆಟ್ರಾರ್ಕ್ ಸಾಹಿತ್ಯದ ಹಳೆಯ ಪರಂಪರೆ ಮತ್ತು ರೆನೆಸಾನ್ಸ್‌ನ ಹೊಸ ಯುಗದ ನಡುವೆ ನಿಂತಿದ್ದ. ಹಳೆಯ ಪರಂಪರೆಯ ಪ್ರಕಾರ ಭಣ್ಣ, ರೇಖೆ, ಬಂಧಮುಖ್ಯವಾಗಿತ್ತು; ಪಾಳೆಗಾರಿಕೆಯ ಸಂಸ್ಕೃತಿಯ ಮೌಲ್ಯಗಳು ಮತ್ತು ದೈವಿಕ ವಿಷಯಗಳು ಮುಖ್ಯವಾಗಿದ್ದವು.

ಲಾರಾಳನ್ನು ನೋಡಿದ ಪೆಟ್ರಾರ್ಕ್, "ನೀವು ಸಮುದ್ರವನ್ನು ವಶಪಡಿಸಿಕೊಳ್ಳುತ್ತೀರಿ, ಭೂಮಿಯನ್ನು ಗೆಲ್ಲುತ್ತೀರಿ, ಸ್ವರ್ಗಕ್ಕೆ ಆಶೆಪಡುತ್ತೀರಿ-ಆದರೆ ನಿಮ್ಮೊಳಗಣ ಬೀಜವನ್ನು ನಿರ್ಲಕ್ಷಿಸುತ್ತೀರಿ" ಎಂದು ಹೇಳಿದ. ಮನುಷ್ಯನ ಪ್ರತಿಭೆಯಷ್ಟೇ ಆತನ ದೌರ್ಬಲ್ಯ ಮುಖ್ಯ ಮನುಷ್ಯನ ಹೊರಗಿನ ಪ್ರಪಂಚದಷ್ಟೇ ಆತನ ಸ್ವಾರ್ಥ ಮತ್ತು ಅಂತರ್ಯ ಮುಖ್ಯ ಎಂದು ಹೇಳಿದ. ಲಾರಾಳನ್ನು ನೋಡಿದ ಪೆಟ್ರಾರ್ಕ್‌ಗೆ ಆಶ್ಚರ್ಯವಾಗಿತ್ತು; ಹೆಣ್ಣೊಬ್ಬಳು ತನ್ನನ್ನು ತನ್ನ ವಾಂಛಲ್ಯ, ಚಂಚಲತೆ, ಕಾಮುಕ್ಕೆ ಪ್ರೋತ್ಸಾಹಿಸುತ್ತಿರುವುದನ್ನು ಕಂಡು ಅಚ್ಚರಿಗೊಂಡಿದ್ದ. ಹರಯದಲ್ಲಿ ಲಾರಾಳನ್ನು ಧ್ಯಾನಿಸುತ್ತ ಬರೆಯತೊಡಗಿದ ಪೆಟ್ರಾರ್ಕ್ ಮುಪ್ಪಿನವರೆಗೆ ಧ್ಯಾನಿಸಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡ. ತನ್ನ ದೇಶದ ಮಧ್ಯಮಯುಗದ ಕವಿ ಡ್ಯಾಂಟೇಗೆ ಬಿಯಾಟ್ರೀಸ್ ಮಾರ್ಗದರ್ಶಿನಿಯಾದಂತೆ ಲಾರಾಳನ್ನು ತನ್ನ ಒಳತೋಟಿಯ ಸ್ವೀಕರ್ತೆಯನ್ನಾಗಿ ಪೆಟ್ರಾರ್ಕ್ ಮಾಡಿಕೊಂಡ. ಆತ್ಮಸಂಪತ್ತಿನೊಂದಿಗೆ ಬಾಹ್ಯದ ವಸ್ತುಗಳನ್ನು ಬೆಸೆದು ರೆನೆಸಾನ್ಸ್ ಯುಗದ ಕಾವ್ಯವನ್ನು ಉದ್ಘಾಟಿಸಿದ.

ಲಾರಾ ಎಂದರೆ ಮಾರ್ಗದರ್ಶಿನಿ, ಲಾರಾ ಎಂದರೆ ಪ್ರೇಯಸಿ. ಇಪ್ಪತ್ತನೆ ಶತಮಾನದಲ್ಲಿ ರಷ್ಯಾದ ಕವಿ ಪ್ಯಾಸ್ಟರ್‌ನಾಕ್‌ನ ನೆಚ್ಚಿನ ಹೆಣ್ಣು ಲಾರಾ. ಈತನ ಕಾದಂಬರಿಯ ಡಾಕ್ಟರ್ ಜಿವಾಗೋ ಹೊಸಹುಟ್ಟು ಪಡೆಯುವುದು, ಅದಮ್ಯ ಸ್ಫೂರ್ತಿ ಪಡೆಯುವುದು ಇದೇ ಲಾರಾಳಿಂದ. ರಷ್ಯಾದ ಕ್ರಾಂತಿಯ ರಕ್ತದಲ್ಲಿ, ನಿಟ್ಟುಸಿರು ನೋವಿನಲ್ಲಿ ಡಾ. ಜಿವಾಗೋನ ಹೃದಯ ಪ್ರವೇಶಿಸಿದ ಲಾರಾ ಆತ ಪೆಟ್ರಾರ್ಕ್‌ನನ್ನ ರೂಪಿಸಿದಂತೆಯೇ ರೂಪಿಸುತ್ತಾಳೆ. ಒಂದು ಕೋನಕ್ಕೆ ವ್ಯಭಿಚಾರಿಣಿ, ಇನ್ನೊಂದು ಕೋನಕ್ಕೆ ಪ್ರೇಯಸಿ-ಆದರೆ ಮೂಲಭೂತವಾಗಿ ಸ್ಫೂರ್ತಿಯ ಸೆಲೆ ಲಾರಾ.

ಭಾವುಕ ಜ್ವಾಲೆ ಮತ್ತು ಋಷ್ಯಾಶ್ರಮದ ಸಂಯಮ ಈ ಲಾರಾ.

ಧ್ವಜದ ಬಗ್ಗೆ ವಿವಾದ



ಮೊನ್ನೆ ಅಮೆರಿಕದಲ್ಲಿ ಒಂದು ಐತಿಹಾಸಿಕ ತೀರ್ಪನ್ನು ಅಲ್ಲಿಯ ಶ್ರೇಷ್ಠ ನ್ಯಾಯಾಲಯ ನೀಡಿದೆ; ರಾಷ್ಟ್ರಧ್ವಜವನ್ನು ಸುಟ್ಟು ಹಾಕುವುದು ಕೂಡ ಪ್ರತಿಭಟನೆಯ, ವಾಕ್ ಸ್ವಾತಂತ್ರ್ಯದ ಒಂದು ರೀತಿ. ಅದು ಅಪರಾಧವಲ್ಲ.


ಇದು ಐತಿಹಾಸಿಕ ಏಕೆಂದರೆ, ಕೇವಲ ಏಳು ತಿಂಗಳ ಹಿಂದೆ ಅಮೆರಿಕನ್ ಧ್ವಜವನ್ನು ಎಲ್ಲೆಲ್ಲೂ ಹಾರಿಸಿ, ಅಪ್ಪಿಕೊಂಡು, ವೇದಿಕೆಯಲ್ಲಿ ಬಳಸಿ ತಾವೊಬ್ಬ ದೊಡ್ಡ ರಾಷ್ಟ್ರಭಕ್ತರೆಂದು ಕೂಗಾಡುತ್ತ ಜಾರ್ಜ್ ಬುಶ್ ಅಧಿಕಾರಕ್ಕೆ ಬಂದರು. ತಮ್ಮಂತೆಯೇ ರಾಷ್ಟ್ರಧ್ವಜದ ಬಗ್ಗೆ ತೀವ್ರ ಮರ್ಯಾದೆ ತೋರದ ಡುಕಾಕಿಸ್ ರಾಷ್ಟ್ರದ್ರೋಹಿಯೆಂದು ಸೂಚಿಸಿದರು. ಅಷ್ಟೇ ಅಲ್ಲ, ರಾಷ್ಟ್ರಭಕ್ತಿ ಮತ್ತು ರಾಷ್ಟ್ರಧ್ವಜದ ಭಕ್ತಿ ಒಂದೇ ಎಂಬಂತೆ ಮಾತಾಡುತ್ತ ರಾಷ್ಟ್ರಕ್ಕಾಗಿ ಎಲ್ಲ ಕಾನೂನು, ಕಟ್ಟಳೆಗಳನ್ನು ಮುರಿದ ಆಲಿವರ್ ನಾರ್ತ್ ಎಂಬ ಅವಾಂತರಕಾರಿ ಅಮೆರಿಕಾದ ಹೀರೋ ಎಂದು ಕೊಂಡಾಡಲಾಯಿತು. ಈತ ಮಾಡಿದ್ದೇನು ಗೊತ್ತೆ? ಅಮೆರಿಕದ ಮುಖಕ್ಕೆ ಉಗಿದಿದ್ದ ಇರಾನ್ ದೇಶಕ್ಕೆ ಶಸ್ತ್ರಾಸ್ತ್ರಗಳನ್ನು ನೀಡಿ ಅವೇ ಶಸ್ತ್ರಾಸ್ತ್ರಗಳನ್ನು ಗುಟ್ಟಾಗಿ ನಿಕರಾಗುವಾಗೆ ಸಾಗಿಸಿದ, ಅಲ್ಲಿಯ ಸರ್ಕಾರವನ್ನು ಬೀಳಿಸಲು!

ಆದಿರಲಿ. ರಾಷ್ಟ್ರಧ್ವಜದ ಬಗ್ಗೆಯೇ ಯೋಚಿಸಿ. ನೆಹರೂ ಅಧಿಕಾರದಲ್ಲಿದ್ದಾಗ ಒಂದು ಘಟನೆ ಆಯಿತು. ಕಾಶ್ಮೀರದ ಕೆಲವರು ಪ್ರತಿಭಟನಾಕಾರರು ಭಾರತದ ಧ್ವಜವನ್ನು ಸುಟ್ಟು ಹಾಕಿದರು. ಕಿಡಿಕಿಡಿಯಾದ ನೆಹರೂ 'ರಾಷ್ಟ್ರಧ್ವಜ ಸುಟ್ಟವರನ್ನು ಹಿಡಿದು ಸುಟ್ಟುಹಾಕಬೇಕು' ಅಂದರು. ಆಗ ಜಯಪ್ರಕಾಶ್ ನಾರಾಯಣ್ ಹೇಳಿದರು: "ಹಾಗೆ ಮಾಡಲು ಸಾಧ್ಯವಾಗುವುದು ಈ ರಾಷ್ಟ್ರ ಶ್ರೇಷ್ಠ ರಾಷ್ಟ್ರವಾಗಿದ್ದು ಪ್ರತಿಭಟನೆ, ಆಕ್ಷೇಪಣೆಗೆ ಕಾರಣವೇ ಇಲ್ಲದಿದ್ದಾಗ. ಆಕಸ್ಮಾತ್ ಒಬ್ಬ ಸಿಟ್ಟಿನಿಂದ ರಾಷ್ಟ್ರಧ್ವಜವನ್ನು ಸುಟ್ಟದ್ದರೆ ಅದಕ್ಕೆ ಕಾರಣ ಹುಡುಕಿ ಪರಿಹಾರ ಕಾಣಬೇಕು. ಈಗಿರುವಂತೆ ಧ್ವಜ ಒಂದು ಬಟ್ಟೆಯ ತುಂಡು; ಎಷ್ಟಾದರೂ ಮನುಷ್ಯ ಅರ್ಥಪೂರ್ಣ ಜೀವಿ. ಆತನನ್ನು ಸುಡುವ ಮಾತಾಡಕೂಡದು."

ಹುಂಬತನದಲ್ಲಿ ಹುಟ್ಟಿದ ರಾಷ್ಟ್ರಪ್ರೇಮ ಎಲ್ಲ ಹುಂಬ ಪ್ರೀತಿಯಂತೆಯೇ ನಿರರ್ಥಕವಾದದ್ದು. ಆದ್ದರಿಂದ ಧ್ವಜವನ್ನು ಪೂರ್ತಿಯಾಗಿ ಪ್ರೀತಿಸಬೇಕು, ಕಾಪಾಡಬೇಕು ಎನ್ನುವವರು ದೇಶದಲ್ಲಿ ಅನ್ಯಾಯ, ಹಿಂಸೆ, ದಬ್ಬಾಳಿಕೆ ಇಲ್ಲದಂತೆ ನೋಡಿಕೊಳ್ಳಬೇಕು. ಅವೆಲ್ಲ ಇರುವವರೆಗೆ ಧ್ವಜ ದುರ್ಬಲ, ಅದನ್ನು ಸುಡುವುದೂ ಒಂದು ಬಗೆಯ ಪ್ರತಿಭಟನೆ.

ನೆನಪಿನ ಉರುಳು

ಮುಂದುವರಿದ ದೇಶ ಕೂಡ ಭಾರತದಂತೆಯೇ ವರ್ತಿಸುವುದು ವಿಚಿತ್ರ..... ಈಚೆಗೆ ಅಮೆರಿಕದಲ್ಲಿ ಗಣ್ಯರ ಸ್ಮರಣಾರ್ಥ ಶಿಲಾಮೂರ್ತಿಗಳನ್ನು ಕೆತ್ತಿಸಿ ನಿಲ್ಲಿಸುವ ಹುಚ್ಚು ಆರಂಭವಾಗಿದೆ. ಕಂಡಕಂಡ ರಾಜಕಾರಣಿಗಳನ್ನು, ಸಂಗೀತಗಾರರು, ಕವಿಗಳನ್ನು ಕಲ್ಲಿನಲ್ಲಿ ಕೆತ್ತಿ ನಿಲ್ಲಿಸುತ್ತಿದ್ದಾರೆ. ಇದರ ಅರ್ಥ, ಕಲ್ಲಿನಲ್ಲಿ ಮಾಡಿ ನಿಲ್ಲಿಸಿಯಾದರೂ ನೆನಪಿಟ್ಟುಕೊಳ್ಳಲು ಪ್ರಯತ್ನಿಸುವುದು. ಅಮೆರಿಕದ ಈ ಇತ್ತೀಚಿನ ಹುಚ್ಚನ್ನು ಕಂಡು ಕೆಲವರು ವಿಸ್ಮಿತರಾಗಿದ್ದಾರೆ.



ಮನುಷ್ಯ ಆರಂಭದಲ್ಲಿ ಕಲ್ಲಿನ ಮೇಲೆ ಬರೆಯುತ್ತಿದ್ದ, ಆಮೇಲೆ ಮಣ್ಣಿನ ಮೇಲೆ ಬರೆದ, ಆಮೇಲೆ ತಾಳೆಗರಿ, ಕಾಗದದ ಮೇಲೆ. ಈಗ ಕಂಪ್ಯೂಟರ್ ಮೇಲೆ ಮೂಡಿಸಿ ಅಳಿಸಿ ಹಾಕುತ್ತಾನೆ. 'ಮೆಮರಿ'ಯಲ್ಲಿ ಶೇಖರಿಸಲು ಯತ್ನಿಸುತ್ತಾನೆ. ಟೆಲಿವಿಷನ್‌ನಲ್ಲಿ ಮಿಂಚಿಸಿ ಮಾಯಮಾಡುತ್ತಾನೆ. ಮನುಷ್ಯ ಹೆಚ್ಚುಹೆಚ್ಚು ತಿಳಿದಂತೆ ಹೆಚ್ಚುಹೆಚ್ಚು ಮರೆಯುವ ಮಾಧ್ಯಮ ರೂಪಿಸಿಕೊಂಡಿದ್ದಾನೆ. ಆದ್ದರಿಂದಲೇ ಈಗ ಅಮೆರಿಕದಲ್ಲಿ ಶಿಲಾಮೂರ್ತಿಗಳ ಹುಚ್ಚು.

ಒಂದು ದೇಶದ ಜನಕ್ಕೆ ನೆನಪೆಷ್ಟು ಬೇಕು, ಮರೆವೆ ಎಷ್ಟು ಬೇಕು-ಎಂಬ ಪ್ರಶ್ನೆಯನ್ನು ಇದು ಎತ್ತುತ್ತದೆ. ಭೂತಕಾಲದ ಒಳ್ಳೆಯ ಘಟನೆಗಳನ್ನು, ಸಾಧನೆಯನ್ನು ಪೂರ್ತಿ ಮರೆತ ದೇಶ ಅಭಿಮಾನ ಶೂನ್ಯವಾಗುವ ಸಾಧ್ಯತೆ ಇದೆ; ಹಾಗೆಯೇ ಮರೆಯಲೇಬೇಕಾದ್ದನ್ನು ಮರೆಯಲಾರದೆ ಸೇಡು, ಹಿಂಸೆಯಲ್ಲಿ ಮುಳುಗಿ ನಾಶವಾಗುವ ದೇಶಗಳಿವೆ.

ಇಸ್ರೇಲ್ ತನ್ನ ಚರಿತ್ರೆಯನ್ನು ಮರೆಯಲಾರದೆ ಮುಸ್ಲಿಂ ದೇಶಗಳ ಮಧ್ಯೆ ಒತ್ತುವರಿ ಮಾಡಿಕೊಳ್ಳುತ್ತ ಆಕ್ರಮಿಸುತ್ತ ನಡೆಯಿತು; ಮುಸ್ಲಿಮರು ಇಸ್ರೇಲಿಗಳ ಉದ್ಧಟತನ ಮರೆಯಲಾಗದೆ ಸಿಟ್ಟಿಗೆದ್ದು ಜಗಳಕ್ಕೆ ನಿಂತರು. ಅದಕ್ಕೆ ಎರಡು ಸಾವಿರ ವರ್ಷದ ಹಿಂದೆ ಏಸುಕ್ರಿಸ್ತನನ್ನು ಕೊಂದ ಯಹೂದ್ಯರ ಮೇಲಿನ ಸೇಡಿನಿಂದ ಹಿಟ್ಲರ್ ಮತ್ತು ಬಹುಪಾಲು ಯೂರೋಪಿನ ಜನ ಯಹೂದ್ಯರನ್ನು ಕೊಂದರು.

ಮನುಷ್ಯ ಬದಲಾಗುತ್ತಾನೆ, ಸಂದರ್ಭಗಳು ಅವನನ್ನು ರೂಪಿಸುತ್ತದೆ ಎಂಬ ಪ್ರಾಥಮಿಕ ವಿಷಯ ಕೂಡ ಗೊತ್ತಿಲ್ಲದ ಜನ ಭೂತಕ್ಕಾಗಿ ವರ್ತಮಾನದ ಬಲಿ ಕೊಡುತ್ತಾರೆ. ಅಂದಹಾಗೆ ಈ ವಿಷಯದಲ್ಲಿ 'ಭೂತ' ಎಷ್ಟು ಸಮಂಜಸ ಮಾತು!

ಇಲ್ಲಿ ನೆನಪಿಡಲು ಕಲ್ಲುಗಳಾಗಲಿ, ಕಾಗದವಾಗಲಿ, ದೂರದರ್ಶನವಾಗಲಿ ನೆರವಾಗುವುದಿಲ್ಲ; ಈಜಿಪ್ಟಿನ ಸ್ಫಿಂಕ್ಸ್ ಪ್ರತಿಮೆ ಮುಪ್ಪಿನಿಂದ ನಡುಗುತ್ತಿದೆ.

ಚರಿತ್ರೆ, ಸ್ವಾಭಿಮಾನ ತಿಳಿವಳಿಕೆ ಹೆಚ್ಚಿಸದಿದ್ದರೆ ಮನುಷ್ಯನ ನೀಚ ಹೃದಯ ಸೇಡನ್ನು ತೀವ್ರಗೊಳಿಸುತ್ತದೆ.

ಇಷ್ಟನ್ನೂ ತಿಳಿಯಲಾರದ ಅಮೆರಿಕನ್ನರು ಎಲೆಕ್ಟ್ರಾನಿಕ್ಸ್ ಯಂತ್ರಗಳಿಂದ ನೀರಿನ ಮೇಲೆ ಬರೆದಂತೆ ಬರೆಯುವುದು ಅಥವಾ ಕಗ್ಗಲ್ಲುಗಳನ್ನು ಸ್ಮರಣಾರ್ಥವಾಗಿ ಕೆತ್ತುತ್ತ ಹೋಗುವುದು-ತಮಾಷೆಯಾಗಿಯೇ ಉಳಿಯುತ್ತದೆ.

ಬ್ರಾಹ್ಮಣ ಸೇವಕ ಯಡ್ಡಿ ಲಿಂಗಾಯತನೇ?

ತೆ
ಹೊಗಳಿಕೆ
ಟೀ
ಕೆ

'ಕರಿದಹಾಗೆ'ಯಲ್ಲಿ ಶಿವಲಿಂಗಂರವರಿಗೆ ಜಾತಿಯ ವಿಷಯಕ್ಕೆ (ಸಾಂಸ್ಕೃತಿಕ ನಗರಿ?) ಬೆಂಗಳೂರಲ್ಲಿ ಮನೆ ಸಿಗದಿದ್ದುದು ಮತ್ತು 'ನಾನ್‌ವೆಜ್' ಎಂದ ಕಾರಣಕ್ಕೆ ಇನ್ನೂ ಫಜೀತಿ ಪಡುತ್ತಿರುವುದಕ್ಕೆ ನಿಮ್ಮ ಕಳಕಳಿ ನಿಜಕ್ಕೂ ಅಭಿನಂದನೀಯ.

ಈ ಘಟನೆಯಿಂದ ನನಗೆ 1967-70 ರಲ್ಲಿ ನಮ್ಮ ತಂದೆ ಧಾರವಾಡಕ್ಕೆ ವರ್ಗವಾಗಿ ಹೋಗಿ, ಮನೆಬಾಡಿಗೆ ಹಿಡಿಯಲು ಸುಳ್ಳು ಹೇಳಿ ಫಜೇತಿ ಪಡುತ್ತಿದ್ದುದು ನೆನಪಿಗೆ ಬಂತು. ಸರ್ಕಾರಿ ಸೇವೆಯಲ್ಲಿ ಉನ್ನತ ಅಧಿಕಾರದಲ್ಲಿದ್ದೂ ಶಿವಲಿಂಗಂರವರಂತೆ ಕಪ್ಪಗಿಲ್ಲದಿದ್ದರೂ ಜಾತಿಯ ಹೆಸರು ಹೇಳಿದರೆ ಮಾಂಸ, ಮೀನು ತಿನ್ನುವರೆಂದು ಗೊತ್ತಾದರೆ ಮನೆಬಾಡಿಗೆಗೆ ನೀಡುವುದಿಲ್ಲವೆಂದು ನಮ್ಮ ತಂದೆ ಸುಳ್ಳು ಹೇಳಿ ಬಾಡಿಗೆಗೆ ಸೇರಿಕೊಂಡರು.

ನನಗೆ ಈಗ ಅನಿಸುತ್ತದೆ, ಹೊಸ ಜಾಗ, ಮೊದಲ ಬಾರಿಗೆ ವರ್ಗ, ಜೊತೆಗೆ ನಾವು ಏಳು ಜನ ಚಿಕ್ಕ ಮಕ್ಕಳು, ಅಲ್ಲದೆ ಎಲ್ಲ ಕಡೆ 'ನಿಮ್ಮ ಅಡ್ಡ ಹೆಸರು?' ಎಂದು ಪ್ರಶ್ನಿಸಿ, ಜಾತಿ ಅರಿಯುವ ಮನೆ ಮಾಲೀಕರು -ಇವೆಲ್ಲಾ ಸೇರಿ ನಮ್ಮ ತಂದೆಯವರಿಗೆ ಸುಳ್ಳು ಹೇಳಿ ಬಾಡಿಗೆ ಮನೆ ಪಡೆಯುವ ಅನಿವಾರ್ಯತೆ ಸೃಷ್ಟಿಸಿರಬೇಕು. ಜೊತೆಗೆ ತಂದೆಯವರ ಹೆಸರು "ಕುಂಟಸೆಟ್ಟಿ" ಎಂದಿದ್ದರಿಂದ ಧಾರವಾಡದ ಜನ, "ನೀವು ಲಿಂಗಾಯತ ಶೆಟ್ಟರೇನ್ರೀ?" ಎಂಬ ಪರಿಹಾರವನ್ನೂ ಒದಗಿಸಿ ಮನೆಯನ್ನೂ ಬಾಡಿಗೆಗೆ ನೀಡಿದ್ದರು.



ವಿಧಿಯಿಲ್ಲದೆ "ಲಿಂಗಾಯತ ಶೆಟ್ಟ"ರಾದ ನಮಗೆ ಬಹು ಇಷ್ಟವಾದ ಮಾಂಸದಡುಗೆ ತಿನ್ನಿಸಲು ಮತ್ತು ಅದರ ವಾಸನೆ ತಡೆಯಲು, ನಂತರ ಮಿಕ್ಕ ಮೂಳೆಚೂರುಗಳನ್ನು ಎಸೆಯಲು ತಂದೆಯವರು ಕಳ್ಳನಂತೆ, ರಾತ್ರಿ ಎಲ್ಲರು ಮಲಗಿದ ಮೇಲೆ ತುಂಬ ದೂರ, ನಿರ್ಜನ ಪ್ರದೇಶಕ್ಕೆ ನಡೆದುಹೋಗಿ ಎಸೆದು ಬರುತಿದ್ದದು ಜ್ಞಾಪಕಕ್ಕೆ ಬರುತ್ತದೆ. ಹಾಗೆ ಹೋಗಿ ಬರುವಾಗ್ಗೆ ಕಾಡುತ್ತಿದ್ದ ನಾಯಿಗಳನ್ನು ಎದುರಿಸಲು ಪಡುತ್ತಿದ್ದ ಕಷ್ಟ ಇಂದಿಗೂ ನಗು ಮತ್ತು ಮರುಕ ಬರಿಸುತ್ತದೆ.

ಇಂದಿಗೂ ಸಹ ಉತ್ತರ ಕರ್ನಾಟಕದಲ್ಲಿ ಪರಿಸ್ಥಿತಿ ಹಾಗೇ ಇದೆ. ಬೆಂಗಳೂರಿನಲ್ಲೂ ಆ ಅನಿಷ್ಠ ಭಾವನೆ ಇರುವುದು ಹೀನಾಯಕರ. ಬಾಡಿಗೆ ಕೊಡಲು ಮನುಷ್ಯರ ಶುಚಿತ್ವ, ಒಳ್ಳೆಯತನ, ಪರಸ್ಪರ ಗೌರವ ನಡತೆ ಮುಖ್ಯವೇ ಹೊರತು, ಬಣ್ಣ ಜಾತಿ ಮತ್ತು ತಿನ್ನುವ ರೀತಿಯಲ್ಲವೆಂಬುದು ಮೂರ್ಖರಿಗೆ ಹೇಗೆ ಅರ್ಥವಾಗಬೇಕು?

-ಡಾ. ನಿತ್ಯಾನಂದ. ಸುಂದವಾಳು

ಪಕ್ಕಾ RSS ಗರಡಿಯಲ್ಲಿ ಬೆಳೆದ ಯಡ್ಡಿ ಮೋದಿಯ ಅಪರಾವತಾರವಾಗುತ್ತಿದ್ದರೇನೋ ಅನಿಸುತ್ತಿದೆ. ಬ್ರಾಹ್ಮಣ್ಯದ ಹಿಡಿತದಿಂದ ಹೊರಬಂದು ಸಾಮಾಜಿಕ ಸಮಾನತೆಗೆ ಹೋರಾಡಿದ ಬಸವಣ್ಣನೆಲ್ಲಿ, ಶರಣನಾಗಿ ಹುಟ್ಟಿ ಚೆಡ್ಡಿಗಳ ಲಾಡಿ ಕಟ್ಟುವ ಯೆಡ್ಡಿಯೆಲ್ಲಿ?

'ಶೂದ್ರ ಕೋಳಿ ಮೇಯುತ್ತಿತ್ತು, ಬ್ರಾಹ್ಮಣನಾಯಿ ಹೊಂಚುತಿತ್ತು' ಎಂಬ ಕುವೆಂಪುರವರ ಎಚ್ಚರಿಕೆಯ ಮಾತನ್ನು ಕೇಳಿದ್ದರೆ, ಓದಿದ್ದರೆ ಯಡ್ಡಿಯಂಥವರು ಹೇಗೆ ಬದುಕಬೇಕು, ಎಂಥ ರಾಜಕಾರಣ ಮಾಡಬೇಕೆಂಬುದನ್ನು ತಿಳಿದಿರುತ್ತಿದ್ದರು. ಯಡಿಯೂರಪ್ಪನಂತಹ ಹುಂಬನನ್ನು, ಹೋರಾಟಗಾರನನ್ನು ಬಿಜೆಪಿಯು ತನ್ನ ಅಡಿಪಾಯ ಕಟ್ಟುವುದಕ್ಕೆ ಬಳಸಿಕೊಳ್ಳುತ್ತದೆಯೇ ಹೊರತು ಅವರು ಅಧಿಕಾರದ ಗದ್ದುಗೆಯ ಮೇಲೆ ಕೂರಲು ಪುರೋಹಿತಶಾಹಿಗಳು ಬಿಡುವುದಿಲ್ಲ.

ಬಿಜೆಪಿಗೆ ಮುಖ್ಯಮಂತ್ರಿ ಪಟ್ಟ ತಪ್ಪಿದ್ದಕ್ಕೆ 'ವಚನಭ್ರಷ್ಟ'ರೆಂದು, ದ್ರೋಹಿಗಳೆಂದು ಹೀಗಳೆಯುವ ಚೆಡ್ಡಿಗಳು ಉಮಾಭಾರತಿಗೆ ಮಾಡಿದ್ದೇನು? ಅಧಿಕಾರದಲ್ಲಿ ಕುಂತ ಬುಡಕಟ್ಟು ಜನಾಂಗದ ಮಹಿಳೆಗೆ ವಂಚನೆ ಮಾಡಲಿಲ್ಲವೇ ಅವರು? ಆಗ ಎಲ್ಲಿತ್ತು ಇವರ ಧರ್ಮ, ನ್ಯಾಯ, ರಥಯಾತ್ರೆ? ಪಕ್ಷ ಸಂಘಟನೆಗೆ ಹಣ ಪಡೆದ ಬಂಗಾರು ಲಕ್ಷ್ಮಣ ಲಂಚದ ಆರೋಪ ಹೊತ್ತು ಅಧ್ಯಕ್ಷ ಪದವಿ ತ್ಯಾಗ ಮಾಡಿದರು. ಆದರೆ ಹುಡ್ಕೋ ಹಗರಣದಲ್ಲಿ ಹಣ ಕಿತ್ತ ಅನಂತ್‌ಕುಮಾರ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ!

ಇದನ್ನೆಲ್ಲ ತಿಳಿಸಿ ಹೇಳುವ ಯುವ ಪಡೆ ಬೇಕು. ಆದರೆ ಅವರು ಎಲ್ಲಿದ್ದಾರೆ? ಕಾಂಗ್ರೆಸ್‌ನಲ್ಲೋ? ಜೆಡಿ(ಎಸ್)ನಲ್ಲೋ? ಸಮಾಜವಾದಿ ಪಕ್ಷದಲ್ಲೋ? ನರಸತ್ತಂತಿರುವ ಕಾಂಗ್ರೆಸ್‌ನವರಿಂದ; ಅಧಿಕಾರ ಮತ್ತು ಹಣ ಸಿಕ್ಕರೆ ಸಾಕು ಯಾರಾದರೇನು ಸೀರೆ ಉಡಿಸಿಕೊಳ್ಳಲು ಸಿದ್ಧ ಎಂಬ ಜೆಡಿಎಸ್ ಶಾಸಕರಿಂದ; ಹಗ್ಗಕೊಟ್ಟು ಕೈ ಕಟ್ಟಿಸಿಕೊಂಡ ಮುದಿ ಬಂರಿಂದ ಇದು ಸಾಧ್ಯವಿಲ್ಲದ ಮಾತು.

ಇಲ್ಲಿ ಒಂದು ಅಂಶವನ್ನು ಮನಗಾಣಬೇಕು. ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹಿಂತೆಗೆದ ನಂತರ 'ಬಂ' ಕಾಂಗ್ರೆಸ್ ಪಕ್ಷವನ್ನು ದೂಷಿಸುತ್ತ ಬಿಜೆಪಿಗೆ ಅವಕಾಶವನ್ನು ಕೊಟ್ಟು ತಪ್ಪು ಮಾಡಿದೆ ಎಂದು ಕೂಗಾಡುತ್ತಿದ್ದರು. ನನ್ನ ಪ್ರಕಾರ ಕಾಂಗ್ರೆಸ್ ಪಕ್ಷಕ್ಕಿಂತ ಬಹುದೊಡ್ಡ ತಪ್ಪನ್ನು 'ಬಂ' ಮಾಡಿದ್ದಾರೆ. ರಾಜ್ಯದ ಒಂದೆರಡು ಜಿಲ್ಲೆಗಳಲ್ಲಿ ಕಿವಿಯಲ್ಲಿ ಹೂ ಮುಡಿದು, ಚೆಡ್ಡಿ ತೊಟ್ಟು ಲಾಠಿ ಹಿಡಿದು ತಿರುಗುತ್ತಿದ್ದವರನ್ನು ವಿಧಾನಸೌಧಕ್ಕೆ ಕರೆತಂದವರೇ ಈ 'ಬಂ'. ತನ್ನ ತಟ್ಟೆಯಲ್ಲಿದ್ದ ಹೆಗ್ಗಣವನ್ನು ಗುರುತಿಸದೇ ಬೇರೆಯವರ ತಟ್ಟೆಯಲ್ಲಿರುವ ನೊಣವೇ ದೊಡ್ಡದಾಗಿ ಕಾಣುತ್ತಿದೆ 'ಬಂ'ಗೆ.



-ಮಂಜಣ್ಣ, ಸೊರಬ

ಡಿಸೆಂಬರ್ 5, 2007ರ ತಮ್ಮ ಪತ್ರಿಕೆಯ ಸಂಚಿಕೆಯಲ್ಲಿ ಶಿಕಾರಿಪುರದ ಹೆಲಿಪ್ಯಾಡ್‌ನಲ್ಲಿ ನಡೆದ ವಾಮಾಚಾರ ಘಟನೆಗೂ ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧವಿಲ್ಲ. ಇಂದಿನ ವೈಜ್ಞಾನಿಕ ಯುಗದಲ್ಲಿ ಅಂತಹ ಅಂಧ ಶ್ರದ್ಧೆಯಲ್ಲಿ ನಮಗೆ ನಂಬಿಕೆ ಇರುವುದಿಲ್ಲ.

ನಾನು 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಕಳೆದ ಮೂರು ವರ್ಷಗಳಿಂದ ಶಿಕಾರಿಪುರ ತಾಲೂಕಿನ ವರದಿಗಾರನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ನನ್ನ ಮೇಲೆ ಹತ್ತು ಲಕ್ಷ ರೂ. ವಂಚನೆಯ ಆಪಾದನೆ ಇದ್ದು ಆ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ.

ನನ್ನ ವೈಯಕ್ತಿಕ ನಂಬಿಕೆಯಂತೆ ನನ್ನ ಹೆಸರು ದಿನೇಶ್ ಅನ್ನು ಆಶೀಶ್ ಪಟೇಲ್ ಎಂದು ಬದಲಾಯಿಸಿಕೊಂಡಿರುತ್ತೇನೆ ವಿನಃ ಇದರಲ್ಲಿ ಯಾವುದೇ ರೀತಿಯ ವಿಶೇಷತೆ ಇರುವುದಿಲ್ಲ.

ನನ್ನ ತಂದೆ ಸದಾಶಿವಪ್ಪನವರು ತಮ್ಮ ಪತ್ರಿಕೆಯಲ್ಲಿ ವರದಿ ಮಾಡಿರುವಂತೆ 'ಬಿಜೆಪಿಯ ಪುಢಾರಿ'ಯಲ್ಲ, ಘಟನಾ ಸ್ಥಳದ ಹತ್ತಿರದ ನಿವಾಸಿಯಾಗಿರುವುದರಿಂದ ಘಟನೆಗೆ ಸಂಬಂಧಿಸಿದಂತೆ ತಮಗೆ ತಿಳಿದ ಮಾಹಿತಿಯನ್ನು ಪತ್ರಕರ್ತರಿಗೆ ಹಾಗೂ ಪೊಲೀಸರಿಗೆ ಅವರು ವಿವರಿಸಿರುತ್ತಾರೆ. ಅದೇ ರೀತಿ ಗುತ್ತಿಗೆದಾರ ಕುಬೇರ ನನ್ನ ಭಾವನವರಾಗಿದ್ದು ಅವರಿಗೂ ವಾಮಾಚಾರದ ಘಟನೆಗೂ ಸಂಬಂಧವಿರುವುದಿಲ್ಲ. ಅವರು ಗುತ್ತಿಗೆ ಕಾಮಗಾರಿಯನ್ನು ಕಾನೂನು ವ್ಯಾಪ್ತಿಯಲ್ಲಿ ಮಾಡುತ್ತಿದ್ದಾರೆ.

- ಆಶೀಶ್ ಪಟೇಲ್,
ಶಿಕಾರಿಪುರ

ದೇವರನ್ನು ಮೂರ್ಖನ ಮಟ್ಟಕ್ಕೆ ಇಳಿಸಿದವರಿಗೆ ತಕ್ಕ ಶಾಸ್ತಿಯಾಯ್ತು

ದೇವರಲ್ಲಿ ನಂಬಿಕೆಯಿಲ್ಲದ ನನ್ನ ನಿಲುವನ್ನೀಗ ಬದಲಾಯಿಸಿಕೊಳ್ಳುತ್ತಿದ್ದೇನೆ. ಇದಕ್ಕಾಗಿ ಮಾ.ಮು.ಮ. ಯಡ್ಯೂರ್‌ರಿಗೆ thanks ಹೇಳಲೇಬೇಕು.

ನಾವೇ ದೇವರ ನಿಜವಾದ ಭಕ್ತರು ಹಾಗು ದೇವದೇವತೆಗಳ (ಅಯೋಧ್ಯೆಯ ರಾಮ, ಬುಡನ್‌ಗಿರಿಯ ದತ್ತ ಮುಂತಾದವರ) ಅಧಿಕೃತ ಪ್ರತಿನಿಧಿಗಳು ಎಂಬಂತೆ ಹಾರಾಡುತ್ತಿದ್ದ ಯಡ್ಯೂರ್ ಹಾಗು ಅವರ ಸೋಗಿನ ಪಡೆಗಳಿಗೀಗ ದೇವರೇ ತಕ್ಕ ಶಾಸ್ತಿ ಮಾಡಿದ್ದಾರೆ. ಅ. 3 ರ ಗಡುವಿನ ದಿನದಿಂದ ಹಿಡಿದು, ದಿ ಗ್ರೇಟ್ ಮರು ಹೊಂದಾಣಿಕೆ ಡ್ರಾಮಾದ ಬಳಿಕ ಹಾಗೂ ಅಧಿಕಾರಾವಧಿಯ 1 ವಾರದ ಕಾಲದಲ್ಲಿ ಈ ಯಡ್ಯೂರಪ್ಪ ಮಾಡಿದ್ದು ದೇಗುಲ ದರ್ಶನ, ಮಠಾಧೀಶರ ದರ್ಶನ ಹೊರತು ಬೇರೇನಿಲ್ಲ (ರಾಜೀನಾಮೆ ನಂತರ ಟೀವಿ 9ನ ಸಂದರ್ಶನದಲ್ಲಿ ಯಡ್ಯೂರಪ್ಪ ಹೇಳಿದ್ದೆಂದರೆ 'ನನ್ನ ಈ ಒಂದು ವಾರದ ಆಡಳಿತ ವೈಖರಿಯನ್ನು ನೋಡಿ ಜನ ಮೆಚ್ಚಿದರು' ಎಂದು. ತಮಾಷೆಯೆಂದರೆ ಈ ಕಾಲದಲ್ಲಿ ಕೇವಲ ಅಧಿಕಾರ ಇದ್ದಿತೇ ವಿನಃ ಯಾವುದೇ ಆಡಳಿತ ನಡೆಯಲೇ ಇಲ್ಲವಾದ ಕಾರಣ ಇದು ಕೇವಲ ಅಧಿಕಾರಾವಧಿ ಎನ್ನಬಹುದೇ ವಿನಃ ಆಡಳಿತಾವಧಿ ಎನ್ನಲಾಗದು).

ಸಂವಿಧಾನ ತತ್ವಗಳನ್ನು ಗಾಳಿಗೆ ತೂರಿ ವಿಧಾನಸೌಧದಲ್ಲಿ ಯಜ್ಞ-ಯಾಗಗಳನ್ನು ನಡೆಸಿದರೂ, ದೇಗುಲ-ಮಠಾಧೀಶರ ಕಾಲಿಗೆರಗಿದರೂ, ಜ್ಯೋತಿಷಿಗಳ ಮೊರೆಹೊಕ್ಕು ಪೂಜೆ-ಪುನಸ್ಕಾರಗಳನ್ನು ಮಾಡಿದರೂ ಈ ಸ್ವಯಂಘೋಷಿತ ದೇವಭಕ್ತರ ಪಕ್ಷ ಕರ್ನಾಟಕದ ಇತಿಹಾಸದಲ್ಲೇ ಅತ್ಯಂತ ಹೀನಾಯವಾಗಿ ಅತ್ಯಲ್ಪ ಕಾಲದಲ್ಲೇ ಉದುರಿ ಬೀಳಬೇಕಾಗಿ ಬಂದದ್ದು ದೇವರಿನ್ನು ಇದ್ದಾನೆ ಎಂಬುದಕ್ಕೆ ಒಂದು ನಿದರ್ಶನ ಎಂದು ಆಸ್ತಿಕರೆಲ್ಲ ಆಡಿಕೊಳ್ಳುತ್ತಿದ್ದಾರೆ.

ಒಂದು ಪತ್ರ

ಅಧಿಕಾರಾವಧಿಯ ಕಾಲವೆಲ್ಲ ಪೂಜೆಪುನಸ್ಕಾರಗಳಲ್ಲೇ ಮುಳುಗಿದ್ದ ಯಡ್ಯುರಪ್ಪ ವಿಶ್ವಾಸಮತ ಯಾಚನೆಯ ದಿನ ಸಂಜಯ ನಗರದ ರಾಧಾಕೃಷ್ಣ ದೇಗುಲದಲ್ಲಿ ಸಂಕಷ್ಟಹರ ಪೂಜೆ ಮಾಡಿದರೂ ಆ ದಿನ ಬಂದ ಸಂಕಷ್ಟದಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಇಂಥವನ್ನೆಲ್ಲ ನೋಡಿದಾಗ ಬೌದ್ಧರ ಕತೆಯೊಂದು ನೆನಪಿಗೆ ಬರುತ್ತದೆ. ಅದೆಂದರೆ-

ಓರ್ವ ಅಲೆಮಾರಿ ಕಳ್ಳ ಬೌದ್ಧ ಭಿಕ್ಕುಗಳಿದ್ದ ಆಶ್ರಮವನ್ನು ಹೊಕ್ಕನಂತೆ. ಯಾರ ವಿರೋಧವೂ ಇಲ್ಲದ, ಊಟಕ್ಕೆ ಕೊರತೆ ಇರದ ಅಲ್ಲೇ ಕೆಲ ದಿನದೂಡಿದ ಆತ ತನ್ನ ಚಾಳಿಯಂತೆ ಅಲ್ಲೇ ಚಿಕ್ಕಪುಟ್ಟ ಕಳ್ಳತನವನ್ನು ಮಾಡುತ್ತಲೇ ಇದ್ದ. ಆದರೆ ಅಲ್ಲಿನ ಪರಿಸರದ ಪ್ರಭಾವಕ್ಕೊಳಗಾದ ಆತನಲ್ಲಿ ಮನ ಪರಿವರ್ತನೆಯಾಗಿ ತೀವ್ರವಾದ ಪಾಪಪ್ರಜ್ಞೆ ಆತನನ್ನು ಕಾಡತೊಡಗಿತು. ಅದಕ್ಕಾಗಿ ಆತ ಅಲ್ಲಿನ ಗುರುವಿನ ಬಳಿಹೋಗಿ ತನ್ನ ತಪ್ಪನ್ನು ಹೇಳಿಕೊಂಡು ಉದ್ಧಾರದ ದಾರಿ ತೋರಲು ಬೇಡಿಕೊಂಡ. ತಾನೇ ಭಕ್ತ ಶಿರೋಮಣಿ, ಮಹಾಸಂತನೆಂಬ ಭ್ರಮೆಯಲ್ಲಿದ್ದ ಆ ಗುರುವು ಈ ಕಳ್ಳನ ಸಹವಾಸ ತೊಲಗಿದರೆ ಸಾಕೆಂಬ ದುರುದ್ದೇಶದಿಂದ "ನೀನು ನಾಳೆ ರಾತ್ರಿ ಆ ಗೋಪುರದಿಂದ ಬುದ್ಧನ ಹೆಸರಿಡಿದು ಕೆಳಹಾರಿದರೆ ಆತ ಬಂದು ಸ್ವರ್ಗಕ್ಕೆ ಒಯ್ಯುತ್ತಾನೆ" ಎಂಬ ಸುಳ್ಳನ್ನು ಹೇಳಿದ.

ಗುರುವಿನ ಮಾತನ್ನು ನಂಬಿದ ಆ ಮಾಜಿ ಕಳ್ಳ ಮರುದಿನ ಹಾಗೇ ಮಾಡಿದಾಗ ಆಶ್ಚರ್ಯಕರ ರೀತಿಯಲ್ಲಿ ಬುದ್ಧನೇ ಬಂದು ಆತನನ್ನು ರಕ್ಷಿಸಿ ಕರೆದೊಯ್ದದ್ದನ್ನು ನೋಡಿದ ಗುರು "ಇಂಥವನನ್ನೇ ಬುದ್ಧ ಕೊಂಡೊಯ್ಯಬೇಕಾದರೆ ನನ್ನಂಥ ಮಹಾಮಹಿಮನನ್ನು ಚಿನ್ನದ ರಥದಲ್ಲೇ ಬಂದು ಕೊಂಡೊಯ್ಯಲೇಬೇಕು" ಎಂದು ನಿರ್ಧರಿಸಿ ತಾನೂ ಆ ಗೋಪುರವೇರಿ ಹಾರಿ ತಲೆಯೊಡೆದು ಸತ್ತನಂತೆ. ಇದು ದೇವರೆಂದರೆ ತಲೆ ಇಲ್ಲದ, ವಿವೇಚನಾಶಕ್ತಿ ಇರದ, ತಪ್ಪು-ಸರಿಗಳ ಅರಿವಿರದ ಮೂರ್ಖನೆಂದು ತಿಳಿದವರ ಪಾಡು. `ನಮ್ಮ ಕರ್ನಾಟಕದಲ್ಲಿ ಇದೀಗ ನಡೆದಿರುವುದೂ ಇದೇನೆ.

ಅಧಿಕಾರದ ಹಪಹಪಿಗಾಗಿ ಎಂತಹ ಲಜ್ಜೆಗೆಟ್ಟ ಕೆಲಸಕ್ಕೂ ಸೈ ಎಂದು ಸಾಬೀತುಮಾಡಿದ ಈ ಮರುವಿವಾಹದ ಪ್ರಹಸನದ ಬಳಿಕ ರಾಜ್ಯಪಾಲ-ರಾಷ್ಟ್ರಪತಿಗಳೆದುರು ದಿನಗಟ್ಟಲೆ ಅತ್ತೂಕರೆದು ಅಂತೂ ಯಡಿಯೂರಪ್ಪನವರು ತಮ್ಮ ಕುರ್ಚಿಯ ಕನಸನ್ನೇನೋ ನನಸಾಗಿಸಿಕೊಂಡರು. ಇಂತಹವರ ಕೃಪೆಯಡಿಯಲ್ಲಿ ಕೆಲ ಚೆಡ್ಡಿ ಸಾಹಿತಿಗಳು, ಮಠಾಧೀಶರು ಇನ್ನೇನು ಬಾಲ ಬಿಚ್ಚಲು ತಯಾರಿ ನಡೆಸುತ್ತಿರುವಾಗಲೇ ಈ ಸರ್ಕಾರವು ಐತಿಹಾಸಿಕವಾಗಿ ಹಾಗು ಹೀನಾಯವಾಗಿ ಯಾವ ಸೂರ್ಯನಾರಾಯಣ ಯಾಗಗಳೂ work out ಆಗದೇ ಉದುರಿ ಬಿದ್ದದ್ದು ಜನಪರ ಕಾಳಜಿಯುಳ್ಳವರಿಗೆ ಸಿಕ್ಕ ಗೆಲುವು ಎಂದು ಹೇಳಬಹುದು.

-ರವಿ ಪುತ್ತೂರ, ದಕ್ಷಿಣ ಕನ್ನಡ

ಬಂಧನದಲ್ಲಿ ಸಿಲುಕಿದ್ದ 'ಈ ಬಂಧನ'

'ಈ ಬಂಧನ' ಚಿತ್ರ ವಾರ್ತಾ ಇಲಾಖೆಯ ಅಧಿಕಾರಿಗಳ ಬಂಧನದಿಂದ ಮೊನ್ನೆ ಹೊರಬಿದ್ದಿದೆ. ಎಲ್ಲವೂ ಸುಸೂತ್ರವಾಗಿ ನಡೆದಿದ್ದರೆ ಇಷ್ಟೊತ್ತಿಗಾಗಲೇ 'ಈ ಬಂಧನ' ಬಿಡುಗಡೆಯಾಗಿ ಐವತ್ತು ದಿನಗಳಾಗುತ್ತಿತ್ತು. ಆದರೆ ಇದರ ಬಿಡುಗಡೆಗೆ ಅಡ್ಡಿಯಾದವರು ವಾರ್ತಾ ಇಲಾಖೆಯ ಅಧಿಕಾರಿಗಳು.

ಅದಕ್ಕೆ ಕಾರಣವೂ ಇತ್ತು, ಇದು ಹಿಂದಿಯ 'ಭಾಗ್ಬನ್' ಚಿತ್ರದ ರಿಮೇಕ್ ಎಂಬುದು ಅಧಿಕಾರಿಗಳ ವಾದ. ಆದರೆ ಇದು ಸುಮಾರು ನಾಲ್ಕು ದಶಕಗಳ ಹಿಂದೆ ಕನ್ನಡದಲ್ಲಿ ಬಿಡುಗಡೆಯಾಗಿದ್ದ 'ಸ್ಕೂಲ್ ಮಾಸ್ಟರ್' ಚಿತ್ರದಿಂದ ಸ್ಫೂರ್ತಿ ಪಡೆದ ಚಿತ್ರ ಎಂಬುದು ನಿರ್ದೇಶಕಿ ವಿಜಯಲಕ್ಷ್ಮಿ ಸಿಂಗ್‌ರವರ ವಾದ. ವಾಸ್ತವವಾಗಿ, 'ಭಾಗ್ಬನ್' ಚಿತ್ರ 'ಸ್ಕೂಲ್ ಮಾಸ್ಟರ್'



ಚಿತ್ರದ ರೀಮೇಕ್ ಆಗಿತ್ತು ಎಂಬುದು ಎಷ್ಟು ಸತ್ಯವೋ, ಹಾಗೆಯೇ 'ಭಾಗ್ಬನ್' ಚಿತ್ರದ ಯಶಸ್ಸೇ 'ಈ ಬಂಧನ'ಕ್ಕೆ ಚಾಲನೆ ನೀಡಿತು ಎಂಬುದೂ ಅಷ್ಟೇ ಸತ್ಯ!


'ಈ ಬಂಧನ'ವನ್ನು ವೀಕ್ಷಿಸಿದ ವಾರ್ತಾ ಇಲಾಖೆಯ ಅಧಿಕಾರಿಗಳು ಇದು 'ಭಾಗ್ಬನ್' ಚಿತ್ರದ ರೀಮೇಕ್ ಎಂದು ನಿರ್ಧರಿಸಿದರಲ್ಲದೆ, ಅದಕ್ಕೆ ತೆರಿಗೆ ವಿನಾಯತಿಯನ್ನು ನಿರಾಕರಿಸಿದರು. ಅರ್ಥಾತ್, ಈ ಚಿತ್ರದ ನಿರ್ಮಾಪಕ ಕಂ ನಿರ್ದೇಶಕಿ ವಿಜಯಲಕ್ಷ್ಮಿಯವರ ಪತಿ ಜೈ ಜಗದೀಶ್‌ರವರು ಚಿತ್ರದಿಂದ ಬಂದ ಆದಾಯದ ಶೇ. 30 ಅನ್ನು ಸರಕಾರಕ್ಕೆ ತೆರಿಗೆ ರೂಪದಲ್ಲಿ ನೀಡಬೇಕಿತ್ತು.

ಇದರಿಂದ ತಪ್ಪಿಸಿಕೊಳ್ಳಲು ಜೈ ಜಗದೀಶ್ ಮತ್ತು ವಿಜಯಲಕ್ಷ್ಮಿ 'ಈ ಬಂಧನ'ಕ್ಕೆ ಮರುಚಿತ್ರೀಕರಣ ಮಾಡಲು ನಿರ್ಧರಿಸಿದರು. ಅದರಂತೆ ಢಾಕಾದಲ್ಲಿದ್ದ ಜಯಪ್ರದಾರನ್ನು ಮತ್ತೆ ಕರೆಸಿ, ವಿಷ್ಣು-ಜಯಪ್ರದಾ ಜೋಡಿಯ ಸುಮಾರು ಎರಡು ಸಾವಿರ ಅಡಿಗಳಷ್ಟು ಹೊಸ ದೃಶ್ಯಗಳನ್ನು ಚಿತ್ರಕ್ಕೆ ಸೇರಿಸಿದರು. ಈ ರಿಪೇರಿ ಕೆಲಸಕ್ಕೆಂದು ಸುಮಾರು ಮೂವತ್ತು ಲಕ್ಷ ರೂಪಾಯಿಗಳ ಹೆಚ್ಚುವರಿ ಹಣ ವೆಚ್ಚವಾಗಿದೆಯಂತೆ.

ಈ ಭಾಗಗಳನ್ನು ಸೇರಿಸಿದ ನಂತರ ವಾರ್ತಾ ಇಲಾಖೆಯ ಅಧಿಕಾರಿಗಳು ನಿಯಮಗಳ ಪ್ರಕಾರ ಈ ಚಿತ್ರ ರಿಮೇಕ್ ಅಲ್ಲ, ಸ್ವಮೇಕ್ ಎಂದು ವಾರ್ತಾ ಸರ್ಟಿಫಿಕೇಟ್ ಕೊಟ್ಟಿದ್ದಾರೆ.

ಅದೇನೇ ಇರಲಿ, ಇತ್ತೀಚಿಗೆ ವಾರ್ತಾ ಇಲಾಖೆಯ ಅಧಿಕಾರಿಗಳು ರಿಮೇಕ್ ಚಿತ್ರಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳುತ್ತಿದ್ದು, ನಿರ್ಮಾಪಕರ ನಿದ್ದೆಗೆಡಿಸುತ್ತಿದ್ದಾರೆ. ಈಗ ಸದ್ಯಕ್ಕೆ ರಾಜ್ಯಪಾಲರ ಆಡಳಿತವಿರುವುದರಿಂದ ಈ ಅಧಿಕಾರಿಗಳ ಮೇಲೆ ರಾಜಕೀಯ ಒತ್ತಡ ಹೇರಲು ಸಾಧ್ಯವಾಗುತ್ತಿಲ್ಲ ಎಂಬುದೇ ನಿರ್ಮಾಪಕರ ಗೋಳು!

'ಈ ಬಂಧನ'ಕ್ಕಾದ ಕತೆ ಕೇಳಿ ಈಗ ಗಾಂಧಿನಗರದ ರೀಮೇಕ್ ವೀರರು ಕಂಗಾಲಾಗಿ ಕುಳಿತುಕೊಂಡಿದ್ದಾರೆ.



ಬರಲಿದ್ದಾನೆ 'ಕಂದಸಾಮಿ'

ಉದ್ದುದ್ದ ಕೂದಲು ಬಿಟ್ಟು ವಿಚಿತ್ರವಾದ ವೇಷ ಧರಿಸಿ ಭ್ರಷ್ಟರನ್ನು ಶಿಕ್ಷಿಸುವ ಕತೆ ಹೊಂದಿದ್ದ, ವಿಕ್ರಮ್ ನಟಿಸಿದ್ದ 'ಅನ್ನಿಯನ್' ಚಿತ್ರವನ್ನು ಬಹುಶಃ ದಕ್ಷಿಣ ಭಾರತದ ಚಿತ್ರ ರಸಿಕರು ಇನ್ನೂ ಮರೆತಿರಲಾರರು. ಈ ಚಿತ್ರ ರಜನಿಕಾಂತ್‌ರ ಚಿತ್ರವನ್ನೂ ಮೀರಿಸುವಂತ ಗಳಿಕೆಯನ್ನೂ ತಂದುಕೊಟ್ಟಿತ್ತು. ಆದರೆ 'ಅನ್ನಿಯನ್' ನಂತರ ಬಂದ ಯಾವ ಚಿತ್ರಗಳೂ ವಿಕ್ರಮ್‌ಗೆ ಅಂಥ ಹೆಸರನ್ನು ತಂದುಕೊಡಲಿಲ್ಲ. ನಮ್ಮ ಕನ್ನಡದ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಕೂಡಾ ವಿಕ್ರಮ್‌ನನ್ನು ಹಾಕಿಕೊಂಡು 'ಮಜಾ' ಮಾಡಿದರೂ ಅದರಿಂದ ಅವರು ನಿರೀಕ್ಷಿಸಿದಷ್ಟು ಮಜಾ ಸಿಗಲಿಲ್ಲ.

'ಅನ್ನಿಯನ್' ಗಿಂತ ಮೊದಲು ಬಂದ ವಿಕ್ರಮ್‌ನ ಚಿತ್ರಗಳಾದ 'ಸೇತು', 'ದಿಲ್', 'ಕಾಶಿ', 'ಧೂಳ್', 'ಸಾಮಿ' ಚಿತ್ರಗಳು ಬಾಕ್ಸಾಫೀಸಿನಲ್ಲಿ ಹಿಟ್ ಆಗಿ ವಿಕ್ರಮ್ ಸ್ಟಾರ್‌ವ್ಯಾಲ್ಯೂವನ್ನು ತಂದುಕೊಟ್ಟಿದ್ದವು.

'ಅನ್ನಿಯನ್'ನಂತೆ ಮತ್ತೆ ಬಾಕ್ಸಾಫೀಸ್ ಮೇಲೆ ದಾಳಿ ಇಡಲು ಬರುತ್ತಿರುವವನು 'ಕಂದಸಾಮಿ'. ವಿಭಿನ್ನ ಚಿತ್ರಕತೆಯನ್ನು ಹೊಂದಿರುವ 'ಕಂದಸಾಮಿ'ಯಲ್ಲಿ ವಿಕ್ರಮ್ ಮೂರು ವಿಭಿನ್ನ ಗೆಟಪ್ ಧರಿಸಿದ್ದಾರೆ. ಮೊದಲ ಗೆಟಪ್ಪಿನಲ್ಲಿ ಮಾಮೂಲಿ ಹೀರೋನಂತೆ, ಎರಡನೆಯದರಲ್ಲಿ ಮುದಿ ಸನ್ಯಾಸಿಯಂತೆ, ಮೂರನೆಯದರಲ್ಲಿ ಹೆಣ್ಣು ವೇಶದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಈ ಚಿತ್ರದ ನಾಯಕಿಯಾಗಿ ಸ್ಟಾರ್ ಹೀರೋಯಿನ್ ಶ್ರೇಯಾ ಅಭಿನಯಿಸುತ್ತಿದ್ದಾಳೆ. ಸೂಸಿ ಗಣೇಶನ್ ನಿರ್ದೇಶಿಸುತ್ತಿರುವ ಈ ಚಿತ್ರ ದಕ್ಷಿಣ ಭಾರತದ ಚಿತ್ರ ಪ್ರೇಮಿಗಳಲ್ಲಿ ಒಂದು ರೀತಿಯ ಕ್ಯೂರಿಯಾಸಿಟಿಯನ್ನು ಹುಟ್ಟುಹಾಕಿದೆ. 2008ರ ಹೊಸ್ತಿಲಿಗೆ ಬರುವ 'ಕಂದಸಾಮಿ' 'ಅನ್ನಿಯನ್'ನನ್ನು ಮೀರಿಸುತ್ತಾನ ಎಂಬುದನ್ನು ಕಾದುನೋಡಬೇಕು.









ಭವ್ಯಳ ಬಗ್ಗೆ ತಿರಸ್ಕಾರ



ಮಾಲಾಶ್ರೀ ಆಗಮನಕ್ಕಿಂತ ಮೊದಲು ಮಿಂಚಿದ್ದ ನಟಿಯರಲ್ಲಿ ಭವ್ಯ ಕೂಡ ಇದ್ದರು. ಆದರೆ ಯಾವಾಗ 'ನಂಜುಂಡಿ ಕಲ್ಯಾಣ' ಚಿತ್ರದ ಮೂಲಕ ಮಾಲಾಶ್ರೀ ಎಂಬ ಮಾಯಾಂಗನೆ ಗಾಂಧಿನಗರಕ್ಕೆ ಕಾಲಿಟ್ಟಳೋ ಆ ರಭಸಕ್ಕೆ ತರಗೆಲೆಯಂತೆ ಉರುಳಿದ ಕನ್ನಡದ ನಾಯಕಿಯರಲ್ಲಿ ಭವ್ಯ ಕೂಡಾ ಒಬ್ಬರು. ಹೀಗಾಗಿ ಮಾಲಾಶ್ರೀ ಎಫೆಕ್ಟ್‌ನಿಂದಾಗಿ ಅಷ್ಟೊಂದು ವಯಸ್ಸಾಗದಿದ್ದರೂ ಈಕೆ ದಿಢೀರನೆ ನೇಪಥ್ಯಕ್ಕೆ ಸರಿಯುವಂತಾಯಿತು.

ಆಮೇಲೆ ಈ ಆಘಾತದಿಂದ ಸುಧಾರಿಸಿಕೊಂಡ ಭವ್ಯಾ ಆರಂಭದಲ್ಲಿ ನಿರಾಕರಿಸಿದ ತಾಯಿ ಮತ್ತು ಅತ್ತೆ ಪಾತ್ರಗಳನ್ನು ಮಾಡುತ್ತಾ ಬಂದರು.

ಈಗ ವಿಷಯ ಅದಲ್ಲ, ಮೂರು ತಿಂಗಳ ಹಿಂದೆ ಈಕೆ ಮನೆಯಲ್ಲಿ ಕಾಲುಜಾರಿಬಿದ್ದು ಬೆನ್ನುಮೂಳೆ ಮುರಿದುಕೊಂಡರು. ಮೂರು ತಿಂಗಳ ಕಾಲ ಆಸ್ಪತ್ರೆಯಲ್ಲಿ ಅಂಗಾತವಾಗಿ ಮಲಗಬೇಕಾಯಿತು. ಮೊನ್ನೆ ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ಬಂದಿದ್ದಾರೆ. ಆದರೆ ಕನಿಷ್ಠ ಇನ್ನು ಆರು ತಿಂಗಳಾದರೂ ಆಕೆ ಬೆಡ್‌ರೆಸ್ಟ್‌ನಲ್ಲಿರಬೇಕು ಎಂದು ವೈದ್ಯರು ಸೂಚಿಸಿದ್ದಾರಂತೆ.

ಇಂತಹ ನೋವಿನ ಸಂದರ್ಭದಲ್ಲಿ ಆಕೆಗೆ ಮತ್ತೊಂದು ಆಘಾತವೇನೆಂದರೆ, ಉದ್ಯಮದಿಂದ ಯಾರೊಬ್ಬರೂ ಕೂಡ ಆಕೆಯನ್ನು ವಿಚಾರಿಸಲು ಆಸ್ಪತ್ರೆಗೆ ಬರಲಿಲ್ಲ; ಕನಿಷ್ಠ ಫೋನಿನಲ್ಲಿ ಕೂಡಾ ಆಕೆಯ ಆರೋಗ್ಯದ ಬಗ್ಗೆ ವಿಚಾರಿಸಿಕೊಳ್ಳಲಿಲ್ಲ. ಹೇಗಿದೆ ನೋಡಿ ನಮ್ಮ ಕನ್ನಡ ಚಿತ್ರರಂಗ!!

ಜನವರಿಗೆ ಲಾಂಗ್‌ಜಂಪ್!

ಡಿಸೆಂಬರಿನ ಗಢಗಢ ನಡುಗಿಸುವ ಚಳಿಗೆ ತಮ್ಮ ಚಿತ್ರಗಳನ್ನು ರಿಲೀಜ್ ಮಾಡಬೇಕೆಂದು ಪಣ ತೊಟ್ಟು ಬಹಳಷ್ಟು ಜನ ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ. ಆದರೂ ಅಂದುಕೊಂಡಷ್ಟು ಚಿತ್ರಗಳು ಈ ತಿಂಗಳೇ ರಿಲೀಜ್ ಆಗುತ್ತಾ ಅನ್ನೋದೇ ಅನುಮಾನ.

ಯಾಕೆಂದರೆ ಹಲವು ದಿನಗಳಿಂದ ರೀಲು ಸುತ್ತಿ ಸುತ್ತೀ ಕಡೆಗೂ ಬಿಡುಗಡೆ ಹಂತಕ್ಕೆ ಬಂದಿರುವ 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರ ಪ್ರಾಣಿದಯಾ ಸಂಘಟನೆಗಳಿಂದ ಸಮಸ್ಯೆ ಎದುರಿಸುತ್ತಿದೆ. ಅನುಮತಿ ಇಲ್ಲದೆ ಪ್ರಾಣಿಗಳನ್ನು ಬೇಕಾಬಿಟ್ಟಿ ಚಿತ್ರದಲ್ಲಿ ತೊಡಗಿಸಿಕೊಂಡಿರುವುದೇ ಇದಕ್ಕೆ ಕಾರಣವಾಗಿದೆ. ಈ 'ಪ್ರಾಣಿ'ಗಳ ಕಾಟದಿಂದ ಪಾರಾಗಲು ಹಲವು ವಾರಗಳೇ ಬೇಕಾಗುತ್ತದೆ.



ಇನ್ನು 'ಈ ಬಂಧನ' ಹಿಂದಿಯ 'ಭಾಗ್ಬನ್' ಚಿತ್ರದ ರೀಮೇಕ್ ಎಂಬ ವಾರ್ತಾ ಇಲಾಖೆಯ ಆಪಾದನೆಯ ಮೇರೆಗೆ ಹಲವಾರು ಕಡೆ ಕಟಿಂಗು, ಶೇವಿಂಗನ್ನು ಮುಗಿಸಿಕೊಂಡು ಈಗತಾನೇ ಡ್ರೆಸ್ಸಿಂಗ್ ಹಂತಕ್ಕೆ ಬಂದು ನಿಂತಿದೆ. 'ಗಾಳಿಪಟ'ಕ್ಕೆ ಬಾಲಂಗೋಚಿಯೇ ರೆಡಿಯಾಗಿಲ್ಲ, ಆಡಿಯೋ ಕೂಡಾ ರಿಲೀಜ್ ಆಗಿಲ್ಲ ಅಂದಮೇಲೆ ಈ ವರ್ಷ 'ಗಾಳಿಪಟ' ಹಾರುವ ಸಾಧ್ಯತೆ ಇಲ್ಲವೇ ಇಲ್ಲ ಎಂದಾಯ್ತು. ಇನ್ನು "'ಗಾಳಿಪಟ' ಹಾರುವ ತನಕ ಸೂರಿ ಕೂಡ ತಮ್ಮ 'ಇಂತಿ ನಿನ್ನ ಪ್ರೀತಿಯ' ಚಿತ್ರಕ್ಕೆ ಇತಿಶ್ರೀ ಹಾಡುವುದಿಲ್ಲ. 'ಗಜ' ಕೂಡಾ 'ಪಿ. ರಾಮಚಂದ್ರರಾವ್ ಅವರ ಕಾದಂಬರಿ ಆಧಾರಿತ' ಎಂದು ಸ್ಲೋಗನ್ನು ಹೊಂದಿದ್ದರೂ, ತೆಲುಗಿನ 'ಭದ್ರ' ಸಿನಿಮಾದ ರಿಮೇಕು ಅಂತ ಈಗ ಗೊತ್ತಾಗಿದೆ. ಈ ಕಾರಣಕ್ಕಾಗಿ 'ಗಜ' ತನ್ನ ಗಾಂಭೀರ್ಯ ಕಳೆದುಕೊಂಡಿದೆ. ಸುದೀಪ್‌ನ 'ಗೂಳಿ'ಯಂತೂ ಯಾವುದೇ ಸದ್ದಿಲ್ಲದೇ ಸುಮ್ಮನೆ ಮಲಗಿದೆ.

ಇನ್ನು ಉಳಿದವರು 'ಲವಕುಶ' ಮಾತ್ರ. 'ಲವ-ಕುಶ' ಬಂದರೂ ಎಷ್ಟು ದಿನ ಉಳಿಯುತ್ತಾರೆ ಎಂಬುದು ಮಾತ್ರ ಹೇಳೋಕ್ಕಾಗಲ್ಲ, ಯಾಕೆಂದ್ರೆ ಇದು ಸಾಯಿ ಬ್ರಾಂಡು! ಇದ್ರೆ ಇದ್ದಂಗೆ, ಬಿದ್ರೆ ಬಿದ್ದಂಗೆ.

ಹೀಗಾಗಿ ಬಹಳಷ್ಟು ಚಿತ್ರಗಳು ಬಿಡುಗಡೆಗಾಗಿ ಡಿಸೆಂಬರ್‌ನಿಂದ ಜನವರಿಗೆ ಲಾಂಗ್‌ಜಂಪ್ ಮಾಡುವ ಸಾಧ್ಯತೆಯೇ ಹೆಚ್ಚು.

ಶುಭಾ ಪೂಂಜಾ ಮತ್ತು ಗಾಂಧಿ ಲೆಕ್ಕ



'ಚೆಂಡ'ನ ನಾಯಕಿ ಶುಭಾ ಪೂಂಜಾ ಮತ್ತು ನಮ್ಮ ಕನ್ನಡದ ಕರಿಯ ವಿಜಯ್ ಬಗೆಗಿನ ಡಿಂಗುಡಾಂಗುಗಳ ಗಾಸಿಪ್‌ಗಳು ಎಲ್ಲೆಡೆ ಕೇಳಿಬರುತ್ತಿವೆ. ಆದರೆ ಪೂಂಜಾ ಮಾತ್ರ ಪ್ರೆಸ್‌ಮೀಟ್ ಕರೆದು "ನನಗೂ ವಿಜಗೂ 'ಅಂತಹ' ಸಂಬಂಧವೇನೂ ಇಲ್ಲ, ನಾನು ಇನ್ನೂ ಚಿಕ್ಕವಳು. ಶ್ರೀದೇವಿ, ಕಲ್ಪನಾ, ವೈಜಯಂತಿಯರಂತೆ ದೊಡ್ಡ ನಟಿಯಾಗುವ ಕನಸು ಕಾಣುತ್ತಿರುವವಳು... ಜೊತೆಗೆ ನನಗೆ ಸಿನಿಮಾದಲ್ಲಿನ ಅವಕಾಶ ಮುಖ್ಯವೇ ಹೊರತು ದುಡ್ಡು ಮುಖ್ಯವಲ್ಲ" ಎಂದು ಪಬ್ಲಿಕ್ಕಾಗಿ ಅಫಿಡವಿಟ್ಟು ಕೊಟ್ಟುಬಿಟ್ಟಿದ್ದಾಳೆ.

ಏನೋ ಈ ಹುಡುಗಿ ಪೂಂಜಾ ಬಾಯಿಮಾತಿಗಾಗಿ 'ದುಡ್ಡು ಮುಖ್ಯವಲ್ಲ' ಎಂದಾಕ್ಷಣ ನಮ್ಮ ಗಾಂಧಿನಗರಿಗರು ಸುಮ್ಮನೇ ಬಿಡುತ್ತಾರೆಯೇ? ಸೀದಾ ಅವಳ ಮನೆ ಮುಂದೆ ಹೋಗಿ ಸಾಲುಸಾಲಾಗಿ ಕಾಲ್‌ಶೀಟ್‌ಗಾಗಿ ಕ್ಯೂ ನಿಂತಿದ್ದಾರಂತೆ. ಒಪ್ಪಿಕೊಂಡ ದುಡ್ಡಿಗೇ ಉಂಡೆ ನಾಮ ತಿಕ್ಕುವ ಈ ಸಿನಿಮಾ ಮಂದಿ ದುಡ್ಡು ಬೇಡ ಅವಕಾಶ ಮಾತ್ರ ಕೊಡಿ ಎಂದರೆ ಸುಮ್ಮನಿರ್ತಾರ?

ಹೇಳಿಕೇಳಿ ಈ ಮಂದಿ ಗಾಂಧಿ ಲೆಕ್ಕಕ್ಕೇ ಫುಲ್ ಫೇಮಸ್ಸು ಅಲ್ವಾ?

ಈಗ ಎಂಟ್ರಿ, ಆಮೇಲೆ ಎಕ್ಸಿಟ್?

'ವಾಯುಪುತ್ರ'ನ ಮುಹೂರ್ತಕ್ಕೆ ಕನ್ನಡ ಚಿತ್ರರಂಗದ ಬಹುತೇಕ ಹಾಜರಿ; ಮಾಜಿ ನಾಯಕನಟರೆಲ್ಲ ಬಂದು ಹೊಸ ಹುಡುಗ ಚಿರಂಜೀವಿ ಸರ್ಜಾನಿಗೆ ಶುಭ ಕೋರಿದರು. ಈತ ಅರ್ಜುನ್ ಸರ್ಜಾ ಮತ್ತು ಕಿಶೋರ್ ಸರ್ಜಾ ಸಹೋದರರ ತಂಗಿಯ ಮಗ.

ಈಗ ಈ ಚಿತ್ರ ರಿಮೇಕೋ, ಸ್ವಮೇಕೋ ಎಂಬ ಚರ್ಚೆ ಗಾಂಧಿನಗರದಲ್ಲಿ ಹುಟ್ಟಿಕೊಂಡಿದೆ. ಇದು ಖಂಡಿತವಾಗಿಯೂ ರಿಮೇಕಲ್ಲ ಎಂದು ಅರ್ಜುನ್ ಸರ್ಜಾ ಸ್ಪಷ್ಟಪಡಿಸಿದರು. ಆದರೆ ಇದು ತಮಿಳಿನ 'ಸಂಡೈ ಕೋಳಿ' ಎಂಬ ಜನಪ್ರಿಯ ಚಿತ್ರದ ರಿಮೇಕು ಎಂಬುದು ಹಲವರ ವಾದ. ಪಾಪ ಹೊಸ ಹುಡುಗ ಚಿರಂಜೀವಿ ಸರ್ಜಾ ಚಿತ್ರರಂಗಕ್ಕೆ ಕಾಲಿಡುತ್ತಿರುವಾಗ ಆತನ ಪರ್ಸನಾಲಿಟಿ ಚರ್ಚೆಯಾಗದೆ, ಜಿಜ್ಞಾಸೆ ಕೇಂದ್ರಬಿಂದುವಾಗಿದ್ದು ದುರಂತ. ಅಂದಹಾಗೆ ನೋಡಲು ಅರ್ಜುನ್ ಸರ್ಜಾ ಥರವೇ ಕಾಣಿಸುವ ಈ ಹುಡುಗ ಒಂದು ವೇಳೆ ಮೊದಲ ಚಿತ್ರದಲ್ಲೇ ಹಿಟ್ ಆದರೂ ಆತ ಕನ್ನಡಕ್ಕೆ ದಕ್ಕುವುದಿಲ್ಲ. ಅವನ ಮಾವಂದಿರಂತೆ ಆತನೂ ತೆಲುಗು ತಮಿಳಿಗೆ ಹಾರುತ್ತಾನೆ ಎಂಬ ಗಾಂಧಿನಗರದ ಮಾತು ತಳ್ಳಿಹಾಕುವಂತಿಲ್ಲ.

R B P LANKESH, Kannada Weekly Price Rs. 10/- 12-12-2007 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-



ಪ್ರೇಮ್ ಎಂಬ ನತದೃಷ್ಟ

ಪ್ರೇಮ್ ಎಂಬ ಸುಂದರ ಹುಡುಗ ಕಳೆದ ವರ್ಷ ಗಾಂಧಿನಗರದಲ್ಲಿ ಹವಾ ಎಬ್ಬಿಸಿದ್ದ. ಆತ ರಮ್ಯಾ ಜೊತೆ ನಟಿಸಿದ 'ಜೊತೆಜೊತೆಯಲಿ' ಚಿತ್ರ ರಾಜ್ಯದ ಬಹುತೇಕ ಕೇಂದ್ರಗಳಲ್ಲಿ ಸಿಲ್ವರ್ ಜ್ಯೂಬಿಲಿ ಆಚರಿಸಿದ್ದರಿಂದ ಆತನಿಗೆ ದಿಢೀರನೆ ತಾರಾಮೌಲ್ಯ ಬಂದಿತ್ತು.

ಆದರೆ ಪ್ರೇಮ್ ತನ್ನ ಚಿತ್ರಗಳ ಆಯ್ಕೆಯಲ್ಲಿ ಸಂಪೂರ್ಣವಾಗಿ ಮುಗ್ಗರಿಸಿದ್ದಾನೆ. 'ಜೊತೆಜೊತೆಯಲಿ' ನಂತರ ಬಂದ 'ಪಲ್ಲಕ್ಕಿ' ಸುಮಾರಾಗಿತ್ತು. ಇದಾದನಂತರ ತೆರೆಕಂಡ 'ಸವಿಸವಿ ನೆನಪು' ದೊಡ್ಡ ನಿರೀಕ್ಷೆಯನ್ನು ಹುಟ್ಟಿಸಿದ್ದರೂ ಪ್ರೇಮ್ ಪಾಲಿಗೆ ಅದೊಂದು ಕೆಟ್ಟ ನೆನಪು ಎಂಬಂತಾಯಿತು. ಈಗ 'ಗುಣವಂತ' ಕೂಡ ನೆಲ ಕಚ್ಚುವುದು ಗ್ಯಾರಂಟಿಯಾಗಿದೆ.

ಇದೇ ಸಮಯದಲ್ಲಿ 'ಮುಂಗಾರು ಮಳೆ'ಯ ಗಣೇಶ್ ಬರೀ ರಿಮೇಕ್ ಚಿತ್ರಗಳಲ್ಲಿ ನಟಿಸುತ್ತಾ ಯಶಸ್ವಿಯಾಗಿದ್ದಾನೆ. ಈಗ ತನ್ನ ಸಂಭಾವನೆಯನ್ನು ಒಂದು ಕೋಟಿ ರೂಪಾಯಿಗೆ ಏರಿಸಿರುವ ಗಣೇಶ್ ಪುರುಸೊತ್ತಿಲ್ಲದಂತೆ ಎರಡು ತಿಂಗಳಿಗೊಂದು ಚಿತ್ರ ಮುಗಿಸುತ್ತಿದ್ದಾನೆ. ಆತನ ಚಿತ್ರಗಳೆಲ್ಲವೂ ನೂರು ದಿನ ಗ್ಯಾರಂಟಿ ಎಂಬಂತಾಗಿದೆ. ಆದರೆ ಆತನಲ್ಲಿ ಮೆಚ್ಚುವಂತಹ ಅಂಶಗಳು ತುಂಬಾ ವಿರಳ!

ಅದಕ್ಕೆ ತದ್ವಿರುದ್ಧವಾದ ಹಾದಿಯಲ್ಲಿ ಪ್ರೇಮ್ ಇದ್ದಾನೆ. ಈತ ಬರೀ ಸ್ವಮೇಕ್ ಚಿತ್ರಗಳಲ್ಲಿ ನಟಿಸುತ್ತಿದ್ದರೂ, ನಿರ್ದೇಶಕ ಮತ್ತು ಕತೆಯ ಆಯ್ಕೆಯಲ್ಲಿ ಎಡವಿದ್ದರಿಂದ ಇವತ್ತು ಆತನ ವೃತ್ತಿಜೀವನವೇ ಕವಲುದಾರಿಯಲ್ಲಿದೆ. ಮೂರು ಸತತ ಸೋಲುಗಳಿಂದ ಜರ್ಜರಿತನಾಗಿರುವ ಪ್ರೇಮ್ ಇವತ್ತು ಗಾಂಧಿನಗರದ ಜನರಿಗೆ ಭಾರವಾಗಿದ್ದಾನೆ, ಹೀರೋ ಆಗಿದ್ದ ಈ ಹುಡುಗ ಜೀರೋ ಆಗಿದ್ದಾನೆ. ನಿಜವಾಗಲೂ ಇದೊಂದು ದುರಂತ.

ಏಕ್ ಸಿನಿಮಾ ಕಾ ಸುಲ್ತಾನ್ ರತ್ನಜ!

ಗಾಂಧಿನಗರದಲ್ಲೂ ಓರ್ವ ಏಕ್ ದಿನ್ ಕಾ ಸುಲ್ತಾನ್ ಇದ್ದಾನ
ಆತನ ಹೆಸರು ರತ್ನಜ. ಈತ ಕಳೆದ ಮೂರು ವರ್ಷಗಳಲ್ಲಿ ನಿರ್ದೇಶಿಸಿರುವುದು
ಒಂದೇ ಒಂದು ಚಿತ್ರವನ್ನ. ಅದು 'ನೆನಪಿರಲಿ'. ! ಆ ಚಿತ್ರ ಹಿಟ್
ಆದರೂ ರತ್ನಜನಿಗೆ ದೊಡ್ಡ ಹೀರೋಗಳ ಮತ್ತು ನಿರ್ಮಾಪಕರ ಚಿತ್ರಗಳ
ಸಿಗಲೇ ಇಲ್ಲ. ಮತ್ತೆ ಆತನಿಗೆ ಸಿಕ್ಕಿದ್ದು ಅದೇ 'ನೆನಪಿರಲಿ' ಚಿತ್ರದ
ನಾಯಕ ಪ್ರೇಮ್, ನಿರ್ಮಾಪಕ ಅಜಯ್ ಗೌಡ ಮತ್ತು ಸಂಗೀತ ನಿರ್ದೇಶಕ
ಹಂಸಲೇಖ. ಇವರೆಲ್ಲರೊಂದಿಗೆ ಸೇರಿ ರತ್ನಜ ನಿರ್ದೇಶಿಸಿದ 'ಹೊಂಗನಸು'
ಈಗ ಸಂಪೂರ್ಣವಾಗಿದ್ದು ತೆರೆಕಾಣಲು ಸಿದ್ಧವಾಗಿದೆ.

ಇದಕ್ಕೆ ಸಂಬಂಧಪಟ್ಟ ಗೋಷ್ಠಿಯಲ್ಲಿ ವಿನಯಾಪ್ರಸಾದ್, ಪ್ರೇಮ್
ಸೇರಿದಂತೆ ಬಹುತೇಕ ಎಲ್ಲ ಕಲಾವಿದರು ರತ್ನಜ ಎಂಬ 'ಒಂದು ಚಿತ್ರದ
ಸರದಾರ'ನನ್ನು ಇಂದ್ರ, ಚಂದ್ರ, ಸೂರ್ಯ ಎಂದು ಹೊಗಳಿದ್ದು ಅಸಹ್ಯ
ಹುಟ್ಟಿಸುವಂತಿತ್ತು. ಆದರೆ ಅವರೆಲ್ಲರ ನಡುವೆ ಚೇತನ್ ಎಂಬ ಯುವ ಕಲಾವಿದ ರತ್ನಜರ ಹುಂಬತನ ಮತ್ತು ತಿಕ್ಕಲುತನಗಳನ್ನು ಧೈರ್ಯವಾಗಿ ಹೇಳಿದ್ದು ಮೆಚ್ಚುವಂತಿತ್ತು.

ಒಟ್ಟಾರೆಯಾಗಿ ಹೇಳುವುದಾದರೆ, ಈ ರತ್ನಜ ಎಂಬ ಯುವ ನಿರ್ದೇಶಕ ಪ್ರತಿಭೆ, ಹುಂಬತನ ಮತ್ತು ತಿಕ್ಕಲುತನವನ್ನು ಮೈಗೂಡಿಸಿಕೊಂಡಿರುವ ಐಲು ಮನುಷ್ಯ. ಒಂದೇ ಒಂದು ಚಿತ್ರ ಯಶಸ್ಸಿಗೇ ಇದೆಲ್ಲಾ ಸ್ವಲ್ಪ ಜಾಸ್ತಿಯೇ ಆಯ್ತು. ಆತ ತನ್ನ ದೌರ್ಬಲ್ಯಗಳನ್ನು ಬದಿಗಿಟ್ಟು ಪ್ರತಿಭೆಯನ್ನು ತೋರಿಸಬೇಕಾಗಿದೆ. ಆ ಬಗ್ಗೆ ರತ್ನಜ ಕ್ರಿಯಾಶೀಲನಾಗಲಿ.





ಹುಚ್ಚಿಯಾಗಲಿದ್ದಾಳೆ ತಾರಾ

ಹಲವು ದಶಕಗಳ ಹಿಂದೆ ಕನ್ನಡ ಸಿನಿಮಾ ಪ್ರೇಕ್ಷಕರನ್ನು ತನ್ನ ಭಾವಪೂರ್ಣ ನಟನೆ, ವೈಯ್ಯಾರ ಮತ್ತು ಪ್ರೇಮ ಪ್ರಕರಣಗಳಿಂದ ಮೋಡಿ ಮಾಡಿದ್ದ ಬೆಳ್ಳಿಮೋಡದ ಕಲ್ಪನಾ ಮತ್ತೆ ಬೆಳ್ಳಿಪರದೆಯ ಮೇಲೆ ಕಾಣಿಸಲಿದ್ದಾರೆ. ಅರ್ಥಾತ್ ಕಲ್ಪನಾರವರ ರಂಗುರಂಗಿನ ಆತ್ಮ ಚರಿತ್ರೆಯನ್ನು ಸಿನಿಮಾ ಮಾಡಲು ತಯ್ಯಾರಿ ನಡೆಯುತ್ತಿದೆ.

ನಮಗೆ ಬಂದಿರುವ ಸುದ್ದಿಯ ಪ್ರಕಾರ ಭೂಗತ ಲೋಕದ ಒಂದು ಮಗ್ಗುಲನ್ನು ತೆರೆದಿಟ್ಟ 'ಆ ದಿನಗಳು' ಚಿತ್ರತಂಡದ ತಂತ್ರಜ್ಞರೇ ಮಾಯಾಲೋಕದ ಈ ಮಾಯೆಯ ಬದುಕನ್ನು ಬೆಳ್ಳಿತೆರೆಗೆ ತರಲು ಹೊರಟಿದ್ದಾರೆ. ಚೈತನ್ಯ ಈ ಚಿತ್ರವನ್ನು ನಿರ್ದೇಶಿಸಲಿದ್ದು ಗಿರೀಶ್ ಕಾರ್ನಾಡ್ ಚಿತ್ರಕತೆ ಬರೆಯುವುದು ಬಹುತೇಕ ಖಚಿತವಾಗಿದೆ. ವೇಣು ಈಗಾಗಲೇ ಈ ಚಿತ್ರದ ಛಾಯಾಗ್ರಾಹಕರಾಗಿ ಆಯ್ಕೆಯಾಗಿದ್ದಾರೆ. ಆದರೆ ಕುತೂಹಲ ವಿರುವುದು ಕಲ್ಪನಾ ಪಾತ್ರವನ್ನು ಯಾವ ನಟಿ ಮಾಡುತ್ತಾಳೆ ಎಂಬುದು.

ಸಾಧಾರಣವಾಗಿ ನಮ್ಮ ಎಲ್ಲಾ ನಟಿಯರು 'ಕಲ್ಪನಾರವರು 'ಶರಪಂಜರ' ಚಿತ್ರದಲ್ಲಿ ನಟಿಸಿದ್ದಂತೆ ಹುಚ್ಚಿಯ ಪಾತ್ರ ಮಾಡಬೇಕೆಂಬುದು ತನ್ನ ವೃತ್ತಿ ಜೀವನದ ಮಹತ್ವಾಕಾಂಕ್ಷೆ' ಎಂದು ಒಂದಲ್ಲ ಒಂದು ಬಾರಿ ಹೇಳಿದ್ದಾರೆ. ಹಾಗೆ ಹೇಳಿದ್ದವರ ಪಟ್ಟಿಯಲ್ಲಿ ಪ್ರೇಮ, ಶೃತಿ, ಸುಧಾರಾಣಿ, ತಾರಾ, ಮಾನ್ಯ ರಕ್ಷಿತಾ, ರಮ್ಯಾ ಕೂಡ ಸೇರಿದ್ದಾರೆ. ಈಗ ಆ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳುವ ಅವಕಾಶ ಯಾರ ಪಾಲಾಗಲಿದೆ ಎಂಬ ಕುತೂಹಲ ಗಾಂಧಿನಗರದಲ್ಲಿ ಹಬ್ಬಿದೆ.

ಕಲ್ಪನಾರವರ ಜೀವನವನ್ನು ಬೆಳ್ಳಿ ತೆರೆಯ ಮೇಲೆ ನಿರ್ವಹಿಸುವುದು ಯಾವುದೇ ನಟಿಗೂ ಒಂದು ದೊಡ್ಡ ಸವಾಲು. ಈ ಸವಾಲನ್ನು ಈಗಾಗಲೇ ತಾರಾ ಸ್ವೀಕರಿಸಿದ್ದಾರೆಂಬ ಸುದ್ದಿ ಬಂದಿದೆ.

ಈ ಸುದ್ದಿ ನಿಜವಾಗಿದ್ದರೆ ಇತರೆ ನಟಿಯರಿಗೆ ಅಪಾರ ಹೊಟ್ಟೆಕಿಚ್ಚು ಆಗುವುದರಲ್ಲಿ ಸಂಶಯವಿಲ್ಲ.

ಹೆಸರು ಬದಲಾದರೆ 'ಗುಣ' ಬದಲಾಗುತ್ತಾ?



'ಗುಣವಂತ' ಎಂಬ ಟೈಟಲ್ ನೋಡಿ ನೀವು ಈ ಚಿತ್ರ ನೋಡಲು ಹೋದರೆ ನಿಮಗೆ ತಲೆ ಚಿಟ್ಟು ಹಿಡಿಯುವುದು ಗ್ಯಾರೆಂಟಿ.

ಇದನ್ನು ನಿರ್ದೇಶಿಸಿರುವವರ ಹೆಸರು ರಘುವರ್ಧನ್. ಹಾಗಂತ ಇವರು ಹೊಸ ನಿರ್ದೇಶಕರು ಎಂದು ನೀವು ಭಾವಿಸಿದರೆ ನಿಮ್ಮ ಊಹೆ ತಪ್ಪು. ಹಿಂದೊಮ್ಮೆ ಈ ಮನುಷ್ಯ ಶಿವಾಜಿರಾವ್ ಎಂಬ ಹೆಸರಿನಲ್ಲಿ ಸಾಧು ಕೋಕಿಲಾರನ್ನು ಹೀರೋ ಮಾಡಿ 'ತಿಮ್ಮರಾಯಿ' ಎಂಬ ಚಿತ್ರ ತಗಡು ತೆಗೆದಿದ್ದರು. ಸಾಧು ಕೋಕಿಲಾ ಹೀರೋ ಆಗಿ ಪಾತ್ರ ನಿರ್ವಹಿಸಿದ್ದರೇನೋ ನಿಜ, ಆದರೆ ಆ ಚಿತ್ರ ಬಾಕ್ಸಾಫೀಸಿನಲ್ಲಿ ಮಕಾಡೆ ಮಲಗಿತ್ತು. ಇದು ರಘುವರ್ಧನ್ ಉರುಫ್ ಶಿವಾಜಿರಾವ್ ಎಂಬಾತನ ಚಿಕ್ಕ ಇತಿಹಾಸ.

ಆದರೆ ನಿರ್ದೇಶಕ ತನ್ನ ಹೆಸರು ಬದಲಾಯಿಸಿಕೊಂಡ ಮಾತ್ರಕ್ಕೆ ಆತನಲ್ಲಿರುವ 'ಗುಣ' ಬದಲಾಗುತ್ತದೆಯೇ? 'ಗುಣವಂತ' ಚಿತ್ರದಲ್ಲಿ ಸಾಧು ಕೋಕಿಲಾ ಬದಲಾಗಿ ಯುವ ನಟ ಪ್ರೇಮ್ ನಾಯಕನಾಗಿದ್ದರೂ ರಘುವರ್ಧನ್ ಅಲಿಯಾಸ್ ಶಿವಾಜಿರಾವ್‌ನ 'ಪ್ರತಿಭೆ' ಮಾತ್ರ ಇನ್ನೂ ಅದೇ ಕಳಪೆ ಮಟ್ಟದ್ದೇ ಆಗಿದೆ. ಯಾಕೆಂದರೆ 'ಗುಣವಂತ' ಸಕತ್ ಬೋರ್ ಹೊಡೆಸುತ್ತಾನೆ. ಕತೆ ಇಲ್ಲದೇ ರೀಲು ಸುತ್ತುತ್ತಾನೆ. ಹಾಸ್ಯ ದೃಶ್ಯಗಳೂ ಹಾಸ್ಯಾಸ್ಪದವಾಗಿವೆ. ಎರಡು ಹಾಡಿನ ಚಿತ್ರೀಕರಣ ಮಾತ್ರ ಸುಂದರವಾಗಿ ಮೂಡಿಬಂದಿದೆ. ಆದರೆ ಅವುಗಳನ್ನು ನೃತ್ಯ ನಿರ್ದೇಶಕರೇ ನಿರ್ವಹಿಸಿರುವುದರಿಂದ ಅವರಿಗೆ ಅದರ ಕ್ರೆಡಿಟ್ಟು ಹೋಗುತ್ತದೆ, ಮತ್ತು ನಿರ್ದೇಶಕನಿಗೆ ಬರೀ ಡೆಬಿಟ್ಟು ಉಳಿಯುತ್ತದೆ!

ದಿವ್ಯ ಸ್ಪಂದನ ಆದ ರಮ್ಯಾ

ಕನ್ನಡ ಚಿತ್ರರಂಗದಿಂದ ಈ ವರ್ಷ ಬಹುತೇಕ ಮಾಯವಾಗಿರುವ ರಮ್ಯಾ ಈಗ ತಮಿಳು ಚಿತ್ರರಂಗದಲ್ಲಿ ಮಿಂಚುತ್ತಿದ್ದಾಳೆ. ರಜನೀಕಾಂತ್‌ರವರ ಅಳಿಯ ಧನುಷ್‌ನೊಂದಿಗೆ ಆಕೆ ನಟಿಸಿರುವ 'ಪೊಲ್ಲಾವದನ್' ಎಂಬ ಸಿನಿಮಾ ಹಿಟ್ ಆಗಿರುವುದೇ ಇದಕ್ಕೆ ಕಾರಣ.

ಚೆನ್ನೈನಲ್ಲಿ ದಿವ್ಯ ಸ್ಪಂದನ ಎಂದು ತನ್ನ ಹೆಸರನ್ನು ಬದಲಾಯಿಸಿಕೊಂಡಿರುವ ಬೆಂಗಳೂರಿನ ರಮ್ಯಾಳಿಗೆ ಆ ಚಿತ್ರದಲ್ಲಿ ಅಷ್ಟು ದೊಡ್ಡ ಪಾತ್ರವೇನಿಲ್ಲ. ಅದರಲ್ಲಿ ಹೀರೋನೇ ಪ್ರಮುಖವಾಗಿದ್ದು ಆತನೊಂದಿಗೆ ಒಂದೆರಡು ಹಾಡು ಮತ್ತು ದೃಶ್ಯಗಳಲ್ಲಿ ಮಾತ್ರ ರಮ್ಯಾ ಕಾಣಿಸಿಕೊಂಡಿದ್ದಾಳಂತೆ. ಆದರೆ ಆ ಬೆರಳೆಣಿಕೆಯಷ್ಟು ದೃಶ್ಯಗಳಲ್ಲೂ ಆಕೆ ಅಂದಚೆಂದದ ಉಡುಪುಗಳನ್ನು ತೊಟ್ಟು ಸುಂದರವಾಗಿ ಕಾಣಿಸುತ್ತಾಳೆ. ಕನ್ನಡದ ಈ 'ಗೌರಮ್ಮ' ಅಲ್ಲಿ ಮುಂಬೈ ಹುಡುಗಿಯರಿಗಿಂತಲೂ ಹೆಚ್ಚು ರೂಪ ಮತ್ತು ಮಾದಕತೆಯಿಂದ ಕಂಗೊಳಿಸಿದ್ದಾಳೆ. ಒಂದು ಹಾಡು ಮಾತ್ರ ಐಟಂ ಸಾಂಗ್‌ಗಿಂತಲೂ ಹೆಚ್ಚು ಉದ್ರೇಕಕಾರಿಯಾಗಿದೆ.



ಕನ್ನಡಿಗರ ನಷ್ಟ ತಮಿಳರ ಲಾಭ ಎಂದಷ್ಟೇ ಹೇಳಬಹುದಲ್ಲವೇ?!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4. Phone : ...
Fax : 26604536, E-mail :lankesh70@rediffmail.com, Printed at Rajhans Enter...